ಕನ್ನಡ ವಿಶ್ವವಿದ್ಯಾಲಯ ಹಂಪಿ
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ವಿದ್ಯಾರಣ್ಯ – 560276

ಎಂ.ಫಿಲ್ ಪದವಿಗಾಗಿ ಸಲ್ಲಿಸುತ್ತಿರುವ ಸಂಶೋಧನಾ ನಿಬಂಧ 2017–18

ವಿಷಯ :

"ಕೇಶವರೆಡ್ಡಿ ಹಂದ್ರಾಳರ ಕಥೆಗಳಲ್ಲಿ ಗ್ರಾಮ ಸಂಸ್ಕೃತಿ"
ಒಂದು ಅಧ್ಯಯನ

ಸಂಶೋಧನಾ ವಿದ್ಯಾರ್ಥಿ
ನರಸಿಂಹ ಎಸ್.ಎನ್.
ನೋಂದಣಿ ಸಂಖ್ಯೆ : 172001030037

ಮಾರ್ಗದರ್ಶಕರು
ಡಾ.ಶಿವರಾಜ ಬ್ಯಾಡರಹಳ್ಳಿ
ಸಹ ಪ್ರಾಧ್ಯಾಪಕರು
ಕನ್ನಡ ವಿಭಾಗ
ಆಕ್ಸ್‌ಫರ್ಡ್ ಪದವಿ ಕಾಲೇಜು
ಬೆಂಗಳೂರು

ಮಾನ್ಯತಾ ಸಂಸ್ಥೆ
ಕನ್ನಡ ಸಾಹಿತ್ಯ ಪರಿಷತ್ತು
ಕನ್ನಡ ಸಂಶೋಧನಾ ಕೇಂದ್ರ
ಪಂಪ ಮಹಾಕವಿ ರಸ್ತೆ
ಚಾಮರಾಜಪೇಟೆ, ಬೆಂಗಳೂರು – 560018

ಕನ್ನಡ ವಿಶ್ವವಿದ್ಯಾಲಯ ಹಂಪಿ
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ವಿದ್ಯಾರಣ್ಯ – 560276

ಎಂ.ಫಿಲ್ ಪದವಿಗಾಗಿ ಸಲ್ಲಿಸುತ್ತಿರುವ ಸಂಶೋಧನಾ ನಿಬಂಧ 2017–18

ವಿಷಯ :

"ಕೇಶವರೆಡ್ಡಿ ಹಂದ್ರಾಳರ ಕಥೆಗಳಲ್ಲಿ ಗ್ರಾಮ ಸಂಸ್ಕೃತಿ"

ಒಂದು ಅಧ್ಯಯನ

ಸಂಶೋಧನಾ ವಿದ್ಯಾರ್ಥಿ

ನರಸಿಂಹ ಎಸ್.ಎನ್.

ನೋಂದಣಿ ಸಂಖ್ಯೆ : 172001030037

ಮಾರ್ಗದರ್ಶಕರು

ಡಾ.ಶಿವರಾಜ ಬ್ಯಾಡರಹಳ್ಳಿ
ಸಹ ಪ್ರಾಧ್ಯಾಪಕರು
ಕನ್ನಡ ವಿಭಾಗ
ಆಕ್ಸ್‌ಫರ್ಡ್ ಪದವಿ ಕಾಲೇಜು
ಬೆಂಗಳೂರು

ಮಾನ್ಯತಾ ಸಂಸ್ಥೆ
ಕನ್ನಡ ಸಾಹಿತ್ಯ ಪರಿಷತ್ತು
ಕನ್ನಡ ಸಂಶೋಧನಾ ಕೇಂದ್ರ
ಪಂಪ ಮಹಾಕವಿ ರಸ್ತೆ
ಚಾಮರಾಜಪೇಟೆ, ಬೆಂಗಳೂರು – 560018

ಮಾರ್ಗದರ್ಶಕರ ದೃಢೀಕರಣ ಪತ್ರ

ಶ್ರೀ.ನರಸಿಂಹ ಎಸ್.ಎನ್ ಆದ ಇವರು ನನ್ನ ಮಾರ್ಗದರ್ಶನದಲ್ಲಿ ಅಧ್ಯಯನ ನಡೆಸಿದ **"ಕೇಶವರೆಡ್ಡಿ ಹಂದ್ರಾಳರ ಕಥೆಗಳಲ್ಲಿ ಗ್ರಾಮ ಸಂಸ್ಕೃತಿ" ಒಂದು ಅಧ್ಯಯನ** ಎಂಬ ಈ ಸಂಶೋಧನಾ ಪ್ರಬಂಧವನ್ನು ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ ಕನ್ನಡ ಸಾಹಿತ್ಯ ಅಧ್ಯಯನ ವಿಭಾಗಕ್ಕೆ ಸಲ್ಲಿಸುತ್ತಿದ್ದು, ಈ ಪ್ರಬಂಧವು ಮೂಲವಾಗಿದ್ದು, ಈ ಮೊದಲು ಇದನ್ನು ಇನ್ನಾವುದೇ ಪದವಿಗೆ ಸಲ್ಲಿಸಿರುವುದಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ.

ಮಾರ್ಗದರ್ಶಕರು

ದಿನಾಂಕ : 03-10-2018.

ಸ್ಥಳ : ಬೆಂಗಳೂರು

(ಡಾ.ಶಿವರಾಜ್ ಬ್ಯಾಡರಹಳ್ಳಿ)

ಸಹಪ್ರಾಧ್ಯಾಪಕರು ಮತ್ತು ಮಾರ್ಗದರ್ಶಕರ
ಆಕ್ಸ್‌ಫರ್ಡ್ ಕಾಲೇಜ್ ಆಫ್ ಬಿಸಿನೆಸ್ ಮ್ಯಾನೇಜ್‌ಮೆಂ
ಎಚ್.ಎಸ್.ಆರ್. ಬಡಾವಣೆ, ಬೆಂಗಳೂರು - 560 10

ಸಂಶೋಧಕರ ದೃಢೀಕರಣ ಪತ್ರ

ಶ್ರೀ.ನರಸಿಂಹ ಎಸ್.ಎನ್. ಆದ ನಾನು **"ಕೇಶವರೆಡ್ಡಿ ಹಂದ್ರಾಳರ ಕಥೆಗಳಲ್ಲಿ ಗ್ರಾಮ ಸಂಸ್ಕೃತಿ" ಒಂದು ಅಧ್ಯಯನ,** ಎಂಬ ಈ ಪ್ರಬಂಧವನ್ನು **ಡಾ.ಶಿವರಾಜ ಬ್ಯಾಡರಹಳ್ಳಿ,** ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಆಕ್ಸ್‌ಫರ್ಡ್ ಪದವಿ ಕಾಲೇಜ್, ಬೆಂಗಳೂರು. ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದೇನೆ. ಎಂ.ಫಿಲ್ ಪದವಿಗಾಗಿ ಸಾಹಿತ್ಯ ಅಧ್ಯಯನ ವಿಭಾಗಕ್ಕೆ ಸಲ್ಲಿಸುತ್ತಿದ್ದು, ಈ ಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ.

ದಿನಾಂಕ : 03-10-2018

ಸ್ಥಳ : ಬೆಂಗಳೂರು

ಸಂಶೋಧನಾ ವಿದ್ಯಾರ್ಥಿ

S.N. N

(ನರಸಿಂಹ ಎಸ್.ಎನ್.)

ಅಧ್ಯಾಯ –೧

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಅಧ್ಯಾಯ – ೧

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಪೀಠಿಕೆ :

ಕನ್ನಡ ಕಥಾ ಸಾಹಿತ್ಯದಲ್ಲಿ ಕೇಶವರೆಡ್ಡಿ ಹಂದ್ರಾಳರ ಕಥೆಗಳು ತುಂಬಾ ಜನಪ್ರಿಯವಾಗಿವೆ. ಗ್ರಾಮೀಣ ಹಿನ್ನೆಲೆಯ ದಟ್ಟವಾದ ಜೀವನಾನುಭವವನ್ನು ಪಡೆದಿರುವ ಹಂದ್ರಾಳರು ತಮ್ಮ ಕಥನ ವಿನ್ಯಾಸದಲ್ಲಿ ಸುಭಗವಾದ ಶೈಲಿಯಲ್ಲಿ ಓದುಗರಿಗೆ ಒಂದು ವಿಶೇಷವಾದ ಅನುಭವವಾಗುವ ರೀತಿಯಲ್ಲಿ ಕಥೆಗಳನ್ನು ಹೆಣೆಯುತ್ತಿದ್ದಾರೆ. ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಗ್ರಾಮ ಭಾರತವನ್ನು ಕುರಿತು ಸಾಕಷ್ಟು ಕಥೆಗಳು ಬಂದಿದ್ದರು. ಹಂದ್ರಾಳರ ಕಥೆಗೆ ವಿಶೇಷವಾದ ಮನ್ನಣೆ ಇದೆ. ಬಳಸುವ ಭಾಷೆ, ಶೈಲಿ, ಕಥನವಿನ್ಯಾಸ, ತಂತ್ರ ಇವುಗಳಿಂದಾಗಿ ಅವರ ಕಥೆಗಳಿಗೆ ಒಂದು ರೀತಿಯ ಓದಿಸಿಕೊಳ್ಳುವ ಆಕರ್ಷಕ ಶಕ್ತಿ ಇದೆ. ಒಬ್ಬರ ಅನುಭವ ಹಲವರ ಅನುಭವದಿಂದಾಗಿ ಕೆಲವೊಮ್ಮೆ ಸಾರ್ವತ್ರಿಕವಾಗಿ ಅನುಭವಿಸಿದಂತೆ ಭಾಸವಾಗುವುದುಂಟು. ಆದ್ದರಿಂದ ಹೇಳುವ ಕಥೆಯನ್ನು ನೈಜವಾಗಿ ಚಿತ್ರಿಸುವ ಅನುಭವಿಸಿದ್ದನ್ನು ತನಗೆ ತಾನೇ ಒಪ್ಪಿಕೊಳ್ಳುವ ಅವರ ಕಥೆಯ ಚೌಕಟ್ಟಿನ ಕ್ರಮ ಮನಸ್ಸಿಗೆ ತಟ್ಟುತ್ತದೆ.

ಇಂದು ಕನ್ನಡ ಕಥಾಸಾಹಿತ್ಯವನ್ನು ಕುರಿತು ಸಾಕಷ್ಟು ಸಂಶೋಧನೆಗಳು ನಡೆದಿವೆ. ಆದರೆ ಕೇಶವರೆಡ್ಡಿ ಹಂದ್ರಾಳ ಅವರ ಕಥಾ ಸಾಹಿತ್ಯದ ಕಡೆ ಯಾವುದೇ ರೀತಿಯ ಸಂಶೋಧನೆಗಳು ನಡೆದಿಲ್ಲ. ಈ ಒಂದು ನಿಟ್ಟಿನಲ್ಲಿ ನನಗೆ ಪ್ರಮುಖವೆನಿಸಿದ್ದು "ಕೇಶವರೆಡ್ಡಿ ಹಂದ್ರಾಳರ ಕಥೆಗಳಲ್ಲಿ ಗ್ರಾಮ ಸಂಸ್ಕೃತಿಯ ಕಥಾ ವಿನ್ಯಾಸ".

ಗ್ರಾಮೀಣ ಸಂವೇದನೆಯ ಪ್ರತಿಯೊಂದು ಅನುಭವವನ್ನು ಹೇಳುವಂಥ, ಕೇಳುವಂಥ ಕಥೆಯನ್ನಾಗಿಸಬಲ್ಲ ಸಾಮರ್ಥ್ಯ ಹಂದ್ರಾಳರಲ್ಲಿ ಕಾಣುತ್ತೇವೆ. ಕಥೆಯನ್ನು ಹೇಳುತ್ತಲೇ ನಗಬಲ್ಲ ಹಾಗೂ ಕೇಳಿಸಿಕೊಳ್ಳುತ್ತಿರುವವರಿಗೆ ನಗಿಸಬಲ್ಲ ಸಾಮರ್ಥ್ಯ ಹಂದ್ರಾಳರ ಕಥೆಗಳಲ್ಲಿ ನೋಡಬಹುದಾಗಿದೆ. ಕನ್ನಡ ಕಥಾಸಾಹಿತ್ಯಕ್ಕೆ ೩೦೦ಕ್ಕಿಂತ ಹೆಚ್ಚು ಕಥೆಗಳನ್ನು ಕೊಟ್ಟಿರುವ ಹಂದ್ರಾಳರವರು ತಮ್ಮ ಭಿನ್ನ ಕಥಾಶೈಲಿಯಿಂದಲೇ ಓದುಗರ ಗಮನವನ್ನು ಸೆಳೆಯುತ್ತಾರೆ. ಹಂದ್ರಾಳರವರು ವಾಣಿಜ್ಯ ತೆರಿಗೆ ಇಲಾಖೆಯಲ್ಲಿ ಅಧಿಕಾರಿಯಾಗಿರುವ ಹಂದ್ರಾಳರ ಕಥೆಗಳ ವಸ್ತು ದ್ರವ್ಯಗಳು ಅವರ ವೃತ್ತಿ ಮೂಲದಿಂದ ಬಂದವಲ್ಲ, ಬದಲಿಗೆ ಇಲ್ಲಿನ ಎಲ್ಲಾ ಕಥೆಗಳು ಅವರ ಬಾಲ್ಯದ ಬದುಕಿನ ಸುತ್ತಮುತ್ತಲಿನ ಪರಿಸರದಿಂದ ಬಂದಿದೆ. ಸಾಮಾಜಿಕ ಜೀವನದ ಬದುಕಿನ ಒಳಹೊರಗೆಲ್ಲವನ್ನೂ ಕಣ್ಣಿಗೆ ಕಟ್ಟುವಂತೆ ಚಿತ್ರಿಸುತ್ತಾ ಕನ್ನಡ ಓದುಗರಿಗೆ ವಿಶಿಷ್ಟವಾದ ರೀತಿಯಲ್ಲಿ ಉಣಬಡಿಸುತ್ತಿದ್ದಾರೆ. ಇವರು ಕಥೆಗಳಿಗೆ ಬಳಸಿಕೊಂಡಿರುವ ವಸ್ತುಗಳು ಗ್ರಾಮೀಣ ಜನರನ್ನು ಕುರಿತದ್ದಾಗಿದ್ದು ಹಳ್ಳಿಯ ಸೊಗಡನ್ನು ಎತ್ತಿ ತೋರಿಸುತ್ತಿದೆ. ಈ ಒಂದು ನಿಟ್ಟಿನಲ್ಲಿ "ಕೇಶವರೆಡ್ಡಿ ಹಂದ್ರಾಳರ ಕಥೆಗಳಲ್ಲಿ ಗ್ರಾಮ ಸಂಸ್ಕೃತಿಯ ಕಥಾ ವಿನ್ಯಾಸ" ಒಂದು ಅಧ್ಯಯನ ಎಂಬ ವಿಷಯ ವಸ್ತುವನ್ನು ಸಂಶೋಧನೆಗೆ ಆಯ್ಕೆ ಮಾಡಿಕೊಂಡಿರುತ್ತೇನೆ.

ಉದ್ದೇಶ :

ಹಂದ್ರಾಳರವರು ಗ್ರಾಮೀಣ ಸಂವೇದನೆಯ ಕಥೆಯನ್ನಾಗಿಸಬಲ್ಲ ಸಾಮರ್ಥ್ಯ ಇವರಿಗಿದೆ. ಇವರು ಕಟ್ಟಿಕೊಟ್ಟಿರುವ ಕಥಾ ಜಗತ್ತು ಯಾವ ಬಗೆಯದೆಂದು ಅರ್ಥ ಮಾಡಿಕೊಳ್ಳುವ ಪ್ರಯತ್ನ ಹೊಸ ಸಂಕಲನಕ್ಕೆ ಒಂದು ಪೂರ್ವಪೀಠಿಕೆಯಾಗಿದೆ. ಕಥೆಗಾರನೊಬ್ಬನ ಮೂಲ ಕಾಳಜಿಗಳು ಹಾಗೂ ಶೈಲಿಯನ್ನು ಅರ್ಥ ಮಾಡಿಕೊಳ್ಳಲು ಬೇಕಾಗಬಹುದಾದ ಕಥೆಗಳ ಸಂಖ್ಯೆಗಿಂತಲೂ ಹೆಚ್ಚಾಗಿಯೇ ಬರೆದಿದ್ದಾರೆ.

ಹಂದ್ರಾಳರ ಕಥೆಗಳಲ್ಲಿ ಮುಖ್ಯ ಕಾಳಜಿಗಳು ಹಲವಾರು ನಮ್ಮ ಶಿಕ್ಷಣ ಪದ್ಧತಿ, ಅಂತರ್ಜಾತಿಯ ಮದುವೆ, ಸ್ವತಂತ್ರ ಭಾರತದ ರೋಗಗ್ರಸ್ತ ಅಧಿಕಾರಶಾಹಿ ವ್ಯವಸ್ಥೆ ಹಾಗೂ ಕುಸಿಯುತ್ತಿರುವ ಸಾಮಾಜಿಕ ಮೌಲ್ಯಗಳು ಮತ್ತು ಶ್ರೀ ಸಾಮಾನ್ಯ ಹೆಣ್ಣು-ಗಂಡಿನ ಸಂಬಂಧ, ಲೈಂಗಿಕತೆ ಮತ್ತು ಆರ್ಥಿಕ ಸಂಗತಿಗಳು, ಯುದ್ಧ ಮತ್ತು ಬದುಕು, ಜಮೀನ್ದಾರಿ ದೌಲತ್ತು, ರಾಜಕಾರಣ ಕ್ರಾಂತಿಪರ ಎಡಪಂಥೀಯ ವಿಚಾರ ಹಾಗೂ ಅಹಿಂಸಾಪರ, ಇವುಗಳು ಹಂದ್ರಾಳರ ಕಥೆಗಳಲ್ಲಿ ಹೆಚ್ಚಿನದ್ದಾಗಿ ಇದೆ. ದಾರಿದ್ರ್ಯದ ಅವತಾರಗಳನ್ನು ತನ್ನದೇ ಆದ ರೀತಿಯಲ್ಲಿ ಹೊಸ ಮೆರಗನ್ನು ಮತ್ತು ಛಾಪನ್ನು ತೆರೆದಿಡುವ ಕಥೆಗಾರರು ಹಂದ್ರಾಳರು.

ಹಂದ್ರಾಳರ ಕಥೆಗಳಲ್ಲಿ ಹಳ್ಳಿಗಾಡಿನ ಸೌಂದರ್ಯ, ಬಡತನ, ಭಾಷೆಯ ಚೆಲುವು ಎಲ್ಲವು ಒಳಗೊಂಡಿದೆ. ಸಾಮಾಜಿಕ ಹಾಗೂ ವೈಯಕ್ತಿಕ ಜೀವನಕ್ಕೆ ದುಷ್ಟವಾದುದನ್ನು ಕಥಾವಸ್ತುವಿಗೆ ಒಡ್ಡಿ ಅದರ ಬೇರನ್ನು ಕಿತ್ತೆಸೆಯಲು ಯತ್ನಿಸುವುದು ಇವರ ಕಥನ ಕಲೆಯ ಗಂಭೀರ ಉದ್ದೇಶವನ್ನು ಸೂಚಿಸುತ್ತದೆ. ಈ ಹಿನ್ನಲೆಯಲ್ಲೇ ಸಂಶೋಧನೆ ಮಾಡುವ ಉದ್ದೇಶವಾಗಿದೆ.

ವ್ಯಾಪ್ತಿ :

ಹಂದ್ರಾಳರ ಕಥೆಗಳಲ್ಲಿ ಗ್ರಾಮೀಣ ಜೀವನದ ಮನುಷ್ಯ ಪ್ರೀತಿಗಳು ಕಥೆಗಳ ಪಾತ್ರಗಳಲ್ಲೂ ಕಂಡುಬರುತ್ತದೆ. ಗ್ರಾಮೀಣ ಬದುಕೇ ಅವರ ಬಹುತೇಕ ಕಥೆಗಳ ವಸ್ತುವಾಗಿದ್ದರೂ ಅವರದು ಪ್ರಸಂಗ ಆಧಾರಿತ ಕಥನ ಅಲ್ಲ. ಇದಕ್ಕೆ ಅವರ ಆಧುನಿಕ ಸಂವೇದನೆ, ವಿಸ್ತಾರವಾದ ಅನುಭವ ಮತ್ತು ಸೈದ್ಧಾಂತಿಕ ಚಿಂತನೆಗಳೇ ಮುಖ್ಯ ಕಾರಣ. ಹಂದ್ರಾಳರ ಕಥಾ ಚೌಕಟ್ಟಿನಲ್ಲಿಯೇ ಕಥೆಗಳ ಬಗ್ಗೆ ಚರ್ಚಿಸಲಾಗುವುದು.

ಹಂದ್ರಾಳರ ೩೦೦ ಕಥೆಗಳಲ್ಲಿಯೇ ಆರಿಸಿಕೊಂಡು ನನ್ನ ಸಂಶೋಧನಾ ವ್ಯಾಪ್ತಿಗೆ ಬಳಸಿಕೊಳ್ಳಲಾಗುತ್ತದೆ. ಇವರ ಕಥೆಗಳು ಇಂದಿನ ಸಮಾಜಕ್ಕೆ ಬಹಳ ಮುಖ್ಯವಾದುದ್ದಾಗಿದೆ. ಗ್ರಾಮೀಣ ಜೀವನವನ್ನು ಮರೆಯುತ್ತಿರುವ ಸಂದರ್ಭದಲ್ಲಿ ನನ್ನ ಸಂಶೋಧನೆಯು ಮುಖ್ಯವಾಗುತ್ತದೆ.

ಇದುವರೆಗೂ ನನ್ನ ಗಮನಕ್ಕೆ ಬಂದ ಹಾಗೆ ಕೇಶವರೆಡ್ಡಿ ಹಂದ್ರಾಳರ ಕಥೆಗಳ ಬಗ್ಗೆ ಸಂಶೋಧನೆಗಳು ನಡೆದಿಲ್ಲವಾದ್ದರಿಂದ ಅವರ ಕಥೆಗಳಲ್ಲಿ ಗ್ರಾಮೀಣ ಜನಜೀವನದ ಚಿತ್ರಣವನ್ನು ಕಟ್ಟಿಕೊಡುವ ಪ್ರಯತ್ನವನ್ನು ನನ್ನ ಸಂಶೋಧನೆಯ ವ್ಯಾಪ್ತಿಯಲ್ಲಿ ಮೂಲಕ ಕೈಗೊಳ್ಳಲಾಗುವುದು.

ಅಧ್ಯಾಯ –೨

ಹಂದ್ರಾಳರ ಕಥೆಗಳ ಸಮೀಕ್ಷೆ

ಅಧ್ಯಾಯ – ೨

ಹಂದ್ರಾಳರ ಕಥೆಗಳ ಸಮೀಕ್ಷೆ

ಸಾಹಿತ್ಯ ಪರಂಪರೆಯಲ್ಲಿ ಸಣ್ಣ ಕತೆಗಳ ಸ್ವರೂಪವು ಮಹತ್ವದ್ದಾಗಿದೆ. ಸಣ್ಣಕತೆಗಳು ಜನರೊಡನೆ ಹುಟ್ಟಿ ಬೆಳೆದು ಬಂದಿರುವುದು ಹಾಗೂ ಪ್ರತಿಯೊಂದು ಜನಾಂಗಗಳಲ್ಲಿಯೂ ಸಹ ಕತೆಗಳು ದೊರಕುತ್ತವೆ. ಕೆಲವು ಜನರು ಹೊತ್ತು ಕಳೆಯಲು ಒಟ್ಟಿಗೆ ಸೇರಿದರೆಂದರೆ ಅಲ್ಲಿ ಕತೆಯ ಉಗಮವಾಗುತ್ತದೆ. ಜಗತ್ತಿನ ಮೊದಲ ಕತೆಗಳು ನಮ್ಮ ವೇದಗಳಲ್ಲಿ ಈಜಿಪ್ಟಿಯನ್ನರ ಸಾಹಿತ್ಯದಲ್ಲಿ ಕ್ರೈಸ್ತರ ಬೈಬಲ್ಲಿನಲ್ಲಿ ದೊರಕುತ್ತವೆ. ಉಪನಿಷತ್ತುಗಳು ಸಹ ಅನೇಕ ಕತೆಗಳನ್ನು ಹೇಳುತ್ತವೆ. ರಾಮಾಯಣ, ಮಹಾಭಾರತಗಳಲ್ಲಿ ಪ್ರಾಸಂಗಿಕವಾಗಿ ಹಲವು ಕತೆಗಳು ಬರುತ್ತವೆ. ಬೌದ್ಧರ ಜಾತಕ ಕತೆಗಳು ಮತ್ತು ಜೈನರ ನೀತಿ ಕತೆಗಳು ಬಳಿಕ ಬಂದವುಗಳು. 'ಪಂಚತಂತ್ರ' ಭರತಖಂಡದ ಒಂದು ಅಪೂರ್ವ ಗ್ರಂಥವಾಗಿದೆ. ಅದರ ಕತೆಗಳು ಬಹಳ ಹಿಂದೆಯೇ ಪ್ರಸಿದ್ಧಿಯನ್ನು ಪಡೆದಿದ್ದವು. ಪೌರಾಣಿಕವಾದ ಸುಂದರವಾದ ಕತೆಗಳು ನಮಗೆ ಬಹು ಹಿಂದೆಯೇ ದೊರಕಿದ್ದವು ಎಂದು ತಿಳಿಯಬಹುದಾಗಿದೆ.

ಸಣ್ಣಕತೆಯು 'ಹತ್ತೊಂಬತ್ತನೆಯ ಶತಮಾನದ ಪೂರ್ವದಲ್ಲಿ ಎಡ್ಗರ್ ಆಲನ್ ಪೋ ಎಂಬ ಅಮೇರಿಕನ್ ತರುಣನು ನಾವು ಸಣ್ಣಕತೆಯೆಂದು ಕರೆಯುವ ಸಾಹಿತ್ಯ ರೂಪವನ್ನು ಸೃಷ್ಟಿಸಿದನು. ಹಾಗೂ ಅದಕ್ಕೆ ಶಾಸ್ತ್ರೀಯ ಸಂಸ್ಕಾರವಿಟ್ಟು ಅದರ ರೂಪು ರೇಖೆಗಳನ್ನು ಅದರ ನಿಯಮ ಅನುಕೂಲಗಳನ್ನು ಸ್ಪಷ್ಟಪಡಿಸಿದನು. ಅವುಗಳನ್ನು ಅನುಸರಿಸಿ ತಾನೇ ಹಲವು ಅತ್ಯುತ್ತಮ ಸಣ್ಣಕತೆಗಳನ್ನು ರಚಿಸಿ ಪ್ರಪಂಚದ ಸಣ್ಣಕತೆಗಾರರ ಮೂಲ ಪುರುಷನಾದನು.

ಸಣ್ಣಕತೆಯು ನಮ್ಮ ಭಾರತದಲ್ಲಿಯೂ ಉಗಮವಾಯಿತು. ಪ್ರಥಮವಾಗಿ ಬಂಗಾಳದಲ್ಲಿ ಮೂಡಿತು. ರವೀಂದ್ರನಾಥ ಟಾಗೋರ್, ಶರತ್‌ಚಂದ್ರ ಚಟರ್ಜಿ, ಸ್ವರ್ಣಕುಮಾರಿದೇವಿ, ಶಾಂತದೇವಿ, ಸೀತಾದೇವಿ ಇವರಿಂದ ಬಂಗಾಳದಲ್ಲಿ ಸಣ್ಣಕತೆಗಳು ಸಾಲುಸಾಲಾಗಿ ಬಂದಿವೆ. ಇದರ ನಂತರ ಕರ್ನಾಟಕಕ್ಕೂ ಬಂದಿತು.

ಕನ್ನಡ ಸಣ್ಣಕತೆಯ ಸ್ವರೂಪವು ಕನ್ನಡ ವೈಶಿಷ್ಟ್ಯದಿಂದ ಕೂಡಿದ ದೇಶಕಾಲಾತೀತ ಕಲಾರೂಪವಾದ ಸಣ್ಣಕತೆಯ ಸ್ವರೂಪ ಮಹತ್ವದ್ದಾಗಿದೆ. ಕನ್ನಡದ ನವೋದಯ ಸಂದರ್ಭದಲ್ಲಿ ಇಂಗ್ಲೀಷ್ ಸಾಹಿತ್ಯದ ಪ್ರಭಾವದಿಂದ ಕನ್ನಡಕ್ಕೆ ಪ್ರವೇಶ ಮಾಡಿದ ಹೊಸ ಸಾಹಿತ್ಯ ಪ್ರಕಾರವೇ ಸಣ್ಣಕತೆ ಎನ್ನಬಹುದು. "೧೯೦೦ರ ಸುಮಾರಿಗೆ ಪ್ರಕಟವಾದ ಪಂಜೆ ಮಂಗೇಶರಾಯರ ಹಾಸ್ಯ ಪ್ರಧಾನವಾದ ಕತೆ "ಕಮಲಾಪುರದ ಹೋಟ್ಲಿನಲ್ಲಿ" ಕನ್ನಡದ ಮೊದಲ ಸಣ್ಣಕತೆಯಾಗಿದೆ. ಮುಂದಿನ ದಶಕದಲ್ಲಿ ಮಾಸ್ತಿ ವೆಂಕಟೇಶ ಅಯ್ಯಂಗಾರ್, ಎಂ.ಎನ್.ಕಾಮತ್ ಮತ್ತು ಕೆರೂರು ವಾಸುದೇವಾಚಾರ್ಯರು ಕಥಾರಚನೆ ಮಾಡತೊಡಗಿದರು. ಮಾಸ್ತಿಯವರ 'ರಂಗನಮದುವೆ' ೧೯೧೧ರಲ್ಲಿ ಪ್ರಕಟವಾಗಿ ಕನ್ನಡದ ಮೊದಲ ಕಥಾಸಂಕಲನ ಅವರ 'ಕೆಲವು ಸಣ್ಣಕತೆಗಳು' ೧೯೨೦ರಲ್ಲಿ ಹೊರಬಂದಿತು. ಈ ಹೊಸ ಪ್ರಕಾರಕ್ಕೆ ಪೂರ್ಣ ಆಧುನಿಕ ರೂಪವನ್ನು ಕೊಟ್ಟು ಅದನ್ನು ಒಂದು ಸಮಗ್ರ ಜೀವನ ದರ್ಶನದ ಅಭಿವ್ಯಕ್ತಿಗೆ ಮಧ್ಯಮವನ್ನಾಗಿ

ಮಾಡಿಕೊಂಡು, ಕನ್ನಡದಲ್ಲಿ ಅದರ ಒಂದು ಪರಂಪರೆಯನ್ನೇ ಕಟ್ಟಿಕೊಟ್ಟ ಮಾಸ್ತಿಯವರನ್ನು 'ಕನ್ನಡ ಸಣ್ಣಕತೆಯ ಜನಕ' ಎಂದು ಸಹಜವಾಗಿಯೇ ನಾವು ಗುರುತಿಸುತ್ತೇವೆ"[೧]

"ಸಣ್ಣಕತೆಗಳು ಎಷ್ಟೇ ಜನಪ್ರಿಯವಾಗಿದ್ದರೂ, ಬಹುಶಃ ಕತೆಗಳ ವೈವಿಧ್ಯದಿಂದಾಗಿ ವಿಮರ್ಶೆಯಲ್ಲಿ ಅದನ್ನು ಕುರಿತ ತಾತ್ವಿಕ ಚಿಂತನೆ ನಡೆದಿರುವುದು ಬಹಳ ಕಡಿಮೆ" ಬೇರೆ ಎಲ್ಲಾ ಸಾಹಿತ್ಯಗಳಲ್ಲೂ ವಿಮರ್ಶೆಗಳನ್ನು ನೋಡಬಹುದು. ಆದರೆ ಕತೆಗಳಲ್ಲಿ ವಿಮರ್ಶಿಸುವವರು ನಮಗೆ ತಿಳಿಯುವುದಿಲ್ಲ. ಸಣ್ಣಕತೆಯು ಒಂದು ನಿಟ್ಟಿನಲ್ಲಿ ಪರಿಮಿತವಾಗಿ ಅದರ ಅವಕಾಶದಲ್ಲಿ ಒಂದು ಪ್ರಪಂಚವನ್ನು ಸೃಷ್ಟಿಸಬೇಕು. ನಿತ್ಯದ ಬದುಕಿನ ಪ್ರಾತಿನಿಧಿಕವಾದ ಮಾದರಿಯಾಗಬೇಕು.

"ಸಣ್ಣಕತೆಯಲ್ಲಿ ಪರಿಣಾಮ ಮುಖ್ಯವೇ ಹೊರತು ಸಂಭಾವ್ಯತೆಯಲ್ಲಿ, ವಿರೋಧಾಭಾಸ ಶಿಲ್ಪ, ನಾಟಕೀಯ, ವಿನ್ಯಾಸ ಮತ್ತು ಮಹತ್ವಪೂರ್ಣ ಅನುಭವಗಳ ಬಗ್ಗೆ ಓದುಗನ ಆಕಾಂಕ್ಷೆಗಳನ್ನು ಪೂರೈಸಬೇಕು. ಭ್ರಮೆ, ವಾಸ್ತವಿಕತೆ, ಸಹಜತೆ ಈ ಯಾವ ವಿಧದಲ್ಲಿಯಾದರೂ ಕತೆಯನ್ನು ರಚಿಸಬಹುದು. ಕತೆಯ ಭಾಷೆ 'ಮಿತ'ವಾದದ್ದಾಗಿರಬೇಕು. ಬಾಹ್ಯ ವಾಸ್ತವಿಕತೆಯನ್ನು ನಕಲು ಮಾಡುವುದಕ್ಕಿಂತ ಮಿಗಿಲಾಗಿ ಕತೆಯ ಭಾಷೆಯು ಓದುಗನಿಗೆ "ಸೂಚನೆಗಳ ಮುಖಾಂತರ ಸಾಮಾನ್ಯ ದರ್ಶನ ನೀಡುವಂತಿರಬೇಕು"[೨]

ಕನ್ನಡದ ಕಥಾಸಾಹಿತ್ಯಕ್ಕೆ ಅಪಾರವಾದ ಕೊಡುಗೆಗಳನ್ನು ಹಂದ್ರಾಳರು ನೀಡಿದ್ದಾರೆ. ಕೇಶವರೆಡ್ಡಿ ಹಂದ್ರಾಳರು ಹುಟ್ಟಿದ್ದು ೨೨-೦೭-೧೯೫೮ರಲ್ಲಿ. ತುಮಕೂರು ಜಿಲ್ಲೆಯ ಮಧುಗಿರಿ ತಾಲ್ಲೂಕಿನ ಗ್ರಾಮವಾದ ಹಂದ್ರಾಳದಲ್ಲಿ ಜನಿಸಿದರು. ಅಪ್ಪಟ ಬೇಸಾಯದ ಕುಟುಂಬ. ತಾತ ನರಸಿಂಹರೆಡ್ಡಿ ಆಂಧ್ರದ ಅನಂತಪುರ ಜಿಲ್ಲೆಯ ಹಳ್ಳಿಯೊಂದರ ಜಮೀನುದಾರ. ಕಳೆದ ಶತಮಾನದ ಇಪ್ಪತ್ತರ ದಶಕದಲ್ಲಿ ಆ ಸೀಮೆಯ ಶೋಷಕ ಇಂಗ್ಲಿಷ್ ಕಲೆಕ್ಟರ್‌ನ ಖೂನಿ, ಬ್ರಿಟೀಷ್ ಆಡಳಿತದ ಭೀಕರ ಶಿಕ್ಷೆಗೆ ಹೆದರಿ ರಾತ್ರೋರಾತ್ರಿ ಕರ್ನಾಟಕದ ಕಡೆಗೆ ಪಲಾಯನ. ಕಾಪುರೆಡ್ಡಿಯಾಗಿದ್ದ ಅವರ ತಾತ ಮದುವೆಯಾಗಿದ್ದು ಕಮ್ಮಜಾತಿಯ ಅಜ್ಜಿಯನ್ನು ೧೯೪೭ರ ತನಕ ಕಾಡಿನಲ್ಲಿ ಭೂಗತರಾಗಿ ಬಾಳಿದ್ದು ಅವರು ಕಾಡುಗೊಲ್ಲರ ಸಮುದಾಯದ ನಡುವೆ.

ಸ್ವಾತಂತ್ರ್ಯನಂತರ ಹಂದ್ರಾಳರು ಹಂದ್ರಾಳಕ್ಕೆ ಬಂದು ನೆಲೆಸಿದರು. ಹಂದ್ರಾಳರ ತಂದೆ-ತಾಯಿಗಳಿಬ್ಬರು ಅವಿದ್ಯಾವಂತರು. ಹಂದ್ರಾಳರ ಬಾಲ್ಯ ಜೀವನವೆಲ್ಲ ಹಂದ್ರಾಳದಲ್ಲಿ ನಡೆಯಿತು. ಬೆಂಗಳೂರಿನಲ್ಲಿ ವಿದ್ಯಾಭ್ಯಾಸ. ಅರ್ಥಶಾಸ್ತ್ರದಲ್ಲಿ ಎಂ.ಎ ಸಾಹಿತ್ಯದ ಓದು, ಬರವಣಿಗೆಯಲ್ಲಿ ಆಸಕ್ತಿ. ಏಳು ವರ್ಷಗಳ ಕಾಲ ಉಪನ್ಯಾಸಕ ವೃತ್ತಿಯನ್ನು ಪೂರೈಸಿ, ನಂತರ ವಾಣಿಜ್ಯ ತೆರಿಗೆ ಇಲಾಖೆಯಲ್ಲಿ ಡೆಪ್ಯೂಟಿ ಕಮೀಷನರ್ ಆಗಿ ಕೆಲಸವನ್ನು ನಿರ್ವಹಿಸುತ್ತಿದ್ದರು. ಹಂದ್ರಾಳರು ಸಾಹಿತ್ಯದ ಅಭಿರುಚಿಯನ್ನು ಬಿಡದೆ, ೩೦೦ಕ್ಕೂ ಹೆಚ್ಚು ಕಥೆಗಳನ್ನು ಬರೆದಿದ್ದಾರೆ. "ಹಂದ್ರಾಳ, ಅಂತಃಪುರ, ಬರದ ನಾಡಲ್ಲಿ ಬೆಳದಿಂಗಳು, ಜಡೆಗೆ ಗುಲ್ ಮೊಹರ್ ಕೈಗಳು, ಮೋಡ ಕರಗುವ ಮುನ್ನ, ಒಂದು ಹಿಡಿ ಮಣ್ಣು, ಬಾರಕ್ಕ ಬೆಳದಿಂಗಳೆ, ಕಥಾಸಂಕಲನಗಳ ಪ್ರಕಟ ಮಾಡಿದ್ದಾರೆ.

'ಒಕ್ಕಲ ಒನಪು' ಹಂದ್ರಾಳರ ಹಳ್ಳಿಗಾಡಿನ ಬದುಕಿನ ಬಾಲ್ಯದ ನೆನಪುಗಳ ಚಿತ್ತಾರ ೨೦೦೭ರಲ್ಲಿ "ಯುದ್ಧ ಮತ್ತು ಸ್ವಾತಂತ್ರ್ಯ"ಕ್ಕೆ ಕಥೆ ಮತ್ತು ಸಂಭಾಷಣೆಯ ಸಿನಿಮಾಕ್ಕೆ ರಾಜ್ಯ ಪ್ರಶಸ್ತಿಯು ಲಭಿಸಿತು.

“ಒಂದು ಹಿಡಿ ಮಣ್ಣು” ಮತ್ತು ‘ಒಕ್ಕಲು ಒನಪು’ ಸಂಕಲನಗಳಿಗೆ ಕ್ರಮವಾಗಿ ೨೦೦೫ರ ಮತ್ತು ೨೦೦೬ರರ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿತು. ‘ಮಣ್ಣಿನ ಗೋಡೆಗಳು’ ಹಂದ್ರಾಳರ ಇದುವರೆಗಿನ ಕಥೆಗಳಿಂದ ಆಯ್ದು ಎಪ್ಪತ್ತು ಕಥೆಗಳ ಸಂಕಲನ, ಮೂರು ವರ್ಷಗಳಿಂದ ಬರೆದ ಹದಿನೆಂಟು ಕಥೆಗಳ ಸಂಕಲನ ‘ಅಲ್ಲಮನ ಆತ್ಮಲಿಂಗ’, ‘ರಾಜಧಾನಿಯ ರಸ್ತೆಗಳಲ್ಲಿ’ ಇವರ ಬೆಂಗಳೂರು ಜೀವನದ ಅನುಭವಗಳಿಂದ ಕೂಡಿದೆ. ‘ಮರೆತ ಭಾರತ’ ಗ್ರಾಮ ಭಾರತದ ಸಮೃದ್ಧ ಸಂವೇದನೆಗಳಿಂದ ಕೂಡಿದ ಒಂದು ರೀತಿಯ ಆತ್ಮಕಥನವಾಗಿದೆ. ಈ ರೀತಿಯಾಗಿ ಕನ್ನಡ ಕಥಾಲೋಕಕ್ಕೆ ಕಾಲಿಟ್ಟ ಹಂದ್ರಾಳರು ಕಥಾಜಗತ್ತಿನಲ್ಲಿ ಒಳ್ಳೆಯ ಕೃಷಿಯನ್ನು ಮಾಡಿದ್ದಾರೆ.

ಕತೆಗಳ ಮೌಖಿಕ ಪರಂಪರೆಯನ್ನೇ ಹೊಸ ಕಲಾತ್ಮಕ ಅಗತ್ಯಕ್ಕೆ ಹಂದ್ರಾಳರು ಬಳಸಿಕೊಂಡಿದ್ದಾರೆ. ಕತೆಯ ಕ್ರಿಯೆಯನ್ನು ದೂರದಲ್ಲಿಟ್ಟು ವಸ್ತುನಿಷ್ಠವಾಗಿ ಅದನ್ನು ಪರಿಭಾವಿಸಲೂ ಅದನ್ನು ಬೆಲೆಗಟ್ಟಲು ಬೇರೆ ದೃಷ್ಟಿಕೋನಗಳನ್ನು ಒದಗಿಸಲು ಅದು ಅವರಿಗೆ ನೆರವಾಯಿತು. ಹಂದ್ರಾಳರದು ವಾಸ್ತವಿಕ ಮಾರ್ಗ, ಬದುಕನ್ನು ಯಥಾವತ್ತಾಗಿ ಚಿತ್ರಿಸಲು ಅವರು ಬದ್ಧ. ಅವರದು ನೇರ ನಿರೂಪಣೆ, ಅವರ ಶೈಲಿ ಸರಳ, ಪಾರದರ್ಶಕ, ತೀರಾ ಅವಶ್ಯಕವೆನಿಸಿದ ಸಂದರ್ಭಗಳಲ್ಲಿ ಸಂಕೇತ ಪ್ರತಿಮೆಗಳು ಬಳಕೆಯಾಗಿ ಬರವಣಿಗೆ ಕಾವ್ಯಮಯವಾಗುವುದು ಉಂಟು. ಅವರ ಪಾತ್ರಗಳು ಹೆಚ್ಚಾಗಿ ಸಮಾಜದ ಬೇರೆ ಬೇರೆ ಸ್ತರಗಳಲ್ಲಿನ ಸಾಮಾನ್ಯರು ಚಾರಿತ್ರಿಕ ವ್ಯಕ್ತಿಗಳು, ಅಷ್ಟೇಕೆ ಸಾಹಿತ್ಯದ ಪಾತ್ರಗಳೂ ಅವರ ಕೆಲವು ಕತೆಗಳಲ್ಲಿ ನೋಡಬಹುದಾಗಿದೆ. ಮನುಷ್ಯ ಮೂಲಭೂತವಾಗಿ ಒಳ್ಳೆಯವನೆಂಬ ರಮ್ಯ ಕಲ್ಪನೆಯ ಸಂಸ್ಕೃತಿ ಎಲ್ಲ ಸ್ತರದ ಎಲ್ಲ ಜನಗಳ ಜೀವನದಲ್ಲಿ ಹಾಸುಹೊಕ್ಕಾಗಿ ಇಂದಿಗೂ ಜೀವಂತವಾಗಿದೆ ಎಂಬ ಅನುಭವವೂ ಶ್ರೀಸಾಮಾನ್ಯನಲ್ಲಿಯೂ ಒಂದು ಆಂತರಿಕ ಘನತೆಯನ್ನು ಗುರುತಿಸುವಂತೆ ಅವರನ್ನು ಪ್ರಭಾವಿಸಿದೆ.

ಹಂದ್ರಾಳರು ತಮ್ಮ ಕತೆಗಳನ್ನು ಬರೆಯುವುದರಲ್ಲಿ ತಮ್ಮ ಉದ್ದೇಶ ಜೀವನ ತಮಗೆ ನೀಡಿರುವ ದರ್ಶನವನ್ನು ವಿವರಿಸುವ ಚಿತ್ರಗಳನ್ನು ಕೊಡುವುದೆಂದೂ ಇಂಥ ಜೀವನದ ದಿಟವಾದ ಚಿತ್ರಗಳಿಂದ ಭಾವೋದಯವಾಗುವುದು ಸಹಜವೆಂದು ಅವರು ಹೇಳಿದ್ದಾರೆ. ತಾವು ಕಂಡುಕೊಂಡ ಜೀವನ ಮೌಲ್ಯಗಳನ್ನು ಅನುಭವದ ನಿಕಷಕ್ಕೊಡ್ಡಿ ಶೋಧಿಸಿ ಪ್ರಕಟಿಸುತ್ತಾ ತಮ್ಮ ಕತೆಗಳಲ್ಲಿ ಹಂದ್ರಾಳರು ಒಂದು ರೀತಿಯ ಸುಸಂಗತ ಅಖಂಡ ಅನುಭವದ ಪ್ರಪಂಚವನ್ನೇ ಸೃಷ್ಟಿಸಿದ್ದಾರೆ.

ಹಂದ್ರಾಳರ ಕತೆಯ ಪರಂಪರೆಯ ವಾಸ್ತವಿಕ, ನೇರ, ನಿರೂಪಣೆ, ಸರಳಶೈಲಿ, ಭಾವನಾತ್ಮಕ ಮಮತೆ, ಆದರ್ಶಿಕರಣ ಮುಂತಾದ ಲಕ್ಷಣಗಳನ್ನು ಅವರ ಕತೆಗಳಲ್ಲಿ ಕಾಣಬಹುದು. ಆರ್ಥಿಕ ಅಸಮಾನತೆ ಮತ್ತು ಶೋಷಣೆಗಳ ಸಾಮಾಜಿಕ ನೆಲೆಯ ದರ್ಶನ ಹಾಗೂ ಸ್ಥಿತ್ಯಂತರಕ್ಕೆ ಆಗ್ರಹ ಇವರ ಕತೆಗಳ ಮೂಲ ಸ್ಫೂರ್ತಿಯಾಗಿದೆ. ಪರಂಪರೆಯ ವೈಯಕ್ತಿಕ ನೆಲೆಯ ಸಹಾನುಭೂತಿ ಸಾಮಾಜಿಕ ನೆಲೆಯ ಆಕ್ರೋಶ ಪ್ರತಿಭಟನೆಗಳಿಗೆ ಎಡೆ ಮಾಡಿಕೊಟ್ಟಿತು. ಈ ಪರಂಪರೆಯ ನೇರ ನಿರೂಪಣೆ, ಸರಳ ಶೈಲಿಗಳು ಮುಂದುವರಿದು ಸಂವಹನ ಸೌಲಭ್ಯಕ್ಕೆ ಎರವಾಗಲಿಲ್ಲ. ಶೋಷಕ–ಶೋಷಿತ ದ್ವಂದ್ವೀಯತಾವಾದದ ಕಪ್ಪು ಬಿಳುಪು, ತೀವ್ರ ಅಭಿವ್ಯಕ್ತಿಯಲ್ಲಿ ವ್ಯಕ್ತಿತ್ವದ ಸಂಕೀರ್ಣತೆಗಳನ್ನು ಕಾಣಬಹುದು. ಹಂದ್ರಾಳರ ಜಾಗತಿಕ,

ವೈಚಾರಿಕಪ್ರಜ್ಞೆ ಮತ್ತು ವಿವಿಧ ಕಥಾ ವಿನ್ಯಾಸಗಳು ಮುಂದಿನ ಹಲವರಿಗೆ ಮಾದರಿಗಳಾಗುತ್ತದೆ. ಇವರ ಕತೆಗಳು ಮಧ್ಯಮ ವರ್ಗದ, ಬಡವರ – ಜನರ ಆಂತರಿಕ ಕ್ಷುದ್ರತೆಯನ್ನು ಬಯಲಿಗೆಳೆಯುತ್ತದೆ.

ಹಂದ್ರಾಳರ ಕಥಾಸಾಹಿತ್ಯದಲ್ಲಿ "ಹಾರುತಿಹುದು ಏರುತಿಹುದು ನೋಡು ನಮ್ಮ ಬಾವುಟ" ಎನ್ನುವ ಕತೆಯು ಪ್ರತ್ಯೇಕವಾದ ಸ್ಥಾನವನ್ನು ಕಲ್ಪಿಸಿದೆ. ಇವರ ಒಂದು ಪಾತ್ರವು 'ಸ್ವಾತಂತ್ರ್ಯ ಎಂದರೆ ತಾಯಿಯ ಹಾಲು, ಅಮೃತ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸುತ್ತದೆ'. ಕಥೆಗಾರ, ಬಡತನ, ದಾರಿದ್ರ್ಯ, ನಿರುದ್ಯೋಗ ಇವೆಲ್ಲವನ್ನು ಗುಲಾಮಗಿರಿಯಿಂದ ಬಿಡುಗಡೆ ಪಡೆದ ಸ್ವತಂತ್ರ ಭಾರತದ ಸನ್ನಿವೇಶದಲ್ಲಿಟ್ಟು ಈ ಕತೆಯನ್ನು ಸವಿಸ್ತಾರವಾಗಿ ಚಿತ್ರಿಸುತ್ತಾರೆ. ಸ್ವಾತಂತ್ರ್ಯ ದಿನಾಚರಣೆಯು ಹಂದ್ರಾಳರನ್ನು ಅತೀಯಾಗಿ ಕಾಡಿರುವ ಒಂದು ಗಟ್ಟಿಗೀಳಾದ ಕಥೆಯಾಗಿದೆ. ಈ ಕಥೆಯನ್ನು ಓದಿದಾಗ ನಮ್ಮ ದೇಶದ ಶಿಕ್ಷಣ ಪದ್ಧತಿಯನ್ನು ಯುನಿಫಾರಂ ಧರಿಸುವವರ ಶಿಕ್ಷಣ ಹಾಗೂ ಯುನಿಫಾರಂ ಧರಿಸಲಾರದವರ ಶಿಕ್ಷಣ ಎಂದು ಎರಡು ಗುಂಪುಗಳಾಗಿ ಕಾಣುತ್ತದೆ. ರಾಮನೆಂಬ ಹುಡುಗನ ಸ್ವಾತಂತ್ರ್ಯ ದಿನಾಚರಣೆಯಂದು ಶಾಲೆಗೆ ಹೋಗಲೇಬೇಕೆಂಬ ಆಸೆಗೆ ಎರವಾಗುವುದು ಈ ಯೂನಿಫಾರಂ ಶಿಕ್ಷಣ ಪದ್ಧತಿ. ಶಾಲೆಯ ಉಪಾಧ್ಯಾಯರು ಯೂನಿಫಾರಂ ಧರಿಸದೆ ಬರುವವರನ್ನು ದಿನಾಚರಣೆಗೆ ಸೇರಿಸಿಕೊಳ್ಳದಿರುವಂಥ ಪರಿಸ್ಥಿತಿ ಈ ಪದ್ಧತಿಯಲ್ಲಿದೆ. ಈ ಹೀನಾಯ ಸ್ಥಿತಿ ಇವತ್ತಿನ ಅತ್ಯಾಧುನಿಕ ಕಂಪ್ಯೂಟರ್ ಯುಗದಲ್ಲೂ ಜೀವಂತವಾಗಿರುವುದು ನಮ್ಮ ಸಮಾಜದ ದೊಡ್ಡ ದುರಂತವಾಗಿದೆ.

"ಯೂನಿಫಾರಂ ಹಾಕ್ಕೊಂಡು ಬರೋರು ಮಾತ್ರ ಸ್ವಾತಂತ್ರ್ಯ ದಿನಾಚರಣೆಯ ದಿನ ಪ್ರಾರ್ಥನೆಗೆ ಸೇರಬೇಕು' ಎಂದು ಮಧ್ಯಾಹ್ನ ಶಾಲೆಯಲ್ಲಿ ಎಲ್ಲಾ ಹುಡುಗರನ್ನೂ ಸೇರಿಸಿ ಹೆಡ್‌ಮಾಸ್ತರು ಹೇಳಿದ್ದ ಮಾತುಗಳು ರಾಮನ ಕಿವಿಯಲ್ಲಿ ತಮಟೆ ಬಾರಿಸುತ್ತಿದ್ದವು"[೪]

'ಯವ್ವಾ' ಎಂದು ಮೆಲ್ಲನೆ

'ಏನ್ಲಾ ಮಗ? ಅಷ್ಟೇ ನಿಧಾನವಾಗಿ ಕೇಳಿದಳು ಮಂಚವ್ವ

'ಮುಂದಿನ್ವಾರ ಸ್ವತಂತ್ರ ದಿನಾಚರಣೆ ಮಾಡ್ತಾರೆ ಕನವ್ವ' ಎಂದು ಪೀಠಿಕೆ ಹಾಕಿದ ರಾಮ

'ಅದಕ್ಕೇನ್ಮಾಡ್ಬೇಕ್ ಮಗಾ, ಕಾಸ್‌ಗೀಸ್ ಕೊಡ್ಬೇಕೆ? ಪ್ರಶ್ನಿಸಿದಳು ಮಂಚವ್ವ

'ಅಂ. . . . . ಎಂಟಾಣೆ ಕೊಡ್ಬೇಕು. . . . ಎಂದವನು ಕ್ಷಣ ಹೊತ್ತು ಮಾತು ನಿಲ್ಲಿಸಿ ಮತ್ತೆ ಮುಂದುವರೆಸಿದ, ಯೂನಿಫಾರಂ. . . . ಎಂದವನ ಬಾಯಿಂದ ಮಾತು ಮುಂದಕ್ಕೆ ಹೊರಡಲಿಲ್ಲ. ತನ್ನವ್ವನ ಹರಿದ ಜಾಕೀಟು ರಾಮನ ಕಣ್ಮುಂದೆ ತೇಲಿ ಬಂದಿದ್ದವು'"[೫]

ಆದರೂ ರಾಮನಿಗೆ ಸ್ವಾತಂತ್ರ್ಯ ದಿನಾಚರಣೆಯಲ್ಲಿ ಯೂನಿಫಾರಂ ಹಾಕಿಕೊಂಡು ಸ್ವಾತಂತ್ರ್ಯ ದಿನಾಚರಣೆಯಲ್ಲಿ ಭಾಗವಹಿಸಬೇಕೆಂದು ಗೌಡರ ಮಗ ರಮೇಶನ ಯೂನಿಫಾರಂ ಕದ್ದು ಸ್ವಾತಂತ್ರ್ಯ ದಿನಾಚರಣೆಗೆ ಬರುತ್ತಾನೆ. ಸುಬ್ಬಣ್ಣ ಮಾಸ್ತರು ಹುಡುಗರನ್ನೆಲ್ಲಾ ಸಾಲಾಗಿ ನಿಲ್ಲಿಸಬೇಕಾದರೆ ರಮೇಶನಿಗೆ ರಾಮನು ಹುಟ್ಟಿರುವುದೇ ನನ್ನ ಯೂನಿಫಾರಂ ಎಂದು ತಿಳಿದು ಹೆಡ್‌ಮಾಸ್ತರ ಹತ್ತಿರ ಹೋಗಿ 'ರಾಮ ನನ್ನ ಯೂನಿಫಾರಂ ಕದ್ದವ್ನೆ ಸಾ. . . . ಎಂದು ವಿಚಾರವನ್ನು ಮುಟ್ಟಿಸಿದ. "ಹೆಡ್‌ಮಾಸ್ತರ ಕೋಪನೆತ್ತಿಗೇರಿತ್ತು.

ರಾಮನ ತಲೆಗೂದಲನ್ನು ಹಿಡಿದು ಸಾಲಿನಿಂದ ಆಚೆಗೆ ಎಳೆದರು. ರಾಮ ಹಿಮಾಲಯದ ಬೆಟ್ಟಗಳಿಂದ ಕನ್ಯಾಕುಮಾರಿಯ ಸಮುದ್ರಕ್ಕೆ ಬಿದ್ದಿದ್ದ!

'ಬಡ್ಡಿಮಗ್ನೆ ಸ್ವಾತಂತ್ರ್ಯದ ದಿನವೇ ಕಳ್ಳತನ ಮಾಡಿದ್ದೀಯ, ಇಸ್ಕೂಲ್ಗೆ ಕೆಟ್ಟೆಸ್ರು ತಂದ್‌ಬಿಟ್ಟೆ, ದೊಡ್ಡ ಮನಸ್ರ ಎದುರ್‌ನಾಗೆ ಕಳ್ಳತನ, ಮಾಡ್‌ಬಾರ್ದು ಅಂತ ಗಾಂದಿ ತಾತ ಹೇಳಿಲ್ಲಿಲ್ವೆ? ಹೋಗು ಮೊದ್ಲು ಯೂನಿಫಾರಂ ಬಿಚ್ಚಿ ತಂದ್‌ಕೊಡು' ಎಂದು ಅಬ್ಬರಿಸಿದರು.

'ಯಾರ್ರೀ ಅವ್ನು ಅನಿಷ್ಟ 'ತಾಲ್ಲೂಕ್ ಬೋರ್ಡ್ ಪ್ರೆಸಿಡೆಂಟರು ಗುಡುಗಿದರು.

'ತಪ್ಪಾಯ್ತು ಸಾ. ಪ್ರಾರ್ಥನೆ ಆಗ್ತಾಲೇ ವಾಪಸ್ಸು ಕೊಡ್ತೀನಿ' ತೊದಲಿದ ರಾಮ.

'ಎಷ್ಟ್ ಧೈರ್ಯ ಮೇಷ್ಟ್ರೆ ಕಳ್‌ಬಡ್ಡಿ ಹೈದ್ನ್‌ಗೆ ಒಂದ್ ಒದೀರಿ' . . . ತನ್ನ ಮಗನ ಬಟ್ಟೆ ಕದ್ದಿದ್ದರಿಂದ ಕೋಪಗೊಂಡಿದ್ದ ಗೌಡರು ಬಿರುಸಾಗಿ ನುಡಿದರು. ಹೆಡ್‌ಮಾಸ್ತರು ರಾಮನನ್ನು ಹಿಡಿದು ಬಲವಾಗಿ ಪಕ್ಕಕ್ಕೆ ನೂಕಿದರು. ರಾಮ ರಭಸದಿಂದ ನೆಲಕ್ಕೆ ಬಿದ್ದ, ಕೈಕಾಲು ಪರಚಿಹೋಗಿ ಒಂದಿಷ್ಟು ರಕ್ತ ಬಂದಿತ್ತು. ರಾಮನ ಕಣ್ಣುಗಳು ನೀರಾಡಿದವು"[೬] ಬೋರ್ಡ್ ಪ್ರೆಸಿಡಂಟರ ದಪ್ ಎದ್ದು ಕಾಣುತ್ತದೆ. ಇದರಿಂದ ರಾಮನ ಭಾವನಾತ್ಮಕ ಕನಸು ಭಗ್ನಗೊಳ್ಳುತ್ತದೆ. ಬಡಹೆಣ್ಣಿನ ಮೇಲೆ ಪ್ರೆಸಿಡೆಂಟರು ಹಾಗೂ ಸುಬ್ಬಣ್ಣ ಮಾಸ್ತರು ಅತ್ಯಾಚಾರವೆಸಗುವುದು. ರಾಮನು ಪ್ರತಿರೋಧ ಒಡ್ಡಿ ಭಗತ್‌ಸಿಂಗ್‌ನಂತೆ ಹೋರಾಡಿ ಸಂಕರಜ್ಜಿಯ ಮಗಳು ಚೆಲುವಿಯನ್ನು ಕಾಪಾಡುತ್ತಾನೆ.

ಪ್ರಜಾಪ್ರಭುತ್ವದ ಕ್ಷಣಗಳು' ಎಂಬ ಕತೆಯಲ್ಲಿ ಸಮಾಜದಲ್ಲಿ ನಡೆಯುತಿರುವ ಜೀತಪದ್ಧತಿಯನ್ನು ಕ್ರೂರವಾಗಿ ಚಿತ್ರಿಸಿದ್ದಾರೆ. ಆಗಸ್ಟ್ ಹದಿನೈದನೆಯ ತಾರೀಖು ಈ ಪುಣ್ಯ ಭೂಮಿಯ ಸ್ವತಂತ್ರ ದಿನಾಚರಣೆ ಎಂದೇ ಪ್ರಾರಂಭವಾಗುವ ಕಥೆಯಲ್ಲಿ ರಾಜಕಾರಣಿಯ ಮಾತುಗಳು ಮೈಕಿನಿಂದ ಹೊರಬಿದ್ದು ದೊಡ್ಡದಾಗಿ ಆಕಾರ ಪಡೆದು ಸ್ಲಮ್ಮಿನ ಚರಂಡಿಗಳನ್ನು ದಾಟಿಕೊಂಡು ರೊಟ್ಟಿ ತಿಂದು ಮೂರು ದಿನಗಳಾಗಿದ್ದ ಬೋಸ ಎಂಬ ವ್ಯಕ್ತಿಯ ಕಿವಿಯ ಮೇಲೆ ಬೀಳುತ್ತವೆ. ಬೋಸನ ತಂದೆಯು ಜೀತಗಾರಿಕೆ ಮಾಡುತ್ತಿರುವಾಗ ಗೌಡರ ಮಗನ ಕಣ್ಣಿಗೆ ಬೋಸನ ಅಕ್ಕ ತುತ್ತಾಗುತ್ತಾಳೆ. ನಾಗರಾಜ ಎಂಬ ವ್ಯಕ್ತಿಯ ಜೊತೆಯ ಸ್ನೇಹದಿಂದ ಇದ್ದು, ನೋವುಗಳನ್ನು ಮರೆಯುತ್ತಾನೆ. ನಾಗರಾಜನು ಕಾರ್ಮಿಕ ಸಂಘಟನೆಯನ್ನು ಮಾಡಿ ಕಾರ್ಮಿಕರಿಗೆ ನ್ಯಾಯವನ್ನು ಒದಗಿಸಿ ಕೊಡುವ ಸನ್ನಿವೇಶ ಕಾಣಬಹುದು. ಹಸಿವಿನಿಂದ ಯಾವ ರೀತಿ ಬೋಸನು ತಳಮಡಿಸುತ್ತಿದ್ದು ಹಾಗೂ ಕಾರ್ಖಾನೆಯಿಂದ ಬರುವ ಸಂಬಳ ಸಾಕಾಗದೆ ಹಸಿವನ್ನು ಯಾರಿಗೂ ಹೇಳಿಕೊಳ್ಳದೆ ಒಬ್ಬನೇ ತನ್ನ ನೋವನ್ನು ತಿನ್ನುತ್ತಿರುತ್ತಾನೆ.

"ಬೋಸನಿಗೆ ಹಳ್ಳಿಗಾಡಿನ ಆ ಕ್ರೂರ ಬದುಕಿನ ಚಿತ್ರಣ ಅವನ ಕಣ್ಣ ಮುಂದೆ ತೇಲಿಬಂತು. ಜಮೀನುದಾರನ ಮನೆಯಲ್ಲಿ ಇನ್ನೂ ಜೀತ ಗೇಯುತ್ತಾ ಬದುಕಿನೊಂದಿಗೆ ಸೆಣಸುತ್ತಿರುವ ಅಪ್ಪ, ಅಕ್ಕ ಸತ್ತ ಹಿಂದಿನ ಭೀಕರ ಘಟನೆಗಳು ಸ್ಲಮ್ಮಿನ ಕೆಟ್ಟ ಚರಂಡಿಯ ನೀರಿನಂತೆ ಅವನ ಮನದ ಕಾಲುವೆಯಲ್ಲಿ ಭೋರ್ಗರೆಯುತ್ತಾ ಹರಿಯುತ್ತವೆ"[೭]

"ನಾಗರಾಜಣ್ಣ ನನಗೂ ರೊಟ್ಟಿ ಕೊಡು, ಮೂರು ದಿನದಿಂದ್ಲು ನಾನೇನೂ ತಿಂದಿಲ್ಲ" ಮೂಂದಿನ ಮಾತುಗಳು ಗಂಟಲಲ್ಲಿಯೇ ಉಳಿದವು. ನಾಗರಾಜ ಕ್ಷಣಕಾಲ ಏನು ಮಾತನಾಡಲು ತೋಚದೆ ಮೂಕನಾದ. ಅವನ ಕಣ್ಣುಗಳಲ್ಲಿ ನೀರು ಹನಿಗೂಡಿತು. ಟ್ರಂಕನ್ನು ತೆಗೆದು ತಿಂಡಿಯನ್ನೆಲ್ಲ ಬೋಸನ ಮುಂದಿಟ್ಟ. ಬೋಸ ಹಸಿದ ನಾಯಿಯಂತೆ ಗಬಗಬನೆ ತಿನ್ನುತ್ತಿದ್ದ. ಸಂತೃಪ್ತಿಯಿಂದ ನೀರು ಕುಡಿದು ನಾಗರಾಜನ ಕಾಲ್ಗಳ ಮೇಲೆ ಉರುಳಿ ಅಳಲಾರಂಭಿಸಿದ. ನಾಗರಾಜ ಆ ಹುಡುಗನನ್ನು ಸಂತೈಸುತ್ತಿದ್ದ ಕಡೆಗೊಮ್ಮೆ ಅವನ್ನನು ಅಪ್ಪಿಕೊಂಡು ತಾನು ಬಿಕ್ಕಳಿಸಲಾರಂರಂಭಿಸಿದ"[೮]

ಬೋಸನು ತನ್ನ ಹಸಿವನ್ನು ತೋರಿಸಿಕೊಳ್ಳದೆ, ಹೇಳದೆ ಒದ್ದಾಡುತ್ತಿರುವ ಚಿತ್ರಣ ಕಾಣುತ್ತದೆ. ಸಮಾಜದಲ್ಲಿ ಕೂಲಿಕಾರ್ಮಿಕರಿಗೆ ಸಿಗುವ ಸಂಬಳ ಸಾಕಾಗದೆ ನರಳುವ ಚಿತ್ರಣ ಕತೆಯ ಮೂಲಕ ತಿಳಿಯಲಾಗುತ್ತದೆ. ಸಿದ್ದಲಿಂಗಯ್ಯನವರ ಬೆಲ್ಚಿಯ ಹಾಡು ಈ ಕತೆಗೆ ಉದಾಹರಣೆಯನ್ನು ನೀಡಬಹುದು.

ದೊಡ್ಡಗೌಡರ ಬಾಗಿಲಿಗೆ
ನಮ್ಮ ಮೂಳೆಯ ತ್ವಾರಣ
ನಮ್ಮ ಜನಗಳ ಕಾಲು ಕಯ್ಯಿ
ಕಂಬ ಅವರ ಹಟ್ಟಿಗೆ
ಅವರ ಬೇಟೆಗೆ ನಾವು ಮೊಲಗಳು
ನಮ್ಮ ಬಾಳೇ ಬಂಗಲೆ!
ಅವರ ಬಂಗಲೆಯಂಗಳಕ್ಕೆ
ನಮ್ಮ ರಕ್ತದ ರಂಗಾಲೆ
ಅವರ ತೋಟದ ತೆಂಗಿನಲ್ಲಿ
ನಮ್ಮ ರಕ್ತದ ಎಳನೀರು
ಅವರ ಅಮಲಿನ ಗುಂಗಿನಲ್ಲಿ
ಕೂಲಿ ಹೆಣ್ಣಿನ ಕಣ್ಣೀರು
ಯಾವ ಪಾಪವ ಮಾಡಲಿಲ್ಲ
ಯಾರ ತಲೆಯನು ಹೊಡೆಯಲಿಲ್ಲ
ಕರಗಿನಮ್ಮಯ ಬಾಳಕತ್ತಲು
ಕಾಣಲಾರವೆ ಹಗಲನು"[೯]

ಸಿದ್ದಲಿಂಗಯ್ಯನವರ ಈ ಕವಿತೆಯಲ್ಲೂ ಸಹ ಜೀತಗಾರಿಕೆಯಿಂದ ಒದ್ದಾಡುತ್ತಿರುವುದು ಹಾಗೂ ಹಸಿವನ್ನು ಸಹ ನೋಡಬಹುದು.

ಹಂದ್ರಾಳರ 'ಬೆತ್ತಲಾಗದೆ ಬಯಲು ದಕ್ಕದಯ್ಯಾ" ಎಂಬ ಕಥೆಯು ಒಬ್ಬ ಕ್ರಾಂತಿಕಾರಿಯ ಸೋಲನ್ನು ಈ ಕತೆಯು ನಿರೂಪಿಸುತ್ತದೆ. ಆತ ವೃತ್ತಿಯಿಂದ ಒಬ್ಬ ಅಧ್ಯಾಪಕ, ಆದರೆ ಆತ ಮನಸ್ಸು

ಮಾಡಿದ್ದರೆ ಸುಖವಾಗಿ ತನ್ನ ಹೆಂಡತಿಯ ಜೊತೆ ಬದುಕಬಹುದಿತ್ತು. ಆದರೆ ಆತ ಸಮಾಜದ ಏರುಪೇರುಗಳಿಗೆ ತಲೆಕೆಡಿಸಿಕೊಂಡು ತನ್ನ ವೈಯಕ್ತಿಕ ಬದುಕನ್ನು ದುರಂತಗೊಳಿಸಿಕೊಳ್ಳುತ್ತಾನೆ. "ತುರ್ತುಪರಿಸ್ಥಿತಿಯ ವಿರುದ್ಧ ಸಂಘಟಿತವಾದ ಹೋರಾಟದಲ್ಲಿ ಒಟ್ಟಿಗೆ ಒಂದು ವಾರ ಪೋಲೀಸ್ ಸ್ಟೇಷನ್ನಿನ ಸೆಲ್‌ನಲ್ಲಿದ್ದಾಗ ಪ್ರಮೋದಶಾಸ್ತ್ರೀಯ ಪರಿಚಯವಾದವು. ನಾನು ಆದಾಗ ತಾನೆ ಪಿಯುಸಿ ಮುಗಿಸಿ ಮೆಡಿಕಲ್‌ನ ಮೊದಲನೆಯ ವರ್ಷವನ್ನು ಪ್ರವೇಶಿಸಿದ್ದೆ. ಮಾರ್ಕ್ಸ್, ಲೋಹಿಯಾ, ಲೆನಿನ್ ಹಾಗೂ ಇತಿಹಾಸದ ಕ್ರಾಂತಿಗಳನ್ನು ತಲೆಗೇರಿಸಿಕೊಂಡ ಹದಿಹರೆಯದ ದಿನಗಳವು. ಆತ ಯುನಿವರ್ಸಿಟಿಯ ಅಧ್ಯಯನ ಸಂಸ್ಥೆಯಲ್ಲಿ ಬೋಧಕ, ಸಂಶೋಧಕನಾಗಿ ಕಾರ್ಯ ನಿರ್ವಹಿಸುತ್ತಿದ್ದ. ಕಮ್ಯುನಿಸ್ಟ್ ಸಮಾನತೆಯ ಸಿದ್ಧಾಂತಗಳನ್ನು ಬಾಯಿ ಪಾಠ ಮಾಡಿಕೊಂಡವನಂತೆ ವೇದಿಕೆಗಳಲ್ಲಿ ಬಿತ್ತರಿಸುತ್ತಾ, ವಿದ್ಯಾರ್ಥಿಗಳ, ಜನಸಾಮಾನ್ಯರ ಚಿತ್ರಗಳಲ್ಲಿ ಬೆರಳಾಡಿಸಿ ಹೊಸ ಆಲೋಚನೆಗಳ ಹೊಂಡುನೀರಿನ ತರಂಗಗಳನ್ನೆಬ್ಬಿಸುತ್ತಿದ್ದ"[೧೦]

ಆರ್ಥಿಕ ಹಾಗೂ ಸಾಮಾಜಿಕವಾಗಿ ಅಸಮಾನತೆಯ ಮೇಲೆ ನಿಂತ ಸಮಾಜವನ್ನು ಕಂಡು ಆತ ಪ್ರತಿಭಟನೆಯ ಹಾದಿ ಹಿಡಿದು, ಕೊನೆಗೆ ಆತ ಅಸಹಾಯಕ ಸ್ಥಿತಿಯನ್ನು ಮುಟ್ಟುತ್ತಾನೆ. ಅವನ ಸೋಲು ಒಬ್ಬ ಬುದ್ಧಿಜೀವಿಯ ಸೋಲು. ಸಾಮಾಜಿಕ ಹಿಂಸೆಗೆ ಒಳಗಾದ ಆ ಕ್ರಾಂತಿಕಾರಿ ಕೊನೆಗೆ ಎಮರ್ಜೆನ್ಸಿಯನ್ನೂ ಸಮರ್ಥಿಸುವ ಹಂತಕ್ಕೆ ಮುಟ್ಟುವುದು ಆತನ ಅಸಹಾಯಕತೆಗೆ ದ್ವಂದ್ವ ವ್ಯಕ್ತಿತ್ವಕ್ಕೆ ಸಾಕ್ಷಿಯಾಗಿದೆ.

ಈ ರೀತಿ ನಡೆಯುವುದಕ್ಕೆ ಸಮಾಜವೇ ಕಾರಣ. ಅವನ ಈ ದ್ವಂದ್ವಗಳನ್ನು ಅವನ ಅಸಹಾಯಕತೆಯನ್ನು ಮತ್ತು ಹೋರಾಟದ ವಿಫಲತೆಯನ್ನು ಈ ಕಥೆ ಚಿತ್ರಿಸುತ್ತದೆ. ಈ ಕಥೆಯಲ್ಲಿ ಸಮಕಾಲೀನ ವ್ಯಕ್ತಿಗಳಾದ ವರವರರಾವ್, ಎನ್.ಟಿ.ಆರ್, ಗದ್ದರ್ ಮತ್ತು ನಕ್ಸಲ್‌ವಾದ ಇವೆಲ್ಲ ಬಂದು ಹೋಗುತ್ತವೆ.

"ಚಹವನ್ನು ಚಪ್ಪರಿಸುತ್ತಾ ಪ್ರಮೋದ ಶಾಸ್ತ್ರೀ ಹೇಳಿದ್ದ 'ಪಾಪ ವರವರರಾವ್ ಆಂಧ್ರದ ಅಷ್ಟು ದೂರದಿಂದ ಬಂದಿದ್ದ. ಆತನಿಗೊಂದಿಷ್ಟು ಚಹ ಕೊಡಲೂ ಆಗಲಿಲ್ಲ. ನಿಜಕ್ಕೂ ಆತನದು ಅದ್ಭುತವಾದ ಸಂಕಲ್ಪ ಶಕ್ತಿ. ಎಷ್ಟೊಂದು ವರ್ಷಗಳಿಂದಲೂ ಆಂಧ್ರದಲ್ಲಿ ಹೋರಾಟವನ್ನು ಜೀವಂತವಾಗಿರಿಸಿಕೊಂಡು ಬಂದಿದ್ದಾನೆ. ಆತನಿಗಿಂತಲೂ ಆ ಗದ್ದರ್ ನೋಡಿ ಮೈಯಲ್ಲಿ ಗುಂಡೇಟು ಬಿದ್ದಿದ್ದರೂ ಹೇಗೆ ಗರ್ಜಿಸುತ್ತಾನೆ.. . . . ಹೋರಾಟಕ್ಕೆ ಒಂದು ಪರಿಪೂರ್ಣ ಅರ್ಥ ಕೊಟ್ಟವನು. . . . ಅವನೊಬ್ಬ ಹುಚ್ಚ . . . . .'
ಆತ ತುಂಬಾ ಕಷ್ಟದಲ್ಲಿದ್ದಾನೆ. . . . . . ವಿಮರ್ಶಕ ಮಿತ್ರ ಹೇಳಿದ.
'ಹೌದು, ಹೋರಾಟಗಾರರೆಲ್ಲ ಸದಾ ಕಷ್ಟದಲ್ಲಿ ಇರ್ತಾರೆ. .. . . .' ಪ್ರಮೋದ ಶಾಸ್ತ್ರಿ ಥಟ್ಟನೆ ಹೇಳಿದ. ನಮ್ಮ ಕಡೆಗೊಮ್ಮೆ ನೋಡಿ ಮತ್ತೆ ಮುಂದುವರೆಸಿದಿ. 'ಭಾರತದಲ್ಲಿ ಸುಮಾರು ಹೋರಾಟಗಳು ವಿಫಲವಾಗುತ್ತಿರುವುದಕ್ಕೆ ಆರ್ಥಿಕ ಕ್ಷೋಭೆಯೇ ಕಾರಣ. . .. .' ಮಾತುಗಳನ್ನು ಮರೆತವನಂತೆ ಬಳಲಿದವನಂತೆ ಕಾಣಿಸಿದ"[೧೧]

ಹಂದ್ರಾಳರ ಕಥೆಯ ಪರಿಸರವು ನೆರೆಯ ಆಂಧ್ರದ ತೆಲಗು ಸಂಸ್ಕೃತಿಯ ಪರಿಸರಕ್ಕೆ ಹೊಂದಿಕೊಂಡಿದೆ. ಹಂದ್ರಾಳರ ಕಥೆಗಳಲ್ಲಿ ದ್ವಿಭಾಷಿಕತೆಯ ಸಂಸ್ಕೃತಿಯನ್ನು ನೋಡಬಹುದು. ಎರಡು ಪರಿಸರಕ್ಕೂ ಹೊಂದಾಣಿಕೆಯನ್ನು ಕಲ್ಪಿಸುತ್ತಾರೆ. ಅವರ ಗ್ರಾಮಗಳಿಂದಲೇ ಇಂತಹ ದ್ವಿಭಾಷಿಕ ಬಂದಿರುವುದು. ಭ್ರಷ್ಟ ವ್ಯವಸ್ಥೆಯಿಂದ ಪ್ರಮೋದಶಾಸ್ತ್ರೀಯು ತನ್ನ ಜೀವನವನ್ನೇ ದುರಂತಗೊಳಪಡಿಸಿಕೊಳ್ಳುತ್ತಾನೆ. ಅವನ ಹೋರಾಟವೆಲ್ಲ ಕಷ್ಟದಲ್ಲೇ ಮುಳುಗಿ ಹೋಗುತ್ತದೆ.

ದ್ವಿಭಾಷಿಕ ನೆಲೆಯಲ್ಲಿ ವ್ಯಕ್ತವಾದ ಇಂತಹದೇ ಪರಿಸರದಲ್ಲಿ ಇವರ ಮತ್ತೊಂದು ಕಥೆಯು "ಕ್ಷಾಮ"ವು ಒಬ್ಬ ಐ.ಎ.ಎಸ್ ಅಧಿಕಾರಿಯ ತಾನು ನಂಬಿದ ಆದರ್ಶ ಮತ್ತು ಸಿದ್ಧಾಂತಗಳನ್ನು ಒರೆಗೆ ಹಚ್ಚಿ ಅದರಲ್ಲಿ ಯಶಸ್ಸು ಕಾಣುವುದರ ಬದಲು ಆತ ಸೋಲನ್ನು ಅನುಭವಿಸುವುದನ್ನು ಈ ಕಥೆಯ ಮೂಲಕ ತಿಳಿಯುತ್ತದೆ. ಒಬ್ಬ ಮೇಟಿಯು ಜಿಲ್ಲಾಧಿಕಾರಿಯತ್ತ ಸಂಭಾಷಣೆ ನೋಡಬಹುದು. ಭ್ರಷ್ಟ ಅಧಿಕಾರಿಗಳ ಭ್ರಷ್ಟ ರಾಜಕಾರಣಿಗಳ ನಡವಳಿಕೆಯ ಬಗ್ಗೆ ಮೇಟಿಯು ಹೇಳುತ್ತಾನೆ. ಐ.ಎ.ಎಸ್. ಅಧಿಕಾರವಿದ್ದರು ಅವನಿಗೆ ಹಳ್ಳಿಯ ವೈಭವವನ್ನು ಎಂದು ಮರೆತಿರಲಿಲ್ಲ.

ಆದ್ದರಿಂದಲೇ ನೀವು ನಾವೆಲ್ಲ ಬದುಕಿರುವುದು ಎಂದು ಹೇಳಿ ಹೊರಬಂದಿದ್ದೆ, ಆದರೆ ಕಾಲ ದಯಾಳು, ನಾನು ದಯಾಳು, ನಾನು ಐ.ಎ.ಎಸ್. ಪಾಸು ಮಾಡಿದ್ದೆ, ಉನ್ನತ ಅಧಿಕಾರಕ್ಕೆ ಏರಿದರೂ ಹಳ್ಳಿಯ ಬದುಕನ್ನಾಗಲೀ, ನನ್ನ ಗತಜೀವನವನ್ನಾಗಲೀ ಮರೆಯಲು ಸಾಧ್ಯ ಆಗಲಿಲ್ಲ. ಕಾನೂನು ಕಟ್ಟಳೆಗಳಿಗಿಂತಲೂ ಮಾನವೀಯತೆ ದೊಡ್ಡದೆಂದು ಇತಿಹಾಸದ ಪುಟಗಳು ಕಲ್ಪಿಸಿಕೊಟ್ಟಿದ್ದವು.

ಅದಿರಲಿ, ಐ.ಬಿ. ನೋಡುತ್ತಿದ್ದಂತೆಯೇ ಇಡೀ ಜಿಲ್ಲೆಯ ಬಗ್ಗೆ ಸ್ಪಷ್ಟವಾದ ಚಿತ್ರಣ ಮೂಡತೊಡಗಿತು. ವಿ.ಐ.ಪಿ.ಯ ರೂಮು ಇತರ ಐ.ಬಿ.ಗಳ ಅತಿ ಸಾಮಾನ್ಯ ರೂಮಿಗಿಂತಲೂ ಅಧ್ವಾನವಾಗಿತ್ತು. ನಾನೊಬ್ಬ ಜಿಲ್ಲಾಧಿಕಾರಿ ಎಂದು ತಿಳಿದಿದ್ದರೂ, ನಾನೇ ಹೋಗಿ ಕರೆಯುವವರೆಗೂ ಮೇಟಿ ರೂಮಿಗೆ ಬಂದಿರಲಿಲ್ಲ. ಮುಖ ತೊಳೆದು ಸೋಫಾವೆಂಬ ಕಿತ್ತು ಹೋದ ಆಸನದ ಮೇಲೆ ಕುಳಿತಾಗ ಅಕ್ಕಪಕ್ಕದ ರೂಮುಗಳಿಂದ ಕೂಗಾಟ, ಅಟ್ಟಹಾಸದ ನಗು, ಕೇಕೆಗಳು ಕೇಳಿಬರುತ್ತಿದ್ದವು. ಕಾಫಿಯೆಂಬ ಬಿಸಿನೀರು ಹಿಡಿದು ರೂಮಿಗೆ ಬಂದ ಮೇಟಿಯನ್ನು ಕೇಳಿದ್ದೆ

'ಏನು ಅದೆಲ್ಲ ಗಲಾಟೆ. . . .. . ?

'ಅಯ್ಯೋ ಬಿಡಿ ಸ್ವಾಮಿ, ಇದೆಲ್ಲ ಪ್ರತಿನಿತ್ಯ ಇದ್ದದ್ದೆ, ಇಸ್ಪಿಟು, ಕುಡಿತ, ಹೊಡೆದಾಟ, ಬೇಲಿನೆ ಹೊಲ ಮೇಯ್ತಾ ಇದ್ರೆ ಕಾಯೋರು ಯಾರು ಸ್ವಾಮಿ. . . ಒರಟು ತೆಲುಗು ಭಾಷೆಯಲ್ಲಿ ಹೇಳಿದ್ದ.

'ನನಗೊಂದು ಊಟ. . . .' ಮೇಟಿಯ ಮುಖ ನೋಡಿದೆ.

'ವೆಜ್ಜೋ . . . . ನಾನ್‌ವೆಜ್ಜೊ . . . .' ಬಹುಶಃ ಒರಟುತನವೆಂಬುದು ಈ ಪ್ರದೇಶದ ಭಾಷೆ ಸಂಸ್ಕೃತಿಗಳಲ್ಲಿ ಹಾಸುಹೊಕ್ಕಾಗಿ ಇರಬೇಕೆಂದುಕೊಂಡೆ"[೨]

ಆಂಧ್ರಪ್ರದೇಶದಲ್ಲಿ ಕ್ಷಾಮದಿಮದ ಬರಗಾಲ ಉಂಟಾಗಿದೆ. ಈ ಬರಗಾಲದಿಂದ ಜನತೆ ಕ್ಷಾಮವನ್ನು ಅನುಭವಿಸುತ್ತಿದೆ. ಹಸಿವು ಬಡತನದಿಂದ ತತ್ತರಿಸಿಹೋಗಿರುವ ಆಂಧ್ರಪ್ರದೇಶದ ಜನತೆಯ ಪರಿಹಾರಕ್ಕಾಗಿ

ಸರ್ಕಾರ ಕೆಲವು ಯೋಜನೆಗಳನ್ನು ರೂಪಿಸಿ ಆ ಜನತೆಯ ನಡುವೆ ಅವುಗಳನ್ನು ಅನುಷ್ಠಾನಗೊಳಿಸಲು ಒಬ್ಬ ಐ.ಎ.ಎಸ್. ಅಧಿಕಾರಿಯನ್ನು ನೇಮಿಸಲಾಗುತ್ತದೆ. ಆತ ತನಗೆ ಸಿಕ್ಕ ಆ ಸ್ಥಾನದ ಮುಖಾಂತರ ಜನತೆಗೆ ಸಿಗಬೇಕಾದದ್ದು ಅನ್ಯಾಯವಾಗದ ರೀತಿಯಲ್ಲಿ ಜನತೆಗೆ ದಕ್ಕಬೇಕು ಎಂದು ನಂಬಿ ಕಾರ್ಯೋನ್ಮುಖನಾಗುತ್ತಾನೆ.

"ಕೆಲವೇ ಕೆಲವು ಸಹಾಯಕರೊಂದಿಗೆ ಜಿಲ್ಲೆಯನ್ನು ಸುತ್ತಲು ಹೊರಟೆ. ತೀರಾ ಹಿಂದುಳಿದ ಪ್ರದೇಶಗಳಿಗೆ ಭೇಟಿ ನೀಡಿ ಪರಿಶೀಲಿಸುವುದು. ಜನ ಸಂಪರ್ಕ ಸಭೆ ನಡೆಸುವುದು ನಮ್ಮ ಆಶಯವಾಗಿತ್ತು. ಎಲ್ಲಿಂದ ಎಲ್ಲಿಯವರೆಗೆ ನೋಡಿದರೂ ಕೆಂಪು ಕಂಬಳಿಯನ್ನು ಹೊದ್ದು ಮಲಗಿದಂತೆ ಕಾಣುತ್ತಿದ್ದ ಭೂಮಿ, ಸ್ಕೆಲಿಟನ್‌ಗಳಂತೆ ಕಾಣುತ್ತಿದ್ದ ಪ್ರಾಣಿಗಳು. ಹೋದ ಕಡೆಯಲ್ಲೆಲ್ಲ ಆಸೆ, ಕುತೂಹಲಗಳಿಂದ ಸುತ್ತುವರಿಯುತ್ತಿದ್ದ ಜನ, ಪ್ರತಿ ಊರಿನಲ್ಲೂ ಸುಮಾರು ಅರ್ಧದಷ್ಟು ಜನಕ್ಕೆ ಜೀವನ ನಡೆಸಲು ಯಾವ ದಾರಿಯೂ ಇರಲಿಲ್ಲ. ಕೆಲವು ಊರುಗಳಲ್ಲಿ ಜನ ನಾವು ಹೋದರೂ ಅಸಡ್ಡೆಯಿಂದ ನಿರ್ಲಿಪ್ತರಾಗುತ್ತಿದ್ದರು. ಒಂದು ಊರಿನಲ್ಲಿ ನಾವು ಸಭೆ ನಡೆಸುತ್ತಿರಬೇಕಾದರೆ ಸುಮಾರು ಎಪ್ಪತ್ತು ವರ್ಷ ವಯಸ್ಸಿನ ವೃದ್ಧರು ಬಂದರು. ಅವರು ಬರಹಗಾರರಂತೆ. ನಿಮ್ಮ ಹತ್ತಿರ ಸ್ವಲ್ಪ ಮಾತನಾಡಬೇಕು_' ಎಂದರು.

'ಮಾತನಾಡಿ' ಎಂದೆ ಅವರು ಉದ್ವಿಗ್ನರಾದಂತಿದ್ದರು"[೧೩]

ಬರ ಪರಿಹಾರಕ್ಕಾಗಿ ಸರ್ಕಾರ ನಾಲ್ಕು ಕೋಟಿ ರೂಪಾಯಿ ಸ್ಯಾಂಕ್ಷನ್ ಮಾಡಿದೆಯೆಂದು ಸೆಕ್ರೆಟೇರಿಯೆಟ್‌ನಿಂದ ಫ್ಯಾಕ್ಸ್ ಬಂದಿತ್ತು. ಈ ವಿಷಯವನ್ನು ಜಿಲ್ಲಾ ಉಸ್ತುವಾರಿ ಮಂತ್ರಿಯೊಂದಿಗೆ ಚರ್ಚಿಸಬೇಕೆಂದು ಅವರಿಗೆ ಫೋನು ಮಾಡಿದೆ. ಅವರು ಆ ಕಡೆಯಿಂದ ಹೇಳಿದ್ದರು. 'ನೋಡಿ, ನಾನೇ ನಿಮಗೆ ಫೋನ್ ಮಾಡಬೇಕೆಂದಿದ್ದೆ. ನಾಲ್ಕು ಕೋಟಿ ಸ್ಯಾಂಕ್ಷನ್ ಮಾಡಿಸುವುದಕ್ಕೆ ಸಾಕು ಸಾಕಾಯಿತು.

ನಾನು ಅತ್ಯಂತ ಸೂಕ್ಷ್ಮವಾದ ಸನ್ನಿವೇಶದಲ್ಲಿ ಸಿಕ್ಕಿಹಾಕಿಕೊಂಡಿದ್ದೆ. ಒಂದು ಕಡೆ ಸಹಾಯಕ್ಕಾಗಿ ಪರಿತಪಿಸುತ್ತಿದ್ದ ಜನ, ಇನ್ನೊಂದು ಕಡೆ ಪರಿಹಾರದ ನೆಪದಲ್ಲಿ ತಿಂದು ತೇಗಲು ಸಿದ್ಧವಾಗಿದ್ದ ಗುಂಪು, ಮತ್ತೊಂಡು ಕಡೆ ಸಮಾಜವಾದದ ಬೆನ್ನಟ್ಟಿ ಸಾಮಾಜಿಕ ನ್ಯಾಯಕ್ಕಾಗಿ ಪ್ರಾಣತ್ಯಾಗಕ್ಕೂ ಸಿದ್ಧವಾಗಿದ್ದ ನಕ್ಸಲೀಯ ಗುಂಪು. ಇವೆಲ್ಲವುಗಳ ಮಧ್ಯೆ ಗೊಂದಲಗಳಲ್ಲಿ ಸಿಲುಕಿದ ನಾನು, ಮಾರನೆಯ ದಿನ ಮಧ್ಯಾಹ್ನ ಮಂತ್ರಿಗಳ ಮನೆಯ್ಲಲಿಯೇ ಮೀಟಿಂಗ್ ಕರೆಯಲಾಯಿತು".[೧೪]

ಅನುದಾನ ಬಂದ ಬಳಿಕ ಅನೇಕ ಕಾಮಗಾರಿ ಮತ್ತು ನ್ಯಾಯಬೆಲೆ ಅಂಗಡಿಗಳ ಮೂಲಕ ದವಸದಾನ್ಯಗಳ ವಿತರಣೆ ಕಾರ್ಯಕ್ರಮಗಳನ್ನು ರೂಪಿಸುತ್ತಾನೆ. ಆದರೆ ಅವುಗಳು ಉಳ್ಳವರು ಮತ್ತು ಪಟ್ಟಭದ್ರ ಹಿತಾಸಕ್ತಿ ರಾಜಕಾರಣಿಗಳ ಕೈವಶವಾಗುತ್ತದೆ. ನಾಯಕ ಅಲ್ಲಿಯ ಈ ಕ್ಷುದ್ರ ಪರಿಸರಕ್ಕೆ ಎದುರು ಹೋರಾಡಲು ಯತ್ನಿಸಿ ವಿಫಲನಾಗುತ್ತಾನೆ. ಬಲಿಷ್ಠ ರಾಜಕಾರಣದ ಮುಂದೆ ಆತ ಅಸಹಾಯಕ. ಇದರಿಂದ ಅಂತಹ ಆರ್ಥಿಕ ಸಾಮಾಜಿಕ ಅಸಮಾನತೆಯ ವಿರುದ್ಧ ಹೋರಾಡಲು ಹುಟ್ಟಿಕೊಂಡಿರುವ ನಕ್ಸಲ್‌ವಾದವನ್ನು ಸಮರ್ಥಿಸುವ ಮಟ್ಟಕ್ಕೆ ಆತ ಆಲೋಚಿಸುತ್ತಾನೆ. ಇದರಿಂದ ಆತನ ನಂಬಿಕೆ, ಆದರ್ಶ ಹಾಗೂ ಸಿದ್ಧಾಂತಗಳು ಭ್ರಮನಿರಶನಗೊಳ್ಳುತ್ತವೆ. ಭ್ರಷ್ಟ ವ್ಯವಸ್ಥೆಯ ಮುಂದೆ ಆತನೂ ಹೊಂದಿಕೊಳ್ಳಬೇಕಾದ

ಸ್ಥಿತಿ ಮುಟ್ಟುವ ಸಂದರ್ಭ ಬಂದಾಗ ಆತ ತನ್ನ ಅಂತಃಸಾಕ್ಷಿಗೆ ವಿರುದ್ಧವಾಗಿ ನಡೆಯಲೂ ಆಗದೆ, ಪ್ರತಿಭಟಿಸಲೂ ಆಗದೆ ವರ್ಗಾವಣೆಯ ಹಾದಿಯನ್ನು ಹಿಡಿಯುತ್ತಾನೆ.

"ನಾನು ಮಂತ್ರಿಗಳನ್ನು ಅವರ ಮನೆಯಲ್ಲಿ ಭೇಟಿಯಾದ ಅವರು ನಕ್ಕು ಹೇಳಿದರು. 'ಇಂತಹ ಸಮಯದಲ್ಲಿ ಏನಾದರೂ ಮಾಡಿಕೊಳ್ಳಬೇಕು. ರಾಜಕೀಯವಾಗಿ ಉಳಿಯಬೇಕಾದರೆ ನಾವು ಪ್ರಾಮಾಣಿಕವಾಗಿ ಇರಲು ಸಾಧ್ಯವೇ ಇಲ್ಲ. ಎಲ್ಲರೂ ಗಾಂಧಿ, ನೆಹರುಗಳಾಗೋಕೆ ಸಾಧ್ಯವಿಲ್ಲ. ಹೈದರಾಬಾದ್‌ನ ಬಂಜಾರ್‌ಹಿಲ್ಸ್‌ನಲ್ಲಿ ನನ್ನದೊಂದು ಅಪಾರ್ಟ್‌ಮೆಂಟ್ ಇದೆ. ಅದು ನಿಮಗೆ ಇದ್ದು ಬಿಡಲಿ, ಈ ಜಿಲ್ಲೆಯಲ್ಲಿ ನಿಮ್ಮ ಕೈಕೆಳಗಿನ ಅಧಿಕಾರಿಗಳು ಸಣ್ಣಪುಟ್ಟ ತಪ್ಪುಗಳನ್ನು ಮಾಡುತ್ತಿರುತ್ತಾರೆ. ಅವನ್ನೆಲ್ಲ ಅಷ್ಟು ಸೀರಿಯಸ್ಸಾಗಿ ತೆಗೆದುಕೊಳ್ಳಬೇಡಿ. ನಿಮ್ಮನ್ನು ನೋಡಲು ಕಾಂಟ್ರಾಕ್ಟುದಾರರಿಗೆ ಹಾಗೂ ನಿಮ್ಮ ಕೈಕೆಳಗಿನ ಅಧಿಕಾರಿಗಳಿಗೆ ಬೇಕಾದರೆ ಹೇಳುತ್ತೇನೆ. ಇಂತಹ ಅವಕಾಶಗಳನ್ನು ಸದುಪಯೋಗಪಡಿಸಿಕೊಳ್ಳದಿದ್ದರೆ ಮೂರ್ಖರಾಗಿಬಿಡುತ್ತೇವೆ.. . . . ಮನುಷ್ಯ ಜನ್ಮವೆತ್ತುವುದು ಒಂದೇ ಸಾರಿ, ಮತ್ತು ಅದನ್ನು ಖುಷಿಯಿಂದ ಸಾರ್ಥಕ ಪಡಿಸಿಕೊಳ್ಳಬೇಕು. . . ಮೆದುಳಿಗೆ ಚೇಳು ಕುಟುಕಿತು. ಸ್ವಲ್ಪ ಖಾರವಾಗಿಯೇ ಹೇಳಿದೆ. 'ನನಗೆ ಅಂತಹ ಆಸೆಗಳೇನೂ ಇಲ್ಲ, ನಾನು ಮೂರ್ಖನಾಗಿಯೇ ಇರಲು ಇಷ್ಟಪಡುತ್ತೇನೆ. ಕಾಮಗಾರಿಗಳು ಸರಿಯಾಗಿ ನಡೆಯುತ್ತಿಲ್ಲ. ನಾನೇ ಖುದ್ದಾಗಿ ಪರಿಶೀಲಿಸಿದ್ದೇನೆ. ಕೂಲಿಯನ್ನು ಸರಿಯಾಗಿ ಪಾವತಿಸುತ್ತಿದ್ದಲ್ಲ ಇನ್ನು ಆಹಾರ ಧಾನ್ಯಗಳಂತೂ ತೀರಾ ಕಳಪೆ ದರ್ಜೆಯದ್ದಾಗಿದೆ. ಟ್ರಾನ್ಸ್‌ಪೋಷನ್ ಚಾರ್ಜಸ್ ಅಂತ ಕಲೆಕ್ಟ್ ಮಾಡ್ತಿದ್ದಾರೆ. ನೀವು ಜಿಲ್ಲಾ ಉಸ್ತುವಾರಿ ಮಂತ್ರಿಗಳು ತಂದೆ ಇದ್ದ ಹಾಗೆ, ಜಿಲ್ಲೆಯ ಜನತೆಗೆ, ನೀವು ಮನಸ್ಸು ಮಾಡಿದರೆ ಎಲ್ಲವನ್ನು ನಿಯಂತ್ರಿಸಬಹುದು. ಇಲ್ಲದಿದ್ದರೆ ಎಲ್ಲವನ್ನೂ ನನಗೆ ಬಿಟ್ಟುಬಿಡಿ, ನೀವು ಇಂಟರ್‌ಫಿಯರ್ ಆಗಬೇಡಿ, ಕೆಟ್ಟ ಹೆಸರು ಬರಬಾರದು ನಿಮಗೆ . . ."[೧೫]

ಮಂತ್ರಿಗಳು ಹಾಗೂ ಅಧಿಕಾರಿಗಳು ಜನಗಳಿಗೆ ಬಂದ ಅನುದಾನವನ್ನೆಲ್ಲಾ ನುಂಗುವುದು ಹಾಗೂ ಸಮಾಜದಲ್ಲಿ ಭ್ರಷ್ಟತೆ ಎದ್ದು ಕಾಣುವುದು. ಇದರಿಂದ ಬೇಸತ್ತು ಏನೂ ಮಾಡಲಾಗದೆ, ಕೈಕಟ್ಟಿ ಕೂರುವ ಪ್ರಸಂಗವನ್ನು ಕಾಣಬಹುದು. ಈ ಕಥೆಯು ಸಮಕಾಲೀನ ಸಮಾಜದ ಆರ್ಥಿಕ, ರಾಜಕೀಯ ಹಾಗೂ ಸಾಮಾಜಿಕ ಸ್ಥಿತ್ಯಂತರಗಳನ್ನು ಬಲವಾಗಿ ಈ ಕಥೆಯು ಚಿತ್ರಿಸುತ್ತದೆ.

ಹಂದ್ರಾಳರ ಮತ್ತೊಂದು 'ಪಾಲ್ ಪಾರೀಖತ್' ಕಥೆಯು ಒಂದು ಕುಟುಂಬದ ಏರಿಳಿತಗಳನ್ನು ಮಾನವ ಸಂಬಂಧಗಳನ್ನು ದಟ್ಟ ವಿಷಾದದೊಡನೆ ಸಮರ್ಥವಾಗಿ ಚಿತ್ರಿಸಿದ್ದಾರೆ. ತಂದೆಯು ಶ್ವಾಸಕೋಶದ ತೊಂದರೆಗೆ ಒಳಗಾಗಿದ್ದು, "ಆಂಧ್ರ ಜಮೀನುದಾರಿಕೆಯ ದರ್ಪ, ದೌಲತ್ತುಗಳೊಂದಿಗೆ ಮಾನವೀಯತೆಯನ್ನೂ ಉಸಿರಾಡಿಕೊಂಡಿದ್ದ ಭೀಮಕಾಯದ ಅಪ್ಪನ ಶರೀರ ಅಸ್ಥಿಪಂಜರದಂತಾಗಿ ಸೂಜಿಗಳ ಮೂಲಕ ಗ್ಲೂಕೋಸು, ಔಷಧಿ ಹೀರಿಕೊಂಡು ತುಕತುಕ ಅನ್ನುತ್ತಿದ್ದ ಪ್ರಾಣವನ್ನು ಹಿಡಿದಿಟ್ಟುಕೊಳ್ಳಲು ಅಖಂಡವಾಗಿ ಪ್ರಯತ್ನಿಸುತ್ತಿತ್ತು".

"ಊರ್ಕಡೆ ಏನಾಯ್ತೋ ಏನೋ. . . ಯಂಗಿದ್ದ ಮನೆ ಯಂಗಾಗೋಯ್ತು. ಆ ನನ್ಮಕ್ಳು ಮೇಲೆ ಏನೂ ಬಿಡ್ಬೇಡ. ಸಾಯೋವಾಗ ನಂಗೆ ನೆಮ್ದಿ ಇಲ್ಲದಂಗಾಯ್ತು. ಉಬ್ಬಸಗೊಂಡು ಹೇಳತೊಡಗಿದ. 'ಅವ್ರೇನು ಚಿಕ್ಕ ಮಕ್ಕಳಲ್ಲ, ಬದ್ಕೊ ದಾರಿ ನೋಡ್ಕೋತಾರೆ. ನೀನು ಸುಮ್ನೆ ಯಾಕ್ ತಲೆ ಕೆಡಿಸ್ಕೋತೀಯ, ವಾಸಿಯಾದ್ಮೇಲೆ ಊರ್ಗೇನೂ ಹೋಗ್ಬೇಡ. . . . ಮೈಸೂರ್ಗೆ ಬಂದು ಇದ್ಬಿಡು. ಅವ್ರೇನಾದ್ರೂ ಮಾಡ್ಕಂಬ್ಲಿ' ಎಂದು ಸಮಾಧಾನಪಡಿಸಿದೆ. ಪಕ್ಕದಲ್ಲೇ ನಿಂತಿದ್ದ ತಿಪ್ಪೇರಂಗಯ್ಯ 'ಏನ್ ಬದ್ಕ್ತಾರೋ ಏನೋ ಬಿಡಣ್ಣ ಅತ್ತ ಅದೇನ್ ಬಂದೈತೋ ಆ ಮನೆಗೆ, ಬೇರೆ ಯಾರ್ಗಾದ್ರೂ ಅಂತ ಅನುಕೂಲ ಇದ್ದಿದ್ರೆ ಮನೆನಾಗೆ ಬಂಗಾರ್ದ ಹೊಗೆ ಎಬ್ಸಿರೋರು. ಮೂರ್ತಣ್ಣ ಹುಚ್ನಾಯ್ ಥರ ಆಡ್ತಾನೆ. ಮೊನ್ನೆ ಯಾವ್ದೊ ಮಾತ್ಗೆ ಅಂಜಕ್ಕನ್ನ ಸೌದೆ ಸೀಳ್ನಾಗೆ ರಕ್ತ ಬರಂಗೆ ಬಡ್ದಾಕ್ದ. ಇನ್ ಗುಂಡಣ್ಣ ಫುಲ್ ಡ್ರಿಂಕ್ ಮ್ಯಾನ್ ಆಗೋಗೆವ್ನೆ. ಅವಯ್ಯನ್ನ ಕೇಳೋರ್ಯಾರು? ರಾಜಣ್ಣಂದು ಯಿಪ್ರೀತಿ ಕಕುಳಿತಿ ಒಬ್ಬರ ಕೈಯಾದ್ರೆ ಸರಿ, ಎಲ್ಲ ನಿನ್ನಿಂದ್ಲೆ ಬಿಡಣ್ಣ . . .ಕೇಳ್ದಾಗೆಲ್ಲ ಕಾಸ್ ಕೊಟ್ಟು ಕೊಟ್ಟು ಕೆಡಿಸ್ಬಿಟ್ಟೆ ಯಾರ್ಗೂ ಜವಬ್ದಾರಿ ಇಲ್ಲ, ಉರ್ಗೆಲ್ಲ ನ್ಯಾಯ ಹೇಳ್ತಿದ್ದ ಮನೆ ನ್ಯಾಯಾನೇ ಬೀದಿಗೆ ಬಿದ್ದೋಯ್ತು. ಹೊಟ್ಟೆ ಉರೀತೈತೆ. . . .' ಎಂದು ರಾಗ ಎಳೆದ"[೧೬]

ಒಂದು ಮನೆಯ ಪಾಲಾಗುವುದಕ್ಕೆ ಆ ಮನೆಯಲ್ಲಿ ಘಟಿಸುವ ಎರಡು ಮುಖ್ಯ ಸಂಗತಿಗಳು ಕಾರಣವಾಗುತ್ತದೆ. ಒಂದು ಮಗಳು ತಾನು ಪ್ರೀತಿಸಿದವನ ಜೊತೆ ಓಡಿಹೋದದ್ದು, ಎರಡು ಕಿರಿಯ ಮಗ ಕುಡಿತಕ್ಕೆ ಇಳಿದದ್ದು ಈ ಎರಡೂ ಸಂಗತಿಗಳಿಂದ ತಂದೆಗೆ ಆಘಾತವಾಗಿ ನಗರದ ಆಸ್ಪತ್ರೆಗೆ ಬಂದು ಸೇರುವ ಸ್ಥಿತಿ ಉಂಟಾಗುತ್ತದೆ. ತನ್ನ ತಂದೆ ಆಸ್ಪತ್ರೆಯಲ್ಲಿರುವ ಸಂಗತಿ ತಿಳಿದ ಓಡಿದ.

"ಮಾರನೆಯ ದಿನ ಅಪ್ಪನ ಹ್ಯಾಂಗ್ ಓವರ್ ಹಾಗೆಯೇ ಇತ್ತು. ಅಪ್ಪನ ಉಸಿರು ಇರುವಂತೆಯೇ ಮನೆ, ಜಮೀನು ಎಲ್ಲವನ್ನು ಪಾಲು ಮಾಡಿ ಬಿಸಾಡಿಬಿಡಬೇಕು ಅನ್ನಿಸಿತು. ಚಿಕ್ಕಂದಿನಲ್ಲಿ ತುಂಬಾ ಅನ್ಯೋನ್ಯವಾಗಿದ್ದ ನನ್ನ ತಮ್ಮಂದಿರು ಈಗೇಕೆ ಕಜ್ಜಿನಾಯಿಗಳಂತೆ ಕಚ್ಚಾಡುತ್ತಿದ್ದಾರೆ ಎಂಬುದರ ಬಗ್ಗೆ ತುಂಬಾ ತಲೆಕೆಡಿಸಿಕೊಂಡದ್ದುಂಟು. ಊರಿಗೆ ಹೋದಾಗಲೆಲ್ಲಾ ಒಬ್ಬರ ಇನ್ನೊಬ್ಬರ ಮೇಲೆ ದೂರು ಹೇಳುವುದು, ಅದು ಹಾಗೆ ಇದು ಹೀಗೆ ಎಂದು ಹಳಿಯುವುದು ನನಗೆ ಅಸಮಾಧಾನ ತರುತ್ತಿತ್ತು. ಹಾಗೆ ನೋಡಿದರೆ ಅಂತಹ ಕಷ್ಟಗಳೇನೂ ಇರಲಿಲ್ಲ. ಮದುವೆ, ವ್ಯವಸಾಯ ಮುಂತಾದ ಖರ್ಚುಗಳಿಗೆಲ್ಲ ನಾನೇ ಎಂಬ ವಿಷಯ ನನಗೆ ತಿಳಿದಿತ್ತು"[೧೭] ಕೆಲಸದ್ಲಲಿರುವ ಮಗ ಅಪ್ಪನನ್ನು ನೋಡಲು ಬರುತ್ತಾನೆ. ಅಪ್ಪನ ಕಾಯಿಲೆಯ ಬಗ್ಗೆ ಎಚ್ಚರವಹಿಸುತ್ತಾನೆ. ತನ್ನ ಬಾಲ್ಯದಲ್ಲಿ ತನಗಾಗಿ ತನ್ನ ಅಪ್ಪ ತನ್ನ ದೇಹ ಆದಾಯ ಶ್ರಮವನ್ನೆಲ್ಲ ತನಗಾಗಿ ಒತ್ತಾಸೆಯಾಗಿ ಇಟ್ಟವನು, ತನ್ನ ಓದಿಗಾಗಿ ಹಗಲಿರುಳು ಹಂಬಲಿಸಿದವನು. ತನ್ನನ್ನು ಡಿ.ಸಿ. ಮಾಡಬೇಕೆಂದು ಕನಸು ಕಂಡವನು. ಅಪ್ಪಮಗನ ಸಂಬಂಧ ಗಾಢವಾದದ್ದು. ಚಿಕ್ಕಂದಿನಲ್ಲಿ ತನ್ನೂರಿನ ಜಯಮಂಗಲಿ ನದಿಯಲ್ಲಿ ಈಸಿದ ನೆನಪು ಅವನಿಗಿನ್ನೂ ಮಾಸದು. ಅಧಿಕಾರಿಯಾಗಿ ನಗರ ಸೇರಿದ ಮೇಲೆ ಆ ಬಾಲ್ಯದ ಹಳ್ಳಿಯ ತತ್ಸರ ಅನುಭವಗಳು ಈಗ ಮತ್ತೆ ಅವನಿಗೆ ಮರಳಿಬಾರವು. ಅವನಿಗೆ ಉದ್ಯೋಗವಿದೆ, ಕಾರಿದೆ, ಬಂಗಲೆಯಿದೆ, ಹೆಂಡತಿ ಇದ್ದಾಳೆ, ಮಕ್ಕಳಿದ್ದಾರೆ. ಆದರೆ ತನ್ನೂರಿನ ಬಾಲ್ಯದ ಅನುಭವಗಳು ಮಾತ್ರ

ಬರೀ ನೆನಪಾಗಿ ಕಾಡುತ್ತಿವೆ. ಹಳ್ಳಿಯ ಸಂಬಂಧಗಳು ಸಡಿಲಗೊಂಡಿವೆ. ಪ್ರೀತಿ ವಿಶ್ವಾಸಗಳು ಮಾಯವಾಗಿವೆ. ಕಡೆಗೂ ತನ್ನ ತಂದೆಯನ್ನು ಉಳಿಸಿಕೊಳ್ಳಲಾರ. ಬರೀ ಕರ್ತವ್ಯಪಾಲಕನಂತೆ ನಿಲ್ಲುತ್ತಾನೆ.

"ತಿಥಿ ಆದ ಮಾರನೆಯ ದಿನ ಬೆಳಿಗ್ಗೆ ಮನೆಯಲ್ಲಿಯೇ ಪಂಚಾಯ್ತಿ ಶುರುವಾಯಿತು. ದೊಡ್ಡ ಮಾವ, ಆನಂದಣ್ಣ ಮತ್ತು ನಾವು ನಾಲ್ಕು ಜನ ಅಣ್ಣತಮ್ಮಂದಿರು, ಮಧುಗಿರಿಗೆ ರಿಜಿಸ್ಟ್ರೇಷನ್‌ಗೆ ಹೋಗುವುದಕ್ಕೆ ಮೊದಲೇ ಇಲ್ಲೇ ಎಲ್ಲ ಸೆಟ್ಲ್ ಮಾಡಿಕೊಂಡು ಹೋದರೆ ಬೇಗ ಕೆಲಸ ಮುಗಿಯುತ್ತದೆ ಎಂದು ಮಾವ ಹೇಳಿದ್ದ. ಬೋರ್‌ವೆಲ್ ಇರುವ ಜಮೀನು ಬೇಕೆಂದು ದೇವರಾಜ ಮತ್ತು ಮೂರ್ತಣ್ಣನ ನಡುವೆ ಸ್ವಲ್ಪ ಜಟಾಪಟಿ ನಡೆಯಿತು"[೧೮]

ಅಣ್ಣತಮ್ಮಂದಿರಿಗೆಲ್ಲಾ ತಂದೆಯು ಮಾಡಿರುವ ಆಸ್ತಿಯನ್ನು ಭಾಗ ಮಾಡಿಕೊಡುತ್ತಾನೆ. ತಂದೆಯ ಸಾವು ಅವನಿಗೆ ಒಂದು ಗಾಢ ಅನುಭವವಾಗಿ ಕಾಡುತ್ತದೆ. ತನ್ನ ವಿದ್ಯೆಗೆ, ತನ್ನ ಇಂದಿನ ಸ್ಥಿತಿಗೆ ಕಾರಣನಾದ ತಂದೆಯ ದರ್ಪದ ಬಗ್ಗೆ ಹೆಮ್ಮೆಯನ್ನಿಟ್ಟುಕೊಂಡಿದ್ದನು. ಆದರೆ ಆ ಕುಟುಂಬಕ್ಕೆ ಇಷ್ಟೆಲ್ಲಾ ಮಾಡಿದರೂ ಆ ರಕ್ತ ಸಂಬಂಧಿಗಳು ತನಗೆ ಪ್ರೀತಿ ತೋರುತ್ತಿಲ್ಲವಲ್ಲ ಎಂಬ ವಿಷಾದವೂ ಅವನಿಗೆ ಇದೆ.

"ತಾಲ್ಲೂಕು ಆಫೀಸಿನ ಹತ್ತಿರ ಸ್ಟಾಂಪ್ ಪೇಪರ್ ಮುಗಿದುಹೋಗಿತ್ತು. ನಾನೇ ತುಮಕೂರಿಗೆ ಹೋಗಿ ಸ್ಟಾಂಪ್ ಪೇಪರ್ ತಂದಿದ್ದಾಯಿತು. ಪಾರ್ಟಿಷನ್ ಡೀಡ್ ಮೇಲೆ ಸಹಿಗಳನ್ನು ಹಾಕಿ ಹೆಬ್ಬೆಟ್ಟುಗಳನ್ನು ಒತ್ತಿದ್ದೆವು. ನನಗೇಕೋ ಒಂದು ಕ್ಷಣ ಅಪ್ಪನ ದೇಹವನ್ನು ನಾವೆಲ್ಲರೂ ಸೇರಿ ಒಂದೊಂದು ಅಂಗವನ್ನು ಕಿತ್ತುಕೊಳ್ಳುತ್ತಿರುವಂತೆ ಭಾಸವಾಯಿತು. ಎಲ್ಲವೂ ಮುಗಿಯುವ ಹೊತ್ತಿಗೆ ನಾಲ್ಕು ಗಂಟೆಯಾಗಿತ್ತು. ನಾಳೆ ಹೋಗುವೆಯಂತೆ ಊರಿಗೆ ಬಾ ಎಂದು ಎಲ್ಲರೂ ಬಲವಂತಪಡಿಸಿದರು. ನಾನು ಒಪ್ಪದೆ ಇನ್ನಾದರೂ ಎಲ್ಲರೂ ಅನ್ಯೋನ್ಯವಾಗಿರುವಂತೆ ಹೇಳಿ ಕಾರು ಸ್ಟಾರ್ಟ್ ಮಾಡಿದೆ. 'ಮನೆ ಪಾಲಾಯ್ತು ಅಂತ ಊರನ್ನ ಮರೀಬೇಡ ಸ್ವಾಮಿ. ಆಗಾಗ ಬಂದು ಹೋಗು' ಎಂದು ತಿಪ್ಪೇರಂಗಯ್ಯ ಬಗ್ಗಿ ಹೇಳಿದಾಗ ನನಗೆ ಹೃದಯ ಭಾರವಾದಂತಾಯಿತು. ಏಕೋ ಎಲ್ಲರ ಕಣ್ಣುಗಳಲ್ಲೂ ನೀರು ಇಣುಕಿತ್ತು. ಕಾರು ಮುಂದೆಕ್ಕೆ ಓಡಿದಂತೆಲ್ಲ ಕಾರಿನ ಸೈಡ್ ಮಿರರ್‌ನಲ್ಲಿ ಎಲ್ಲರೂ ಸಣ್ಣಗಾಗಿ. . . ನನ್ನ ಕಾರಿನತ್ತೇ ಮುಖ ಮಾಡಿ ನಿಂತಿರುವುದು ಮಧುಗಿರಿ ಬೆಟ್ಟ ಅಡ್ಡ ಬರುವವರೆಗೂ ಕಾಣುತ್ತಿತ್ತು"[೧೯]

'ಪಾಲ್ ಪಾರಿಕತ್ತು' ಕತೆಯು ಹೀಗೆ ಸಂಬಂಧಗಳನ್ನು ಬೆಲೆ ಕಟ್ಟುತ್ತಾ ಹೋಗುತ್ತದೆ. ಮಧುಗಿರಿ, ತುಮಕೂರು, ಬೆಂಗಳೂರು, ಮೈಸೂರು ಮುಂತಾದ ಅಚ್ಚಕನ್ನಡದ ಪ್ರದೇಶಗಳಲ್ಲಿ ಈ ಕಥೆ ಘಟಿಸುತ್ತದೆ ಹಂದ್ರಾಳರ ಅಭಿವ್ಯಕ್ತಿಯಲ್ಲಿ ಉಂಟಾಗಿರುವ ಬೆಳವಣಿಗೆಗೆ ಈ ಕಥೆ ಸಾಕ್ಷಿಯಾಗಿದೆ ಎಂದು ತಿಳಿಯಬಹುದು.

ಹಂದ್ರಾಳರ ಮತ್ತೊಂದು ಕಥೆಯಾದ 'ಏಳೇಳು ಸಮುದ್ರಗಳಾಚೆಗೂ' ಒಂದು ರೀತಿಯ ವಿಭಿನ್ನವಾದ ಕತೆಯೆಂತಲೂ ಕರೆಯಬಹುದು. ಪ್ರಿಯತಮರಿಬ್ಬರ ಅಪ್ಯಾಯಮಾನ ಸಮೃದ್ಧ ನೆನೆಪುಗಳ ಮೂಲಕ ತೆರೆದುಕೊಳ್ಳುವ ಕಥೆಯಾಗಿದೆ. ಗಂಡಿಗೆ ಬೇರೆ ಮದುವೆಯಾಗಿದೆ, ಹೆಣ್ಣಿಗೂ ಬೇರೆ ಮದುವೆಯಾಗಿತ್ತು. ಅತ್ಯಾಧುನಿಕವಾದ ನಗರದ ವಸ್ತುವನ್ನು ಅತ್ಯಂತ ಸಮರ್ಥವಾಗಿ ನಿರ್ವಹಿಸುವ ಕೌಶಲ ಈ ಕಥೆಯಲ್ಲಿ ಎದ್ದು ಕಾಣುತ್ತದೆ.

"ಹಸಿವು, ಹೆಣ್ಣು, ಮಣ್ಣು, ಧರ್ಮ ಮತ್ತು ಕಣ್ಣೀರು ಜಾಗತಿಕ ಇತಿಹಾಸದ ವರ್ಣರಂಜಿತ ಪುಟಗಳ ಸೃಷ್ಟಿ ಮೂಲ. ಅನಾದಿಕಾಲದಿಂದ ವರ್ತಮಾನದವರೆಗೂ ಎಲ್ಲಾ ಇತಿಹಾಸಕಾರರ, ತತ್ವಜ್ಞಾನಿಗಳ, ಸಾಹಿತಿಗಳ, ಬುದ್ಧಿಜೀವಿಗಳ ಬತ್ತಳಿಕೆಗಳಲ್ಲೂ ಇವೇ ಬಾಣಗಳು. ಬಹುಶಃ ಎಲ್ಲಾ ಕಾಲಕ್ಕೂ ಎಲ್ಲರನ್ನೂ ಮಿಕ್ಕೆಲ್ಲ ಅಂಶಗಳಿಗಿಂತಲೂ ಹೆಚ್ಚಾಗಿ ಕಾಡಿದ್ದು ಹೆಣ್ಣು. ನೀನೇನೂ ಇದಕ್ಕೆ ಅಪವಾದವಲ್ಲ. ನೀವು ಸಾಹಿತಿಗಳು, ಪ್ರೇಮಿಗಳನ್ನು ಕೊಲ್ಲುತ್ತೀರಿ. . . . ನಿಜವಾಗಿಯೂ ನಿರ್ದಯಿಗಳು .. . . ಹೃದಯ ಶೂನ್ಯರು ಜೊತೆಗೆ ಅವಿವೇಕಿಗಳೂ ಕೂಡ . . . . ."[೨೦]

'ಯೂ ಸಿಲ್ಲಿ ಫೆಲೋ . . .' ಎಂದು ನನ್ನ ಹಣೆಯ ಮೇಲೆ ತುಟಿಗಳನ್ನೊತ್ತಿದ್ದೆ. ಓಹ್! ಅದೆಂತಹ ರೋಮಾಂಚಕ ಕ್ಷಣ 'ಏಯ್ ಹುಡುಗಿ .. . . ! ನನಗೇನಾದರೂ ಹದಿನೆಂಟು ವರ್ಷಕ್ಕೆ ಮದುವೆಯಾಗಿದ್ದರೆ, ನಿನ್ನಷ್ಟೆ ವಯಸ್ಸಿನ ಮಗಳಿರುತ್ತಿದ್ದಳು ನನಗೆ. ಏನಿದೆಲ್ಲ ವಿಚಿತ್ರ ಆಕರ್ಷಣೆ ನನಗೊಂದು ಅರ್ಥವಾಗುತ್ತಿಲ್ಲ. ಮದುವೆಯಾಗಿರುವವನು ನಾನು . . . ಆಗಸದಲ್ಲಿನ ನಕ್ಷತ್ರಗಳಲ್ಲಿ ದೃಷ್ಟಿ ನೆಟ್ಟು ಹೇಳಿದ್ದೆ. ನಕ್ಷತ್ರಗಳನ್ನು ಮರೆ ಮಾಡಿ ನೀಳ ಮುಂಗುರುಳನ್ನು ನನ್ನ ಮುಖದ ಮೇಲೆ ಹರಡುತ್ತಾ ನೀನು ಹೇಳಿದ್ದೆ', 'ಎಲ್ಲಾ ಫಿಲಾಸಫಿ ಹೇಳ್ಬೇಡ. ಹೇಳದೆ ಕೇಳದೆ ನೀನೂ ಹಿಪೋಕ್ರೇಟ್ ಆಗ್ತಾ ಇದೀಯ"[೨೧]

ಈ ಕಥೆಯು ಇವರಿಬ್ಬರು ಪರಸ್ಪರ ಚೆನ್ನಾಗಿ ಬಲ್ಲ ಗಂಡು ಹೆಣ್ಣು ಅತ್ಯಾಧುನಿಕ ಆರೋಗ್ಯಪೂರ್ಣ ಮನಸ್ಸಿನೊಂದಿಗೆ ತಮ್ಮ ನೆನಪುಗಳನ್ನು ಅನಾವರಣ ಮಾಡಿಕೊಳ್ಳುವ ಕಥೆಯಾಗಿದೆ. "ನೆನಪಿದೆಯಾ? ಯುನಿವರ್ಸಿಟಿಯ ಗುಲ್‌ಮೋಹರ್ ತೋಪಿನ ಮಧ್ಯೆ ಬೆಳದಿಂಗಳ ರಾತ್ರಿಯಲ್ಲಿ ನಡೆಯುತ್ತಿದ್ದೆವು. ನನ್ನದೊಂದು ಪ್ರೇಮಕಥೆ ದೀಪಾವಳಿ ಕಥಾಸ್ಪರ್ಧೆಯಲ್ಲಿ ಮೊದಲನೆಯ ಬಹುಮಾನ ಗಳಿಸಿತ್ತು. ಅಂದು ಸಂಜೆ ಲೈಬ್ರರೀಲಿ ಕುಳಿತು ಕಥೆಯನ್ನು ಓದಿರಬೇಕು ನೀನು, ಗುಲ್‌ಮೋಹರ್ ತೋಪನ್ನು ದಾಟಿ ಯೂನಿವರ್ಸಿಟಿಯ ದೊಡ್ಡ ಸಂಪಿಗೆ ಮರದ ಕೆಳಗೆ ನಡೆಯುತ್ತಿರುವಾಗ ಫಕ್ಕನೆ ಅಪ್ಪಿ ಮುದ್ದಿಸಿದ್ದೆ ನನ್ನನ್ನು. "ನಿನ್ನ ಕಥೆಗೆ ಬಹುಮಾನ ಬಂದಿದ್ದಕ್ಕೆ ನನ್ನ ಕಾಣಿಕೆ ಇದು.. . . .' ಎಂದು ಬೆನ್ನಿನ ಮೇಲೆ ಗುದ್ದಿದ್ದೆ. 'ನೀನು ಸಂಪಿಗೆ ಹೂವು ಇದ್ದಂತೆ. . .' ಹೇಳಿದ್ದೆ ನಾನು. . .' ಸಂಪಿಗೆಯ ಕಡು ವಾಸೆ ಅಲ್ಲೆಲ್ಲ ಹರಡಿಕೊಂಡಿತ್ತು. "ನಿನಗೆ ಸಂಪಿಗೆ ಹೂವು ಇಷ್ಟ ಅಂತ ನನಗೆ ಚೆನ್ನಾಗಿ ಗೊತ್ತು. ಆದರೆ ಬೇರೆಲ್ಲ ಹೂವುಗಳಿಗಿಂತ ಸಂಪಿಗೆ ಘಾಟು. . .' ಎಂದಿದ್ದೆ. 'ಚಂದಿರ ನೋಡುತ್ತಿದ್ದಾನೆ. . . ಅಲ್ಲಿ' ಆಕಾಶಧ ಕಡೆ ಮುಖ ಮಾಡಿ ಹೇಳಿದ್ದೆ ನಾನು. ನೀನೂ ಸಹ ಆಕಾಶದ ಕಡೆ ಕಣ್ಣು ನೆಟ್ಟು 'ಚಂದ್ರನೇನು . . .. . ಸೂರ್ಯನೊಂದಿಗೆ ಎಲ್ಲರೂ ನೋಡಲಿ, ನನಗೇನೂ ಲೆಕ್ಕವಿಲ್ಲ. ಎಂತಹ ಅದ್ಭುತ ಕತೆಯನ್ನು ಬರೆದಿದ್ದಿಯೋ . . . . ಯೂ ಕಿಲ್ಲರ್ ಆಫ್ ದಿ ಲಿವ್ವಿಂಗ್ ಹಾರ್ಟ್ಸ್' ಸಂಭ್ರಮದಿಂದ ಹೇಳಿದ್ದೆ"[೨೨]

ಈ ಕಥೆಯಲ್ಲಿ ಪರಸ್ಪರ ಆತ್ಮಶೋಧನೆ ಇದೆ. ಮದುವೆಯಾಗದೆ ತಾಯಿಯಾಗುವ ಆಸೆ ಇಲ್ಲಿ ಈಡೇರುತ್ತದೆ. ಇವರಿಬ್ಬರು ಒಂದು ಒಳ್ಳೆಯ ಮನಸ್ಸಿನಿಂದ ಅವರಿಬ್ಬರು ಒಂದಾಗಿ ಸುಖವನ್ನು ಅನುಭವಿಸುವುದನ್ನು ಕಾಣುತ್ತೇವೆ. ಇವರಿಬ್ಬರ ಹೊಂದಾಣಿಕೆ ಕಾಣುತ್ತದೆ. ಮದುವೆಯಾಗದೆ ತಾಯಿತನವನ್ನು

ಸ್ವೀಕರಿಸುವವಳು. ಅವಳು ತನ್ನ ಪ್ರೀತಿಗಾಗಿ ಅವಳು ತನ್ನ ಸರ್ವಸ್ವವನ್ನು ದಾನ ಮಾಡಿದ್ದಳು. ಅಗಲಿಕೆಯ ಸಂದರ್ಭ ಬಂದಾಗ ಬಹಳ ನೋವನ್ನು ಪಡುತ್ತಾಳೆ.

'ನೀನು ಲಂಡನ್‌ಗೆ ಹೋಗುವ ಹಿಂದಿನ ದಿನ ಇನ್ನಿಲ್ಲದ ಹಿಂಸೆಯಾಗಿತ್ತು ನನಗೆ. ಹೇಳಿ ಹೋಗಲು ಮನೆಗೆ ಬಂದ ನಿನ್ನ ಕಣ್ಣುಗಳಲ್ಲಿ ಖುಷಿ ಮತ್ತು ಬೇಸರಗಳೆರಡೂ ತುಂಬಿರುವುದನ್ನು ನನ್ನ ಗಮನಕ್ಕೆ ಬಂದಿತ್ತು. ಎಷ್ಟಾದರೂ ನಾನು ಸೈಕಾಲಜಿ ವಿದ್ಯಾರ್ಥಿಯಲ್ಲವೆ? 'ಅಲ್ಲೆ ಪರ್ಮನೆಂಟಾಗಿ ಸೆಟ್ಲ್ ಆದ್ರೂ ಊರಿಗೆ ಬರ್ತಾನೆ ಇರ್ತೀನಿ. ಅಪ್ಪ ಅಮ್ಮನ ಜೊತೇಲಿ ಅಲ್ಲಿ ನಾನೊಬ್ಬೆ ಹೇಗಿರೋದು ಅಂತ ಭಯ ಕಣೋ . . . ನೀವು ಅಲ್ಲಿಗೆ ಬಂದ್ ಬಿಡಿ. ಅಪ್ಪನ ಬಿಸಿನೆಸ್ ಆರ್ಗನೈಸೇಷನ್‌ಗೆ ನಿನ್ನನ್ನೇ ಮ್ಯಾನೇಜರ್ ಮಾಡಲು ಹೇಳ್ತಿನಿ . . .' ನಿನಗೆ ಎಲ್ಲವೂ ತಮಾಷೆಯಾಗಿಯೇ ಕಾಣಿಸುತ್ತಿತ್ತು. ಹೊರಡುವಾಗ ನನ್ನ ಕೈ ಕುಲುಕುತ್ತಾ ಗಟ್ಟಿಯಾಗಿ ಅದುಮಿದ್ದೆ. ನಿನ್ನ ಕಣ್ಣಂಚಿನಲ್ಲಿ ಇಣುಕಿದ್ದ ಸಣ್ಣ ನೀರ ಹನಿ ನೀನು ಹೋದ ದಿನ ರಾತ್ರಿ ಪೂರ್ತಿ ನನ್ನ ಕಣ್ಣುಗಳಲ್ಲಿ ಕೋಡಿ ಹರಿಸಿತ್ತು. ಏಕೆ ಇದೆಲ್ಲ ಎಂದು ಎಷ್ಟು ಯೋಚಿಸಿದರೂ ಉತ್ತರ ಮಾತ್ರ ಶೂನ್ಯವಾಗಿ, ಆ ಶೂನ್ಯದಲ್ಲಿ ನೀನು ವಿಜೃಂಭಿಸುತ್ತಿದ್ದೆ"[೨೩]

ಮದುವೆಯಾಗದೇ ತಾಯ್ತನ ಪಡೆದು ಕಾಲ ಕಳೆಯಬೇಕೆಂದು, ನಕ್ಷತ್ರ, ಚಂದ್ರ, ಮಲೆನಾಡಿನ ಬಣ್ಣಬಣ್ಣದ ಹೂಗಳ ಮರಗಿಡಗಳನ್ನು ನೋಡುತ್ತಾ ವಿಶಾಲವಾದ ಕಾಲವನ್ನು ಕಳೆಯಲು ಪ್ರಯತ್ನಿಸುತ್ತಾಳೆ. ಜೀವನದ ನಶ್ವರತೆ, ಹಾಗೂ ಸೌಂದರ್ಯವನ್ನು ಗಂಭೀರವಾಗಿಯೂ, ತಮಾಷೆಯಿಂದಲೂ ವಿಶ್ಲೇಷಿಸುವ ಮನಸ್ಸುಗಳನ್ನು ಇವರಿಬ್ಬರಲ್ಲಿ ಕಾಣಲಾಗುತ್ತದೆ. ಎಷ್ಟಾದರೂ ಸತ್ಯವನ್ನು ಬಚ್ಚಿಟ್ಟು ಸುಖ ಪಡುವವರು ನಾವು ಎಂಬ ಮಾತು ನಿಜಕ್ಕೂ ಸತ್ಯ ಅಲ್ಲವೆ ಎಂಬುದು ಈ ಕಥೆಯಿಂದ ಗೊತ್ತಾಗುತ್ತದೆ.

ಹಂದ್ರಾಳರ ಕಥೆಗಳಲ್ಲಿ ಕಾಣುವ ಶೋಷಣೆ, ಜೀತಗಾರಿಕೆ, ನಮ್ಮ ಕಣ್ಣ ಮುಂದೆ ತರುತ್ತದೆ. ಹಂದ್ರಾಳರ ಕಥೆಗಳು ಇಂದಿಗೂ ಹಾಗೂ ಮುಂದಿನ ಪೀಳಿಗೆಗೂ ಅಧ್ಯಯನವನ್ನು ನಡೆಸಬಹುದಾಗಿದೆ. ಇಲ್ಲಿಯವರೆಗೆ ಹಂದ್ರಾಳರ ಕಥೆಗಳ ಸಮಗ್ರದ ಹಿನ್ನಲೆಯಲ್ಲಿ ಗಮನಿಸಲಾಗಿದೆ.

ಅಡಿ ಟಿಪ್ಪಣಿಗಳು :

೧.ಸಮ್ಮುಖ– ಕೆ.ನರಸಿಂಹಮೂರ್ತಿ, ಪುಟಸಂಖ್ಯೆ–೧೮೯

೨. ವಿಮರ್ಶೆಗಳ ಪರಿಭಾಷೆ – ಓ.ಎಲ್.ನಾಗಭೂಷಣ, ಪುಟಸಂಖ್ಯೆ–೨೭೯

೩.ವಿಮರ್ಶೆ ಪರಿಭಾಷೆ– ಓ.ಎಲ್.ನಾಗಭೂಷಣ, ಪುಟ–೨೭೭

೪. ಹಂದ್ರಾಳರ ಕಥಾ ಜಗತ್ತು –೧, ಕೇಶವರೆಡ್ಡಿ ಹಂದ್ರಾಳ, ಪುಟಸಂಖ್ಯೆ–೨

೫. ಹಂದ್ರಾಳರ ಕಥಾಜಗತ್ತು –೧, ಕೇಶವರೆಡ್ಡಿ ಹಂದ್ರಾಳ, ಪುಟಸಂಖ್ಯೆ–೩

೬, ಹಂದ್ರಾಳರ ಕಥಾ ಜಗತ್ತು–೧, ಕೇಶವರೆಡ್ಡಿ ಹಂದ್ರಾಳ, ಪುಟಸಂಖ್ಯೆ–೭

೭. ಹಂದ್ರಾಳರ ಕಥಾಜಗತ್ತು – ೧, ಕೇಶವರೆಡ್ಡಿ ಹಂದ್ರಾಳ, ಪುಟಸಂಖ್ಯೆ – ೨೪೬

೮. ಹಂದ್ರಾಳರ ಕಥಾಜಗತ್ತು – ೧, ಕೇಶವರೆಡ್ಡಿ ಹಂದ್ರಾಳ, ಪುಟಸಂಖ್ಯೆ–೨೫೧

೯. ಆಯ್ದ ಕವಿತೆಗಳು– ಡಾ.ಸಿದ್ಧಲಿಂಗಯ್ಯ, ಪುಟಸಂಖ್ಯೆ–೪೦

೧೦. ಹಂದ್ರಾಳರ ಕಥಾಜಗತ್ತು–೨, ಕೇಶವರೆಡ್ಡಿ ಹಂದ್ರಾಳ, ಪುಟಸಂಖ್ಯೆ–೯೩

೧೧. ಹಂದ್ರಾಳರ ಕಥಾಜಗತ್ತು–೨, ಕೇಶವರೆಡ್ಡಿ ಹಂದ್ರಾಳ, ಪುಟ–೧೦೧

೧೨. ಹಂದ್ರಾಳರ ಕಥಾಜಗತ್ತು–೨, ಕೇಶವರೆಡ್ಡಿ ಹಂದ್ರಾಳ, ಪುಟ–೩೭೫

೧೩. ಹಂದ್ರಾಳರ ಕಥಾಜಗತ್ತು–೨, ಕೇಶವರೆಡ್ಡಿ ಹಂದ್ರಾಳ, ಪುಟ–೩೮೧

೧೪. ಹಂದ್ರಾಳರ ಕಥಾಜಗತ್ತು–೨, ಕೇಶವರೆಡ್ಡಿ ಹಂದ್ರಾಳ, ಪುಟ–೩೮೭

೧೫. ಹಂದ್ರಾಳರ ಕಥಾಜಗತ್ತು–೨, ಕೇಶವರೆಡ್ಡಿ ಹಂದ್ರಾಳ, ಪುಟ–೩೮೯

೧೬. ಹಂದ್ರಾಳರ ಕಥಾ ಜಗತ್ತು –೧, ಕೇಶವರೆಡ್ಡಿ ಹಂದ್ರಾಳ, ಪುಟಸಂಖ್ಯೆ–೪೨೩

೧೭. ಹಂದ್ರಾಳರ ಕಥಾ ಜಗತ್ತು –೧, ಕೇಶವರೆಡ್ಡಿ ಹಂದ್ರಾಳ, ಪುಟ–೪೫೭

೧೮. ಹಂದ್ರಾಳರ ಕಥಾ ಜಗತ್ತು –೧, ಕೇಶವರೆಡ್ಡಿ ಹಂದ್ರಾಳ, ಪುಟ–೪೩೦

೧೯. ಹಂದ್ರಾಳರ ಕಥಾ ಜಗತ್ತು –೧, ಕೇಶವರೆಡ್ಡಿ ಹಂದ್ರಾಳ, ಪುಟ–೪೩೧

೨೦. ಹಂದ್ರಾಳರ ಕಥಾಜಗತ್ತು–೨, ಕೇಶವರೆಡ್ಡಿ ಹಂದ್ರಾಳ, ಪುಟಸಂಖ್ಯೆ–೧೪೨

೨೧. ಹಂದ್ರಾಳರ ಕಥಾಜಗತ್ತು–೨, ಕೇಶವರೆಡ್ಡಿ ಹಂದ್ರಾಳ, ಪುಟ–೧೪೩

೨೨. ಹಂದ್ರಾಳರ ಕಥಾಜಗತ್ತು–೨, ಕೇಶವರೆಡ್ಡಿ ಹಂದ್ರಾಳ, ಪುಟ–೧೪೭

೨೩. ಹಂದ್ರಾಳರ ಕಥಾಜಗತ್ತು–೨, ಕೇಶವರೆಡ್ಡಿ ಹಂದ್ರಾಳ, ಪುಟ–೧೫೧

ಅಧ್ಯಾಯ –೩

ಹಂದ್ರಾಳರ ಕಥೆಗಳಲ್ಲಿ ಭಾಷೆಯ ಚೆಲುವು

ಅಧ್ಯಾಯ -೩

ಹಂದ್ರಾಳರ ಕಥೆಗಳಲ್ಲಿ ಭಾಷೆಯ ಚೆಲುವು

ಯಾವುದೇ ಸಾಹಿತ್ಯವನ್ನು ರಚಿಸಬೇಕಾದರೆ ಭಾಷೆಯು ಮುಖ್ಯವಾದ ಪಾತ್ರವನ್ನು ವಹಿಸುತ್ತದೆ. ಭಾಷೆಯಿಂದಲೇ ಎಲ್ಲಾ ಸಾಹಿತ್ಯದ ನೆಲೆಗಳನ್ನು ತಿಳಿಯಬಹುದು. ಜನರು ಜನರು ಬಾಯಿಯಿಂದ ಆಡುತ್ತಿದ್ದ ಭಾಷೆಯು ಮೂಲ ದ್ರಾವಿಡ ಭಾಷೆಯಾಗಿದೆ. ಭಾರತದಲ್ಲಿ ತನ್ನದೇ ಆದಂತಹ ಹಲವು ಉಪಭಾಷೆಗಳಾಗಿ ಒಡೆಯಿತು. ಭಾಷೆಯು ಮಾನವನ ತನ್ನ ದೈನಂದಿನ ಬದುಕಿಗೆ ಸೃಷ್ಟಿಸಿಕೊಂಡಿರುವ ಸಂಪರ್ಕಸಾಧನವಾಗಿದೆ. ಏನನ್ನಾದರೂ ಅಭಿವ್ಯಕ್ತಪಡಿಸಬೇಕೆಂಬ ಆಸೆ ಮಾನವನಲ್ಲಿ ಉಂಟಾದಾಗ ಬಾಯಿಂದ ಹೊರಬಂದ ಶಬ್ದವು ಗಾಳಿಯಲ್ಲಿ ಪ್ರವಹಿಸಿ ಕೇಳುಗನ ಕಿವಿಯ ತಮಟೆಯ ಮೇಲೆ ಬಿದ್ದು ಜ್ಞಾನವಾಹಿಗಳ ಮೂಲಕ ನೆನಪಿನ ಕೋಶಕ್ಕೆ ತಾಗಿ ಕೇಳುಗನಲ್ಲಿ ಪ್ರತಿಕ್ರಿಯೆ ಉಂಟು ಮಾಡಲು ಕಾರಣವಾಗುವುದೇ ಭಾಷೆಯಾಗಿದೆ. ಭಾಷೆಯನ್ನು ಒಂದು ಸೂತ್ರ ರೂಪವಾಗಿ ಹಿಡಿದಿಡುವುದು ತುಂಬ ಕಷ್ಟದಾಯಕ. ಭಾಷೆಯನ್ನು ಕುರಿತಂತೆ ಹಲವಾರು ವಿದ್ವಾಂಸರ ವ್ಯಾಖ್ಯೆಗಳನ್ನು ನೀಡಿದ್ದಾರೆ. "ಮೊಟ್ಟ ಮೊದಲು ಭಾಷೆಯನ್ನು ಕುರಿತು ಪ್ಲೇಟೋ ಮಹಾಶಯನು "ಧ್ವನಿ ಸಂಕೇತಗಳಿಂದ, ಮನುಷ್ಯನ ವಿಚಾರಗಳನ್ನು ಅಭಿವ್ಯಕ್ತಗೊಳಿಸುವ ಸಾಧನ" ಎಂದು ಅಭಿಪ್ರಾಯಪಟ್ಟನು. ಅಂತೆಯೇ "ಪದಗಳ ಮೂಲಕ ವಿಚಾರಗಳನ್ನು ಅಭಿವ್ಯಕ್ತಗೊಳಿಸುವುದೇ ಭಾಷೆ" ಎಂದು ಹೆನ್ರಿಸ್ವೀಟೆ ಹೇಳಿದ್ದಾನೆ. ವೆನ್ರಿಚ್‌ನ ಪ್ರಕಾರ "ಭಾಷೆ ಎಂಬುದೊಂದು ಬಗೆಯ ಸಂಕೇತ. ಈ ಸಂಕೇತಗಳ ಮುಖಾಂತರ ಮಾನವ ತನ್ನ ವಿಚಾರಗಳನ್ನು ವಿನಿಮಯ ಮಾಡಿಕೊಳ್ಳುವುದೇ ಭಾಷೆ". ಕೆಲವು ವಿದ್ವಾಂಸರ ಅಭಿಪ್ರಾಯದಲ್ಲಿ ಭಾಷೆ ಎಂದರೆ "ಒಂದು ಸಮಾಜದ ಜನರು ಆಡುವ ಮಾತು"[೧] ಅಷ್ಟೇ ಎಂಬ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ.

ಭಾಷೆಯು ಅದು ನಿಂತ ನೀರಲ್ಲ, ಹರಿಯುವ ಹೊಳೆಯಂತೆ ನಿರಂತರವಾಗಿ ವ್ಯತ್ಯಾಸಗೊಳ್ಳುವುದೇ ಅದರ ಪ್ರಮುಖ ಲಕ್ಷಣವಾಗಿದೆ. ಆಡುನುಡಿಯನ್ನು ಆಡುವ ಪ್ರತಿಯೊಬ್ಬ ವ್ಯಕ್ತಿಯು ಅರಿತೋ ಅರಿಯದೆಯೋ ಹೊಸ ಶಬ್ದಗಳನ್ನು ಸೃಷ್ಟಿಸುತ್ತಾನೆ. ಹೊಸ ಉಚ್ಚಾರಣೆಯನ್ನು ನೀಡುತ್ತಾನೆ. ಅಥವಾ ಹೊಸ ಅರ್ಥವನ್ನು ಕೊಡುತ್ತಾನೆ. ಅದು ಚಲಾವಣೆಗೆ ಬಂದು ನಿಲ್ಲಬಹುದು, ಇಲ್ಲವೆ ನಶಿಸಿಹೋಗಬಹುದು. ಹೀಗಾಗಿ ಭಾಷೆಯಲ್ಲಿ ವ್ಯತ್ಯಾಸಗಳು ಮೈದೋರಿ ಶಬ್ದಕೋಶವು ಬೆಳೆಯುತ್ತದೆ. ಇದರಿಂದ ಭಾಷೆಯೂ ಬೆಳೆಯುತ್ತದೆ. ಅನ್ಯ ಭಾಷಾ ಸಂಪರ್ಕದ ದೃಷ್ಟಿಯಿಂದ ಕನ್ನಡ ನಾಡು ಮೊದಲಿನಿಂದಲೂ ಅನೇಕ ಭಾಷೆ ಮತ್ತು ಸಂಸ್ಕೃತಿಗಳ ಸಂಬಂಧವುಳ್ಳದ್ದಾಗಿದೆ.

ಭಾರತದಲ್ಲಿ ಬೇರೆ ಭಾಷೆಗಳನ್ನಾಡುವ ಜನರ ಸಂಪರ್ಕ ಕನ್ನಡಿಗರಿಗೆ ಮೊದಲಿನಿಂದಲೇ ಇದ್ದಿತು. ಆರ್ಯರು, ಗ್ರೀಕರು, ರೋಮನ್ನರು, ಪಾರಸಿಕರು, ಪೋರ್ಚುಗೀಸರು, ಫ್ರೆಂಚರು ಮತ್ತು ಇಂಗ್ಲೀಷರು ಮೊದಲಾದ ಜನರ ಸಂಬಂಧ ಕನ್ನಡಿಗರಿಗಿತ್ತು. ಜೊತೆಗೆ ನರೆಹೊರೆಯ ದ್ರಾವಿಡ ಭಾಷೆಗಳು ಮತ್ತು ಮರಾಠಿ ಮತ್ತಿತರು ಭಾಷೆಗಳು ವ್ಯಾಪಾರ ವ್ಯವಹಾರಗಳ ಸಂಪರ್ಕದ ಮೂಲಕ ಕನ್ನಡಗಳ ಮೇಲೆ ಪ್ರಭಾವ ಬೀರಿ

ಜೊತೆಯಲ್ಲಿ ಬೆಳೆದವು. ಈ ಎಲ್ಲಾ ಭಾಷೆಗಳಿಂದ ಕನ್ನಡ ಕೋಶ ಅನೇಕ ಪದಗಳನ್ನು, ಪ್ರಯೋಗಗಳನ್ನು ಸ್ವೀಕರಿಸಿತು.

"ಮೂಲ ದ್ರಾವಿಡದಲ್ಲಿ ನಡೆದ ಬದಲಾವನೆಗಳಲ್ಲಿ ಆ ಭಾಷೆ ಉತ್ತರ ದ್ರಾವಿಡ, ಮಧ್ಯದ್ರಾವಿಡ ಮತ್ತು ದಕ್ಷಿಣ ದ್ರಾವಿಡವೆಂಬ ಮೂರು ಮುಖ್ಯ ಕವಲುಗಳಾಗಿ ಒಡೆದಿರುವುದೇ ಅತ್ಯಂತ ಪ್ರಮುಖವಾದದು. ಕನ್ನಡ ಭಾಷೆಯು ಇವುಗಳಲ್ಲಿ ಮೂರನೆಯದಾದ ದಕ್ಷಿಣ ದ್ರಾವಿಡವೆಂಬ ಕವಲಿನ ಕೆಳಗೆ ಬರುತ್ತದೆ. ಅದರೊಂದಿಗೆ ತಮಿಳು, ಮಲಯಾಳ, ಕೊಡಗು, ಕೋತ, ತೊದ, ಬಡಗ, ಕುರುಂಬ ಮೊದಲಾದ ಬೇರೆ ಕೆಲವು ದಕ್ಷಿಣ ಭಾರತದ ಭಾಷೆಗಳು ಕೂಡ ಈ ಕವಲಿನ ಕೆಳಗೆ ಸೇರುತ್ತವೆ.

ಎರಡನೆಯದಾದ ಮಧ್ಯದ್ರಾವಿಡದಲ್ಲಿ ಸೇರುವ ಭಾಷೆಗಳು ತೆಲಗು, ಕೋಲಾಯಿ, ನಾಯ್ಕಿ, ಪಾರ್ಜಿ, ಗದಬ, ಕುಯಿಕೊಂಡ, ಪೆಂಗೊ, ಗೋಂಡಿ ಮೊದಲಾದವುಗಳು. ಇವುಗಳಲ್ಲಲಿ ಹೆಚ್ಚಿನವೂ ಕೂಡ ಭಾರತದ ಮಧ್ಯಭಾಗದಲ್ಲಿ ಎಂದರೆ ಆಂದ್ರಪ್ರದೇಶ, ಮಧ್ಯಪ್ರದೇಶ ಮತ್ತು ಒರಿಸ್ಸಾಗಳಲ್ಲಿ ಪ್ರಚಲಿತವಾಗಿವೆ. ಕರ್ನಾಟಕದ ಮತ್ತು ಕೇರಳದ ಕರಾವಳಿ ಪ್ರದೇಶದಲ್ಲಿ ಪ್ರಚಾರದಲ್ಲಿರುವ ತುಳು ಭಾಷೆಯೂ ಕೂಡ ಈ ಮಧ್ಯದ್ರಾವಿಡವೆಂಬ ಕವಲಿನ ಕೆಳಗೆ ಸೇರುವ ಭಾಷೆಯೆಂದು ತೋರುತ್ತದೆ.

ಮೂರನೆಯದಾದ ಉತ್ತರದ್ರಾವಿಡದಲ್ಲಿ ಸೇರುವ ಭಾಷೆಗಳು ಕುಡುಖ್, ಮಾಲ್ಟೋ ಮತ್ತು ಬ್ರಾಹುಯೀ ಎಂಬವುಗಳು. ಇವುಗಳಲ್ಲಿ ಮೊದಲನೆಯದು ಬಿಹಾರ, ಒರಿಸ್ಸಾ ಮತ್ತು ಮಧ್ಯಪ್ರದೇಶಗಳಲ್ಲೂ, ಎರಡನೆಯದು ಪಶ್ಚಿಮಬಂಗಾಲದಲ್ಲೂ ಮತ್ತು ಮೂರನೆಯದು ಪಾಕಿಸ್ತಾನ ಮತ್ತು ಅಪಘಾನಿಸ್ಥಾನಗಳಲ್ಲೂ ಪ್ರಚಲಿತವಾಗಿವೆ. ದಕ್ಷಿಣ ಕನ್ನಡ ಜಿಲ್ಲೆಯ ಕೊರಗ ಭಾಷೆಯೂ ಕೂಡ ಈ ಉತ್ತರದ್ರಾವಿಡ ಭಾಷೆಗಳನ್ನು ಹೋಲುತ್ತಿದೆಯೆಂಬುದು ಇಲ್ಲಿ ಗಮನಿಸಬಹುದಾದ ಒಂದು ಅಂಶ"[2] ಈ ರೀತಿಯಾಗಿ ಭಾಷೆಗಳಲ್ಲಿ ಪ್ರಾದೇಶಿಕತೆಯನ್ನು ಕಾಣಬಹುದು. ಮಾನವನು ತನ್ನ ಭಾವನೆಗಳನ್ನು, ಆಲೋಚನೆಗಳನ್ನು ಇತರರಿಗೆ ತಿಳಿಸಲು ಮಾನವನು ಕಂಡುಕೊಂಡ ಒಂದು ಮಹತ್ವದ ಸಾಧನವೇ ಭಾಷೆಯಾಗಿದೆ.

ಮಾನವನು ತಾನು ಆಡುವ ಭಾಷೆಯನ್ನು ಕಲಿತು ಮಾತಾಡಬಲ್ಲ ಒಂದು ವಿಶೇಷ ಶಕ್ತಿಯು ಅಡಗಿದೆ. ಮಾನವನ ಭಾಷೆಯಂತೆಯೇ ಪ್ರಾಣಿಗಳಿಗೂ ಸಹ ಸಂಕೇತಾತ್ಮಕವಾದ ಭಾಷೆಯುಂಟು. ಆದರೆ ಅದು ಮಾನವ ಭಾಷೆಗಿಂತ ಭಿನ್ನವಾದುದು. ಮಾನವನ ಭಾಷೆಗಳಲ್ಲಿ ಅಸಂಖ್ಯಾತ ಧ್ವನಿಗಳಿರುತ್ತವೆ. ಆ ಧ್ವನಿಗಳಿಂದಲೇ ಪದಗಳನ್ನು ಮತ್ತು ವಾಕ್ಯಗಳನ್ನು ನಿರ್ಮಿಸಲು ನೆರವಾಗುವುದು. ಒಂದು ರೀತಿಯಲ್ಲಿ ಮಾನವನ ಭಾಷೆಯು ಸಾಮಾಜಿಕ ಕ್ರಿಯೆಯಾಗಿದೆ.

ನಮ್ಮ ಸಮಾಜದಲ್ಲಿ ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಅನುಭವಗಳನ್ನು, ಆಲೋಚನೆಗಳನ್ನು ಮತ್ತು ಅನಿಸಿಕೆಗಳನ್ನು ಬೇರೊಬ್ಬರಿಗೆ ತಿಳಿಸಲು ಭಾಷೆಯನ್ನು ಬಳಸುತ್ತಾನೆ. ತನ್ನ ಅಂತರಂಗದ ಭಾವ ಭಾವನೆಗಳನ್ನು ಇನ್ನೊಬ್ಬರಿಗೆ ಹೇಳುವ, ಅಗತ್ಯವೇ ಭಾಷೆಯ ಉಗಮಕ್ಕೆ ಕಾರಣವಾಗುತ್ತದೆ. ಹಿರಿಯ ಕಿರಿಯ ವ್ಯಕ್ತಿಗಳು, ತಂದೆತಾಯಿ, ಬಂಧುಬಳಗ, ಸ್ನೇಹಿತರು ಮುಂತಾದವರ ಅನುಕರಣೆಯಿಂದ ಭಾಷೆಯು ನಮಗೆ ದೊರಕುತ್ತದೆ.

ಭಾಷೆಯು ಬರಹದ ವ್ಯವಸ್ಥೆ ಕೈವಶವಾದ ತರುವಾಯ ಭಾಷೆ ಬಹು ವೇಗವಾಗಿ ಬೆಳೆಯಲಾರಂಭಿಸಿತು. ಇದರಿಂದ ಲಿಪಿ ವ್ಯವಸ್ಥೆಯ ಸಹಾಯದಿಂದ ಹಿಂದಿನವರ ವಿಚಾರ ತಿಳಿದು, ಜ್ಞಾನ ಬಲದಿಂದ ಹೆಚ್ಚೆಚ್ಚು ಪ್ರಗತಿ ಸಾಧಿಸಲು ಸಾಧ್ಯವಾಯಿತು. ಬರಹದ ರೂಪದಲ್ಲಿ ಈ ಪದ್ಧತಿಯು ರೂಢಿಗೆ ಬಂದ ಅನಂತರವೇ ಸಾಹಿತ್ಯ, ಶಾಸ್ತ್ರ, ವಿಜ್ಞಾನ ಮುಂತಾದ ಕ್ಷೇತ್ರಗಳು ಬೃಹತ್ ಪ್ರಮಾಣದಲ್ಲಿ ಬೆಳೆಯಲಾರಂಭಿಸಿದವು. ಭಾಷೆ ಹಾಗೂ ಬರಹಗಳಿಗೂ ಒಂದು ರೀತಿಯ ನಿಕಟ ಸಂಬಂಧವಿದೆ. ಹಾಗೂ ಇವೆರಡೂ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ ಎಂದು ತಿಳಿಯಬಹುದು. ಭಾಷೆಯು ವ್ಯಕ್ತಿಯಿಂದ ವ್ಯಕ್ತಿಗೆ, ಸ್ಥಳದಿಂದ ಸ್ಥಳಕ್ಕೆ, ಕಾಲದಿಂದ ಕಾಲಕ್ಕೆ ಬದಲಾಗುತ್ತಿರುತ್ತದೆ. ಬರಹವು ಭಾಷೆಯನ್ನು ಯಥಾವತ್ತಾಗಿ ಪ್ರತಿನಿಧಿಸುವಂತಿರಬೇಕು. ಆದರೆ ಬರಹವು ಭಾಷೆಯನ್ನು ಎಲ್ಲಾ ವೇಳೆಯಲ್ಲಿಯೂ ಯಥಾವತ್ತಾಗಿ ಪ್ರತಿನಿಧಿಸುವುದಿಲ್ಲ.

ಈ ಭಾಷೆಯು ಒಂದು ರೀತಿಯಲ್ಲಿ ಸಾಹಿತ್ಯಕ್ಕೂ ನಿಕಟವಾದ ಸಂಬಂಧವನ್ನು ಹೊಂದಿದೆ. ಭಾಷೆ ಇಲ್ಲದೆ ಸಾಹಿತ್ಯವಿಲ್ಲ. ಸಾಹಿತ್ಯದಲ್ಲಿ ಲಿಖಿತ ಸಾಹಿತ್ಯ ಹಾಗೂ ಅಲಿಖಿತ ಸಾಹಿತ್ಯವೆಂಬ ಎರಡು ವಿಧಗಳನ್ನು ನೋಡಬಹುದು. ಲಿಖಿತ ಸಾಹಿತ್ಯವನ್ನು ನಾವುಗಳು ಅಭಿಜಾತ ಸಾಹಿತ್ಯ ಹಾಗೂ ಅಲಿಖಿತ ಸಾಹಿತ್ಯವನ್ನು ಜಾನಪದ ಸಾಹಿತ್ಯವೆಂದು ಕರೆಯುತ್ತಾರೆ.

ಈ ಒಂದು ಹಿನ್ನಲೆಯಲ್ಲಿ ಹಂದ್ರಾಳರ ಕಥೆಗಳನ್ನು ಆಧಾರವಾಗಿಟ್ಟುಕೊಂಡು ಅವುಗಳಲ್ಲಿ ಬಳಕೆಯಾಗಿರುವ ಭಾಷೆಯನ್ನು ಕುರಿತು ವಿವೇಚಿಸಬೇಕಿದೆ. ಹಂದ್ರಾಳರು ಬಳಸಿರುವ ಭಾಷೆ ಅದರ ಸ್ವರೂಪ, ಅವರ ವ್ಯಾಕರಣ ನಿಯಮಗಳಿಗೆ ಆಧಾರವಾಗತೊಡಗಿದವು.

ಹಂದ್ರಾಳರು ತಮ್ಮ ಕಥೆಗಳಲ್ಲಿ ಆಡು ಭಾಷೆಯನ್ನು ಯಥಾವತ್ತಾಗಿ ಚಿತ್ರಿಸಿದ್ದಾರೆ. ಇವರ ದೃಷ್ಟಿಯಲ್ಲಿ ಆಡು ಭಾಷೆಯ ಅಧ್ಯಯನವೇ ಬರಹದ ಭಾಷೆಗಿಂತ ಹೆಚ್ಚು ಉಪಯುಕ್ತವಾದುದ್ದು. ತಲೆತಲಾಂತರಗಳಿಂದ ಆಡುನುಡಿಯಲ್ಲಿಯೇ ಉಳಿದುಕೊಂಡು ಬಂದಿರುವ ಜಾನಪದ ಸಾಹಿತ್ಯವನ್ನು ಹಿಂದಿನವರು ಶುದ್ಧ ಸಾಹಿತ್ಯವೆಂದು ಪರಿಗಣಿಸುತ್ತಿರಲಿಲ್ಲ. ಕಾರಣವೇನೆಂದರೆ ಬರಹದಲ್ಲಿ ಮೂಡಿದ ಸಾಹಿತ್ಯ ಇವರ ದೃಷ್ಟಿಯಲ್ಲಿ ಹೆಚ್ಚಿನದು. ಬಾಯಿಂದ ಬಾಯಿಗೆ ತಲೆತಲಾಂತರಗಳಿಂದ ಉಳಿದುಕೊಂಡು ಬಂದಿರುವ ಜಾನಪದ ಸಾಹಿತ್ಯ ಬರಹದ ಸಾಹಿತ್ಯದಷ್ಟು ಅಶುದ್ಧವೇನಲ್ಲ. ಭಾಷೆಯ ದೃಷ್ಟಿಯಿಂದ ಈ ಎರಡು ಬಗೆಯ ಸಾಹಿತ್ಯಗಳು ಬೇರೆ ಬೇರೆಯಾಗಿ ಕಂಡುಬರುತ್ತವೆಯಾದರೂ ಅವು ಒಂದೇ ಭಾಷೆಯ ಬೇರೆ ಬೇರೆ ಅಭಿವ್ಯಕ್ತಿ ಮಾಧ್ಯಮಗಳಾಗಿವೆ. ಇವರು ಕಥೆಗಳಲ್ಲಿ ಬಳಸಿರುವ ಭಾಷೆಯನ್ನಾಗಲಿ, ಅದರಿಂದ ಹೊರಬರುವ ಸಾಹಿತ್ಯವನ್ನಾಗಲಿ ಅದು ಶುದ್ಧ ಸಾಹಿತ್ಯವಾಗುತ್ತದೆ.

ಇವರ ಬರಹದಲ್ಲಿ ದೊರೆಯುವ ಲಿಖಿತ ಸಾಹಿತ್ಯವು ಹಾಗೂ ಆಡುಭಾಷೆಯಲ್ಲಿ ದೊರೆಯುವ ಸಾಹಿತ್ಯದಲ್ಲೂ ಹೊಂದಾಣಿಕೆಯನ್ನು ಕಾಣಬಹುದು. ಇವರ ಕತೆಗಳಲ್ಲಿ ಬರುವ ಭಾಷೆ ಮತ್ತು ವಸ್ತುವಿನ ದೃಷ್ಟಿಯಿಂದ ಇವರ ಕತೆಗಳಿಗೆ ಮನ್ನಣೆ ದೊರಕಿದೆ. ಇವರ ಕತೆಗಳಲ್ಲಿ ಕತೆಯ ಶೈಲಿಗೆ ತಕ್ಕಂತೆ ಭಾಷೆಯನ್ನು ಬಳಸಲಾಗುತ್ತದೆ. ಹಂದ್ರಾಳರ ಕತೆಗಳಲ್ಲಿ ಭಾಷೆಯನ್ನು ಆಡುವವರು ಒಂದೇ ರೀತಿಯಲ್ಲಿ

ಆಡುವುದಿಲ್ಲ. ಅದು ವ್ಯಕ್ತಿಯಿಂದ ವ್ಯಕ್ತಿಗೆ, ಕಾಲದಿಂದ ಕಾಲಕ್ಕೆ, ಸ್ಥಳದಿಂದ ಸ್ಥಳಕ್ಕೆ ಬೇರೆ ಬೇರಯಾಗಿಯೇ ಕಂಡುಬರುವುದು. ಇವರ ಕತೆಗಳಲ್ಲಿ ವ್ಯಕ್ತಿಯು ತನ್ನ ದಿನಚರಿಯ ವ್ಯವಹಾರದಲ್ಲಿ ಭಾಷೆಯನ್ನು ಎಷ್ಟು ಪರಿಣಾಮಕಾರಿಯಾಗಿ ಬಳಸುತ್ತಾನೆ ಎಂಬುದು ಇಲ್ಲಿ ಬಹಳ ಮುಖ್ಯವಾಗಿದೆ. ಕತೆಯಲ್ಲಿ ಬರುವ ವ್ಯಕ್ತಿಯು ತನ್ನ ಭಾವನೆಗಳನ್ನು ಇನ್ನೊಬ್ಬರಿಗೆ ಹೇಗೋ ತಿಳಿಯುವಂತೆ ಮಾಡಿದರೆ ಸಾಲದು, ಅದನ್ನು ಸರಿಯಾದ ರೀತಿಯಲ್ಲಿ ಹೆಚ್ಚು ಪರಿಣಾಮಕಾರಿಯಾಗಿ ತಿಳಿಯಪಡಿಸುವುದನ್ನು ಹಂದ್ರಾಳರ ಕತೆಗಳಲ್ಲಿ ಕಾಣುತ್ತೇವೆ.

ಹಂದ್ರಾಳರು ತಮ್ಮ ಕತೆಗಳನ್ನು ಓದಿ ಇಲ್ಲವೆ ಕೇಳಿ ಅರ್ಥ ಮಾಡಿಕೊಳ್ಳುವವರಿಗೆ ಯಾವ ತೊಂದರೆಯನ್ನು ಉಂಟುಮಾಡದೆ, ಹೆಚ್ಚು ಗೊಂದಲಕ್ಕೂ ಅವಕಾಶವಿರದೆ ನಿರರ್ಗಳವಾಗಿ ಹರಿಯುವಂತಹದ್ದು ಆಗಿದೆ. ಹಾಗೂ ಕತೆಗಳು ಅರ್ಥಪೂರ್ಣವು, ಉಪಯುಕ್ತವೂ ಹೆಚ್ಚು ಪರಿಣಾಮಕಾರಿಯೂ ಆಗಿ ಕಾಣಿಸಿಕೊಳ್ಳುತ್ತವೆ. ಈ ಲಕ್ಷಣಗಳು ಅವರ ಕತೆಗಳಿಗೆ ಮುಖ್ಯವಾದ ಲಕ್ಷಣಗಳಾಗಿವೆ. ಕತೆಗಳಲ್ಲಿ ಭಾಷೆಯನ್ನು ಬಳಸುವವನಿಗೆ ಅವನ ಅಭಿರುಚಿ, ಅದನ್ನು ಬಳಸುವ ಸಂದರ್ಭ ಹಾಗೂ ಕತೆಯಲ್ಲಿ ಬರುವ ಮುಖ್ಯ ಸನ್ನಿವೇಶಗಳು ಬಹಳ ಮುಖ್ಯವಾಗಿರುತ್ತವೆ.

ಇವರ ಕತೆಗಳಲ್ಲಿ ಬಳಸುವ ಭಾಷೆಯು ಒಂದೇ ರೀತಿಯಲ್ಲಿರುವುದಿಲ್ಲ. ಅದು ಆ ಕತೆಯ ಭಾಷೆಯಿಂದ ಭಾಷೆಗೆ ಬೇರೆ ಬೇರೆಯಾಗಿರುತ್ತದೆ. ಕತೆಯ ಭಾಷೆ ಆಡುಭಾಷೆಯಾಗಿರಲಿ, ಬರಹದ ಭಾಷೆಯಾಗಿರಲಿ, ಅವರ ಕತೆಗಳು ತನ್ನದೇ ಆದ ರೀತಿಯಲ್ಲಿರುತ್ತದೆ. ಇವರ ಕತೆಗಳಲ್ಲಿ ವ್ಯಕ್ತಿಯಿಂದ ವ್ಯಕ್ತಿಗೆ ಹಾಗೂ ಸ್ಥಳದಿಂದ ಸ್ಥಳಕ್ಕೆ, ಭಾಷೆಯಿಂದ ಭಾಷೆಗೆ ಬೇರೆ ಬೇರೆಯಾಗಿರುತ್ತವೆ. ಈ ಬಗೆಯ ವ್ಯತ್ಯಾಸಗಳು ಅವರ ಕತೆಗಳ ವಿಷಯಕ್ಕೆ ಸಂಬಂಧಿಸಿದ್ದಾಗಿರುತ್ತದೆ. ಇವರ ಕತೆಗಳಲ್ಲಿ ಬಾಷೆಗಳು ಕೆಲವು ವಿಶಿಷ್ಟ ಪ್ರಕಾರಗಳು ಮಾತ್ರ ಪ್ರಸಿದ್ಧವಾಗಿರುತ್ತವೆ. ಹಾಗಾಗಿ ಕತೆಯ ಭಾಷೆಯಿಂದ ಭಾಷೆಗೆ ಬೇರೆ ಬೇರೆಯಾಗಿ ಕಂಡುಬರುತ್ತವೆ. ಭಾಷೆಗಳಲ್ಲಿ ಅವುಗಳ ಒಳರಚನೆಗೆ ತಕ್ಕಂತೆ ಕೆಲವು ವಿಶಷ್ಟವಾದ ಪ್ರಕಾರಗಳು ಮಾತ್ರ ಹೆಚ್ಚು ಪ್ರಸಿದ್ಧವಾಗಿರುತ್ತವೆ ಅಷ್ಟೆ. ಸಾಹಿತ್ಯದ ವಿವಿಧ ಪ್ರಕಾರಗಳ ಮೂಲಕವೇ ಇವರ ಕತೆಗಳ ಭಾಷೆಯು ವ್ಯಕ್ತವಾಗುವುದು.

ಹಂದ್ರಾಳರ ಕಥೆಗಳಲ್ಲಿ ಭಾಷೆಯ ಚೆಲುವು ಗ್ರಾಮೀಣ ಸೊಗಡನ್ನು ಕಂಡಿದೆ. ಹಳ್ಳಿಯನ್ನು ತೊರೆದು ಪಟ್ಟಣಕ್ಕೆ ಸೇರುವ ಜನರಿಗೆ ಹಂದ್ರಾಳರ ಕಥೆಗಳು ಸ್ಫೂರ್ತಿ ತುಂಬಿ ಮತ್ತೆ ಗ್ರಾಮೀಣದಲ್ಲಿ ನೆಲೆಸಬೇಕೆಂಬ ಕುತೂಹಲವು ಬರುತ್ತದೆ. ಗ್ರಾಮೀಣದಲ್ಲಿ ಬಳಸುವ ಭಾಷೆಯನ್ನು ಯಥಾವತ್ತಾಗಿ ಚಿತ್ರಿಸಿದ್ದಾರೆ. ಗ್ರಾಮೀಣದ ಭಾಷೆಯು ಕೇಳುವುದಕ್ಕೆ ಎಷ್ಟು ಸುಂದರವಾಗಿರುತ್ತದೆ ಎಂದರೆ ಹೇಳುವುದಕ್ಕೆ ಸಾಲದು. ಹಂದ್ರಾಳರು ಮೂಲ ಗ್ರಾಮೀಣದವರಾಗಿದ್ದು, ಅವರು ಕೃಷಿಜೀವನವನ್ನು ಅವಲಂಬಿಸಿದರು. ಆದ್ದರಿಂದ ಅವರ ಕಥೆಗಳಲ್ಲಿ ಗ್ರಾಮೀಣದ ಸಂಸ್ಕೃತಿ ಎದ್ದು ಕಾಣುತ್ತದೆ. ಗ್ರಾಮೀಣದ ಭಾಷೆಯನ್ನು ಯಥಾವತ್ತಾಗಿ ತಮ್ಮ ಕಥೆಗಳಲ್ಲಿ ಚಿತ್ರಿಸಿದ್ದಾರೆ.

ಇವರ ಕಥೆಗಳಲ್ಲಿ ಬಳಸುವ ಭಾಷೆಯು ದ್ವಿಭಾಷಿಕತೆಯಿಂದ ಕೂಡಿದ್ದು, ಇವರ ಪ್ರಾದೇಶಿಕತೆಗೆ ತಕ್ಕಂತೆ ಭಾಷೆಗಳನ್ನು ಬಳಸಿಕೊಂಡಿದ್ದಾರೆ. ಇವರ ಪ್ರಾದೇಶಿಕ ನಗರಗಳಾದ ತುಮಕೂರು, ಮಧುಗಿರಿ,

ಪ್ರದೇಶದ ಭಾಷೆಗಳ ಮುಖಾಂತರ ತಮ್ಮ ಕಥೆಗಳನ್ನು ರಚಿಸಿದ್ದಾರೆ. ಇವರು ಬಳಸುವ ಭಾಷೆಯು ಅವರ ವಲಯಕ್ಕೆ ಸೇರಿದೆ.

ಹಾರುತಿಹುವುದು ಏರುತಿಹುದು ನೋಡು ನಮ್ಮ ಬಾವುಟ ಕಥೆಯಲ್ಲಿ ಭಾಷೆಯ ಚೆಲುವನ್ನು ನೋಡಬಹುದು. "ರಾಮ ನಿದ್ದೆ ಹೋದ್ಯ ಮಗ' ಅವ್ವನ ಧ್ವನಿ ಕೇಳಿ ರಾಮ ಆಲೋಚನೆಗಳಿಂದ ಹೊರಬಂದ.

'ಯಾಕವ್ವ' ಮುಸುಕು ತೆಗೆಯದೆಯೇ ರಾಮ ಕೇಳಿದ್ದ.

'ಮಾಳ್ಗೆ ದೋಣಿ ಕಟ್ಟಂಡಿರ್ಬೇಕು. ಸೋರೋದು ಜಾಸ್ತಿ ಆಗದೆ, ವಸಿ ಮಾಳ್ಗೆ ಹತ್ತಿ ಪೊರಕೆ ಆಡಿಸ್ತಿಯಾ ಮಳೆ ನಿಂತೊಗದೆ' ಅವ್ವನ ಮಾತು ಕೇಳಿ ರಾಮ ಗಕ್ಕನೆ ಎದ್ದ. ಗೋಣಿತಾಟಿನ ಗೊಂಗಡಿಯನ್ನು ಹಾಕಿಕೊಂಡು ಸಣ್ಣದಾಗಿ ಉರಿಯುತ್ತಿದ್ದ ಲಾಟೀನನ್ನು ಇನ್ನಷ್ಟು ಬತ್ತಿ ಏರಿಸಿ, ಅಟ್ಟದ ಮೇಲಿನ ಗರಿ ಪೊರಕೆಯನ್ನು ಹಿಡಿದು ಏಣಿಯ ಮೇಲೆ ಮಾಳಿಗೆಯನ್ನು ಹತ್ತುತ್ತಿದ್ದ. 'ಹುಷಾರು ಮಗಾ' ಎಂದು ಅವ್ವ ಬಾಗಿಲಲ್ಲಿ ನಿಂತುಕೊಂಡು ಪದೇ ಪದೇ ಹೇಳುತ್ತಿದ್ದಳು. ಅಪ್ಪನಿರುವವರೆಗೂ ತನಗಿಂತಹ ಕೆಲಸಗಳು ಸಿಗುತ್ತಿರಲಿಲ್ಲ. ಮಳೆ ಜೋರಾಗಿ ಬೀಳುವಾಗಲೇ ಅಪ್ಪ ಮಾಳಿಗೆಯನ್ನು ಹತ್ತಿ ಸರಿಪಡಿಸುತ್ತಿದ್ದ. ಆಗ ತಾನು ಅಪ್ಪನ ಜೊತೆಯಲ್ಲಿ ಮಾಳೀಗೆ ಹತ್ತಲು ಹೋದಾಗ ಅವ್ವ ತಡೆಯುತ್ತಿದ್ದಳು.

'ಯವ್ವಾ' ಎಂದ ಮೆಲ್ಲನೆ

'ಏನ್ಲಾಮಗ? ಅಷ್ಟೇ ನಿಧಾನವಾಗಿ ಕೇಳಿದಳು ಮಂಚವ್ವ

'ಮುಂದಿನ್ವಾರ ಸ್ವತಂತ್ರ ದಿನಾಚರಣೆ ಮಾಡ್ತಾರೆ ಕನವ್ವ' ಎಂದು ಪೀಠಿಕೆ ಹಾಕಿದ ರಾಮ.

'ಅದಕ್ಕೆನ್ಮಾಡ್ಬೇಕ್ ಮಗಾ, ಕಾಸ್‌ಗೀಸ್ ಕೊಡ್ಬೇಕೆ?' ಪ್ರಶ್ನಿಸಿದಳು ಮಂಚವ್ವ ಶಾಲೆಯಲ್ಲಿ ಏನಾದರೂ ನಡೆದರೆ ನಾಲ್ಕಾಣೆ, ಎಂಟಾಣೆಗಳನ್ನು ಇಸಿದುಕೊಂಡು ಹೋಗುತ್ತಿದ್ದುದರ ಅರಿವು ಮಂಚವ್ವನಿಗೆ ಬಂದಿತ್ತು.

'ಆಂ. . . . ಎಂಟಾಣೆ ಕೊಡ್ಬೇಕು. . . ' ಎಂದವನು ಕ್ಷಣ ಹೊತ್ತು ಮಾತು ನಿಲ್ಲಿಸಿ ಮತ್ತೆ ಮುಂದುವರೆಸಿದ.

'ಯೂನಿಫಾರಂ . . . .' ಎಂದವನು ಬಾಯಿಂದ ಮಾತು ಮುಂದಕ್ಕೆ ಹೊರಡಲಿಲ್ಲ. ತನ್ನವ್ವನ ಹರಿದ ಸೀರೆ, ತನ್ನಕ್ಕನ ತೋಳು ಹರಿದ ಜಾಕೀಟು ರಾಮನ ಕಣ್ಮುಂದೆ ತೇಲಿ ಬಂದಿದ್ದವು. ಮಂಚವ್ವನಿಗೆ ರಾಮನ ಭಾಷೆ ಅರ್ಥವಾಗಿತ್ತು"[೩]

ಈ ಕಥೆಯಲ್ಲಿ ಬಡತನ ಭಾಷೆಯು ವ್ಯಕ್ತವಾಗುತ್ತದೆ. ರಾಮನಿಗೆ ಯೂನಿಫಾರಂನ ಚಿಂತೆಯಾಗಿರುತ್ತದೆ. ಆದರೆ ಅವನ ತಾಯಿಯಾದ ಮಂಚವ್ವ ರಾಮನಿಗೆ ಒಂದು ಯೂನಿಫಾರಂ ಹೊಲೆಸಿಕೊಡಲು ಸಾಧ್ಯವೇ ಆಗುವುದಿಲ್ಲ. ರಾಮ ಊರಿನ ಗೌಡನ ಮಗನ ಯೂನಿಫಾರಂ ಕದ್ದು ಹಾಕಿಕೊಳ್ಳುವ ಪ್ರಸಂಗವನ್ನು ನೋಡಬಹುದು. ಹೆಡ್‌ಮಾಸ್ತರ್ ನಾಗಯ್ಯ ಅಹಂಕಾರದ ನಡವಳಿಕೆ ಕಾಣಬಹುದು. ಇದರಲ್ಲಿ ಬಡತನ, ಹಾಗೂ ಹಸಿವಿನಿಂದ ತತ್ತರಿಸುತ್ತಿರುವುದು ಕಾಣಬಹುದು. ಮಂಚವ್ವನ ಬಡತನದ ಭಾಷೆಯನ್ನು ನೋಡಬಹುದು. ಅದರಲ್ಲಿ ಹೆಚ್ಚು ನೋವುಗಳು ತುಂಬಿವೆ.

'ದಮನ' ಎಂಬ ಕತೆಯಲ್ಲಿ ಹಂದ್ರಾಳ ಎಂಬ ಹಳ್ಳಿಯಲ್ಲಿ ಯಂಗಟ್ರೋಣಿ ಎಂಬ ಮಹಿಳೆ ಇದ್ದು, ಇವಳು ಗಂಡನನ್ನು ಕಳೆದುಕೊಂಡು, ತನ್ನ ಮಗನು ಕಾಯಿಲೆಗೆ ತುತ್ತಾಗಿ, ಮಗನನ್ನು ಬದುಕಿಸಿಕೊಳ್ಳಲು ತುಂಬಾ ಪರದಾಡುತ್ತಿರುತ್ತಾಳೆ. ತೀರ ಬಡತನದಿಂದ ಕೂಡಿದ ಇವಳು, ಕೂಲಿ ಕೆಲಸವನ್ನು ಮಾಡಿ ಜೀವನ ನಡೆಸುತ್ತಿರುತ್ತಾಳೆ. ತನ್ನ ಮಗನಿಗೆ ಬಂದಿರುವ ಕಾಯಿಲೆಯು ಯಾವುದು ಎಂದು ತಿಳಿಯದ ಹೆಂಗಸು ರಾತ್ರಿಯಿಡಿ ಯೋಚಿಸುತ್ತಾ ಶಬರಿ ರಾಮನ ನೋಡೋ ಹಂಬಲಕ್ಕಿಂತಲೂ ಹೆಚ್ಚಾಗಿ ತನ್ನ ಮಗ ನಕ್ಕರೆ ಸಾಕು, ಅತ್ರೆ ಸಾಕು, ಕಣ್ಣು ಬಿಟ್ರೆ ಸಾಕು ಅಂತ ಕಾಯುತ್ತಿದ್ದವಳು. ಇವಳ ಮನಸ್ಸಿನ ಚಿಂತನೆಯನ್ನು ಯಾವ ರೀತಿ ಕತೆಗಾರ, ಭೂಮಂಡಲದ ಆಕಾಶದಾಗಿನ ನಕ್ಷತ್ರಗಳು ಕಾರ್ಮೋಡನ್ನೊಳಗೊಂಡಂತೆ ಭಾಷೆಯನ್ನು ವಿವರಿಸಿದ್ದಾರೆ ಎಂಬುದನ್ನು ತಿಳಿಯಬಹುದು. "ಅಂಥ ಅಪರಾತ್ರಿ ವೇಳೆಯಾಗೆ ಯಂಗಟ್ರೋಣಿಯ ಕಣ್ಣುಳ್ನ ಕತ್ಲೆಂಬೋ ರಾಕ್ಷಸಿ ನುಂಗೋಕಾಗ್ದೆ ಕೈ ಸೋತು ಕೂತಿದ್ಲು. ಮಿಣಕ ಮಿಣಕ ಅಂತಿದ್ದ ಬೇವ್ನೆಣ್ಣೆಯ ಕುಡಿಕೆ ದೀಪದ ಮಂದ ಬೆಳಕಿನಾಗೆ ತನ್ನ ಮಗ ಎಂಬೋ ಸರ್ವಸ್ವ ಮಿಸುಕಾಡಿದ್ರೆ ಸಾಕು, ಕಣ್ಣು ಬಿಟ್ರೆ ಸಾಕು, ಅತ್ರೆ ಸಾಕು, ನಕ್ಕರೆ ಸಾಕು ಅಂತ ಶಬರಿ ರಾಮನ್ನ ನೋಡೋ ಹಂಬಲಕ್ಕೀಂತಲೂ ಹೆಚ್ಚಾಗಿ ಕಾಯ್ತಿದ್ಲು. ಗುಡ್ಲು ಮೂಲೇಲಿ ಕಿತ್ತೋದ್ ಕಬ್ಲಿ ಹೊದ್ ಬಿದ್ಕೊಂಡಿದ್ದ ಅತ್ತೆ ಮಾವಂದ್ರ ನರಳಾಟ, ನಾಯ್ಗಳ ಬೊಗಳಾಟ ರಾತ್ರಿಯ ಮೌನಕ್ಕೆ ಆಗಾಗ ಕಲ್ಲಾಕಿದಂಗಾಗ್ತಿತ್ತು. ಯಂಗಟ್ರೋಣಿಯ ಮನಸ್ನ ಚಿಂತೆಯ ಕಾರ್ಮೋಡಗಳ ಮುಸುಕಿದ್ವು, ಮಾರಾಜ್ನಂಗೆ ಆಟಾಡ್ಕೊಂಡಿರ್ತಿದ್ದ ಮಗನ್ಗೆ ಯಾವ್ದೊ ಬ್ಯಾನೆ ಅಡರಿಕೊಂಡಿತ್ತು. ಮೂರ್ ದಿನ್‌ದಿಂದ ತಾನೇನೆಲ್ಲ ಪಡಿಪಾಟ್ಲು ಬಿದ್ರೂ ಕಾಯ್ಲೇನ ಶಮ್ನ ಮಾಡಾಕಾಗಿರ್ಲಿಲ್ಲ. ಅಂತವ್ನನ್ನೆ ಬಟ್ಟೆಗೆ ಸುತ್ತಿ ಕಣ್ ಕಾಣ್ಣ ಮುದುಕರ್ ಮುಂದಾಕಿ ಒಂದ್ ಮೈಲಿ ದೂರ್ದ ಪಿಳ್‌ಗುಂಡ್ಲು ಕೆರೆ ಹೊಲ್ತಾಗಿಳಿಂದ ಹೊರ್‌ಲಾರ್‌ದಂಥ ಹದಿನೈದಿಪ್ಪತ್ತು ಕೊರಣಿ ಹೊರೆಗಳನ್ನು ಹೊತ್ ತಂದಿದ್ದು, ಎಲ್ಡ್ ಕಾಲ್ಗಳ ಪಿಕ್ಕಂಡುಗೂಳ ಪಿಚ ಪಿಚ ಅಂತ ಪದ ಹೇಳ್ತಿದ್ವು.

ಗಂಡನೆಂಬೊ ಮೂಳ ತನ್ನ ವಯಸ್ಸಾದ ತಂದೆತಾಯ್ಗಳ್ನ ಮತ್ತು ಒಂದು ಮಗೂನ ತನ್ನೆದೆ ಮ್ಯಾಲೆ ಕುಕ್ಕಿ ಎಲ್ಡ್ ವರ್ಸದಿಂದೇನೆ ಕೈಲಾಸ ಸೇರ್ಕೊಂಡಿದ್ದ. ಪಾಪ ಅವ್ನು ತಾನೆ ಏನ್ ಮಾಡಾಕಾಗಿತ್ತು. ವಿಧಿ ಅನ್ನೊ ದೈವದತ್ರ ಮದ್ವೆ ಆದ ಮೂರು ವರ್ಸ ಚೆನ್ನಾಗೇ ಇದ್ದ. ಇಬ್ರೂ ಕೂಲಿ ಗೇದ್‌ಕೊಂಡ್ ಬರ್ತಿದ್ರು, ಅದೆಲ್ಲಿತ್ತೊ ಹಿಂದ್ ಮುಂದ್ ಬ್ಯಾನೆ ಬಂದ್ ತಿಂಗ್ಳು ಕಾಡುಸ್ತು. ಆಸ್ಪತ್ರೆ, ದೇವ್ರು, ದಿಂಡ್ರು ಎಲ್ಲಾ ಆಯ್ತು, ಬ್ಯಾನೆಯೇನೋ ನಿಲ್ತು, ಆದ್ರೆ ಆಳು ತೀರಾ ತೆಗ್ದುಬಿಟ್ಟಿದ್ದ. ಸುಸ್ತು ಅಮರಿಕೊಂಡ್ತು, ಕೂಲಿ ಗೇಯೋಕೆ ಆಗ್ಲಿಲ್ಲ, ಕಡೆಗದು ಕ್ಷಯ ಅಂತ ಗೊತ್ತಾಗಿ ಹತ್ ಕುಂಟೆ ಹೊಲ ಅಡ ಇಟ್ಟು ಕೋಲಾರ್ದ ಟಿ.ಬಿ.ಆಸ್ಪತ್ರೆಗೆ ಕರ್ಕೊಂಡೋಗಿದ್ದಾಯ್ತು. ಆದ್ರೆ ಉಳಿಯಲಿಲ್ಲ, ಬಲು ಸಂಕಟದಿಂದ ಯಂಗಟ್ರೋಣಿ ತಾಳಿ ತೆಗೆದಿಡ್ಬೇಕಾಯ್ತು"[1] ಈ ಕಥೆಯಲ್ಲಿ ನಾವು ತೆಲುಗಿನ ಪ್ರಭಾವವನ್ನು ಭಾಷಾ ಬಳಕೆಯಲ್ಲಿ ಕಾಣಬಹುದಾಗಿದೆ. ಹಂದ್ರಾಳ ಗ್ರಾಮವು ಕರ್ನಾಟಕದ ಗಡಿ ಭಾಗದಲ್ಲಿ ಬರುವುದರಿಂದ ಭಾಷೆಯು ವಿಭಿನ್ನತೆಯನ್ನು ಕಾಣಬಹುದಾಗಿದೆ.

ತನ್ನ ಗಂಡ ಸತ್ತ ನಂತರ ಬಡತನದ ಬೇಗೆಯಲ್ಲಿ ಬೆಂದು ಒದ್ದಾಡುತ್ತಿರುತ್ತಾಳೆ. ಮಾವ ಮತ್ತು ಅತ್ತೆಯಿಬ್ಬರನ್ನು ಸಹ ಸಾಕುವುದು ಇವಳ ಮೇಲೆ ಬಿತ್ತು. ಒಬ್ಬನೇ ಮಗನಿದ್ದು ಯಂಗಟ್ರೋಣಿ ಕೂಲಿ ಮಾಡಿ ಇವರನ್ನೆಲ್ಲಾ ಸಾಕುತ್ತಿದ್ದಳು. ತನ್ನ ಮಗನ ಮೇಲೆ ಜೀವವೇ ಇಟ್ಟುಕೊಂಡಿದ್ದಳು. ಅವಳ ಮಗನಿಗೆ ಕಾಯಿಲೆಯು ಬಂದಿದ್ದರಿಂದ ಯಂಗಟ್ರೋಣಿಗೆ ಜೀವವೇ ನಿಂತುಹೋಗಿತ್ತು. "ಅಂಥ ಮಗ ಗೂಟ ಮುರ್ದ ರಾಗಿ ಬೀಸೋ ಕಲ್ನಂತೆ ಜಡವಾಗಿ ಬಿಟ್ಟಿದ್ದ. ಪ್ರಾಣದಾಗೆ ಪ್ರಾಣ ಇಟ್ಟು ಸಾಕ್ದ ಕೂಸ್ಗೆ ಮಂಕ್ ಬಡ್ಡಿದ್ದು ಯಂಗಟ್ರೋಣಿಗೂ ಮಂಕಿಡಿಸ್ತು ತನ್ನ ಮಗನ್ನ ಕಣ್ತೆರೆದು ನೋಡಿದ್ರೆ ಅನುಮಂತ್ಪುರದ ಮುತ್ಯಾಲಮ್ಮನ್ಗೆ ಮುಂದಕ್ಕೆ ಎಲ್ಡ್ ಹಿತ್ತಾಳೆ ಕಣ್ಣು ಮಾಡಿಸ್ತೀನಿ ಅಂತ ಹರ್ಕೆ ಹೊತ್ತು ಕೊಂಡ್ವಾಡಿ ಕಾಟ್ಮರಾಯನಿಗೆ ಯಾರ ಕೈಲೋ ಎಂಟಾಣಿ ಕರ್ಪೂರ ಕಳಿಸಿದ್ಲು. ಆದ್ರೂ ಮಗ ಉಸಾರ್ ಕಾಣ್ಣಿಲ್ಲ

ಸರಿ ಅಂತ ಮಗನ್ನ ಸುಂಕಪ್ಪನ ಹತ್ರ ಎತ್ಕೊಂಡೋದ್ಲು. ಸುಂಕಪ್ಪ ಹೆಸರುವಾಸಿಯಾದ ಮನ್ಸ ಸುತ್ತ್‌ಮುತ್ಯಾಗೆ ದೆವ್ವ ಹಿಡೀಲಿ, ಚೇಳು ಕಚ್ಲಿ, ಜ್ವರ ಬರ್ಲಿ ಬಸಿರು ಇಳಿಸ್ಬೇಕಾಗ್ಲಿ ಎಲ್ರೂ ಸುಂಕಪ್ಪನತ್ರ ಬರ್ತಾರೆ. ಕೆಲವರ್ಗೆ ಅವನ ವೈದಿಕ ಹಿಡಿಸೈತೆ, ಇನ್ ಕೆಲವು ಅವ್ನು ಬರೀ ಬೂಟಾಟ್ಕೆ ಅಂತಾರೆ. ಯಂಗಟ್ರೋಣಿಗೆ ಸುಂಕಪ್ಪನ ಮ್ಯಾಗೆ ನಂಬಿಕೆ ಇತ್ತು"[೨] ಯಂಗಟ್ರೋಣಿಗೆ ತನ್ನ ಗಂಡನನ್ನು ಕಳೆದುಕೊಂಡು ಮಗನನ್ನು ಉಳಿಸಿಕೊಳ್ಳಲು ಮತ್ತು ಮಗನ ಕಾಯಿಲೆಯನ್ನು ವಾಸಿ ಮಾಡಲು ಹರಸಾಹಸ ಮಾಡುತ್ತಾಳೆ. ಯಂಗಟ್ರೋಣಿಯು ಅವಿದ್ಯಾವಂತಳಾಗಿ ಹಾಗೂ ಬಡತನದ ಛಾಯೆ ಅವಳಲ್ಲಿ ಆವರಿಸಿಕೊಂಡಿರುತ್ತದೆ. ಮೇಲಿನ ಕತೆಯಲ್ಲಿ ಇವಳ ಅವಿದ್ಯಾವಂತರು ಆಡುವ ಭಾಷೆಯನ್ನು ನೋಡಬಹುದು.

ಯಂಗಟ್ರೋಣಿಯು ಹಳ್ಳಿಯ ಮುಗ್ಧ ಹೆಣ್ಣಾಗಿದ್ದು, ಇವಳಿಗೆ ಮೋಸವೆನ್ನುವುದು ಯಾವುದು ಗೊತ್ತಿರಲಿಲ್ಲಾ. ಓದು ಬರಹ ತಿಳಿಯದ ಇವಳು ದೇವರಲ್ಲಿ ಅಪಾರವಾದ ನಂಬಿಕೆಯನ್ನಿಟ್ಟುಕೊಂಡಿದ್ದಳು. ಸುಂಕಪ್ಪ ಎಂಬ ಮಂತ್ರವಾದಿ ಏನೂ ಹೇಳಿದರೂ ಅದನ್ನು ಚಾಚು ತಪ್ಪದೇ ಪಾಲಿಸುತ್ತಿದ್ದಳು ಹಾಗೂ ಸುಂಕಪ್ಪನ ಮೇಲೆ ನಂಬಿಕೆಯನ್ನಿಟ್ಟುಕೊಂಡಿದ್ದಳು ಎಂಬುದನ್ನು ಗಮನಿಸಬಹುದು.

"ಯಂಗಟ್ರೋಣಿಯನ್ನು ಕಂಡ ಸುಂಕಪ್ಪ ಮೇಕೆಗೆ ಬೇವಿನ ಸೊಪ್ಪು ಕಟ್ತಿದ್ದೋನು ಯಕ್ಕದ ಗಿಡದ ಪಕ್ಕದ ಜಗಲಿಗೆ ಬಂದು 'ಬಾ. . . ಬಾ ಯಂಗಟ್ರೋಣಕ್ಕ ಏನ್ ಬಂದೆ?' ಅಂದ ಉಸೂರ್ ಅಂತ ನಿಟ್ಟುಸಿರುಬಿಡ್ತಾ', 'ಯಾಕೋ ಎಲ್ಡ್ ದಿನ್‌ದಿಂದ ಮಗ ಸ್ವರ ವಂಡ್ಲಿಲ್ಲ ಒಂದೀಸ್ ನೋಡಣ್ಣ' ಅಂತ ಕೂತ್ಕೊಂಡ್ಲು, ಸುಂಕಪ್ಪ ಮಗೂನ ಕೈ ಹಿಡಿದು ನಾಡಿ ನೋಡ್ದ, ಹೊಟ್ಟೆ ಮ್ಯಾಲೆ ಕೈಯಾಡಿಸಿದ. ಆಮೇಲೆ ಗಡ್ಡವನ್ನು ನೀವಿಕೊಳ್ತಾ, ಯೋಚ್ನೆ ಮಾಡ್ತಾ 'ಮಗೂಗೆ ಬಾಲಗ್ರಾವು ಆಗಿದೆ ಯಂಗಟ್ರೋಣಕ್ಕ 'ಅಂತಂದ, ಬಾಲಗ್ರಾವು ಭಾಳ ಕಾರ್ಕೋಟಕ ಕಾಯ್ಲೆ ಅಂತ ತಿಳ್ದಿದ್ದ ಯಂಗಟ್ರೋಣಿ ಚಂಡಮಾರುತಕ್ಕೆ ತುತ್ತಾದವಳಂತೆ ಭಯದಿಂದ ತತ್ತರಿಸಿ ಹೋದ್ಲು.

'ಏನ್ಮಾಡೋದಣ್ಣ?' ಅಂದ್ಲು

'ಗೋಧೂಳ್ ಸಂಜೆನಾಗ ದೊಡ್ ಪೂಜೆ ಹಾಕ್ಬೇಕು. ಯಂಗಿದ್ರೂ ಅಮಾಸೆ ಹತ್ರ ಬರ್ತಾ ಅದೆ' ಅಂದ. 'ಇವತೆ ಹಾಕ್ಬಿಡಣ್ಣ' ಅಂದ್ಲು. 'ಪೂಜೆ ಸಾಮಾನು ತರೋಕೆ ಬ್ಯಾಲ್ಯೇವುಕ್ಕೆ ಹೋಗ್ಬೇಕು. . . ಅಂಗೇ ಒಂದು

ಕೋಳಿ ಬೇಕಾಗ್ತೈತೆ, ನೆತ್ತರು ಕೆಡವಿದ್ರೆ ಬಾಲಗ್ರಾವು ಕಾಯ್ಲೆಗೆ ಒಳ್ಳೆದು' ಅಂದ. ಯಂಗಟ್ರೋಣಿ ಸೀರೆ ಬಾಳೆಕಾಯಿಂದ ತಿತ್ತಿ ತೆಗ್ದು ಕಡ್ಡಿಪುಡಿಯಾಗೆ ಹೂತೋಗಿದ್ದ ಬಿಡಿ ಬಿಡಿ ನಾಲ್ಕು ರೂಪಾಯಿ ತೆಗ್ದು ಸುಂಕಪ್ಪನ ಕೈಗೆ ಇಟ್ಟು 'ಯಣ್ಣಾ . ಇರೋ ದಿಷ್ಟೇ ನನ್ನತ್ರ, ಕಾವ್‌ಗಾಕ್ಟೇಕು ಅಂತ ಒಂದ್ಹೆಂಟಿಕೋಳಿ ಇಟ್ಟಿದ್ದೀನಿ. ಅದ್ನೆ ಹಿಡ್ಕೊ, ಏನಾದ್ರೂ ಮಾಡಿ ನನ್ನ ಕಂದನ ಕಾಯ್ಲೆ ಬಿಡಿಸ್ಬಿಡು' ಅಂದ್ಲು. 'ಸರಿ, ನಾನೀಗ್ಲೆ ಬ್ಯಾಲ್ಯಕ್ಕೆ ಹೋಗ್ತಿತ್ತೀನಿ, ಕೋಳಿ ರೆಡಿ ಮಾಡ್ಕ, ರಕ್ತ ಸವುರಿ ತಾಯ್ತೇವು ಕಟ್ಟಿದ್ರೆ ಕಾಯ್ಲೆ ಮಂಗಮಾಯ ಆಗ್ತದೆ; ಅಂದ. ಯಂಗಟ್ರೋಣಿ ಗೆಲುವಿನ ಮುಖ ಹೊತ್ತು ಮನೆಯ ಕಡೆ ನಡೆದ್ಲು. ಸುಂಕ ರಾತ್ರಿಯ ಕೋಳಿ ಸಾರಿನ ಜೊತೆಗೆ ನಂಜಾಕೆ ಇರ್ಲಿ ಅಂತ ಹೆಂಡದ ಸೀಸೆನ ಹೆಗಲಿಗೇರಿಸ್ಕೊಂಡು ಬ್ಯಾಲ್ಯದ ದಾರಿ ಹಿಡ್ದ" ಯಂಗಟ್ರೋಣಿಯು ಮುಗ್ದಳು. ಸುಂಕಪ್ಪ ಹೇಳಿದ ಮಾತುಗಳನ್ನೆಲ್ಲಾ ಕೇಳುತ್ತಾಳೆ. ಇದರಿಂದಲೂ ಮಗನ ಕಾಯಿಲೆ ಗುಣವಾಗದನ್ನು ನೋಡಿ ಬ್ಯಾಲ್ಯದಲ್ಲಿರುವ ಆಸ್ಪತ್ರೆಗೆ ಕರೆದುಕೊಂಡು ಹೋದಳು. ನಾಗಪ್ಪನನ್ನು ಕಂಡು ಮಗನ ಸ್ಥಿತಿಯನ್ನು ಹೇಳಿದಳು. ಇವನು ಕೆಳವರ್ಗದ ಜನರನ್ನು ಕಂಡರೆ ಇವನಿಗೆ ಆಗುತ್ತಿರಲಿಲ್ಲ. 'ಯಾವುರಮ್ಮ ಎದ್ದೇಳಕ್ಕಿಲ್ಲ ಬಂದಿದ್ದೀಯಲ್ಲ, ಡಾಕ್ಟ್ರು ಇನ್ನು ಮಲಗವ್ರೆ, ಕುಂತ್ಕೊ' ಎಂದು ದರ್ಪದ ಭಾಷೆಯನ್ನು ಬಳಸುತ್ತಾನೆ. ಡಾಕ್ಟರು ಸಹ ಬಂದು ಮಗನನ್ನು ನೋಡಿ ಲೆಕ್ಕಾಚಾರ ಹಾಕುತ್ತಾನೆ. "ಕಾಸ್ ಎಷ್ಟ್ ತಂದಿದ್ದೀಯ? ಡಾಕ್ಟರರ ಪ್ರಶ್ನೆ 'ನಾ ಬಡವಿ ಸ್ವಾಮಿ, ಗಂಡಿಲ್ಲ, ಒಂದೇ ಕೂಸು' ತೊದಲಿದಳು, 'ಕಾಸಿಲ್ದೋರು ಆಸ್ಪತ್ರೆಗೆ ಯಾಕ್ ಬತ್ತೀರ' ಎಂಬ ದರ್ಪದ ಭಾಷೆಯನ್ನು ಬಳಸುತ್ತಾನೆ. ಯಂಗಟ್ರೋಣಿಯು ನೂರು ರೂಪಾಯಿಗೋಸ್ಕರ ಊರಿನ ಗೌಡನ ಬಳಿ ಕೇಳಿದಾಗ ಅವನು ಕೂಡ 'ಯಲೆ ಬೋಸುಡಿ, ನೂರ್ ನೂರ್ ಅಂದ್ರೆ ಏನೇ' ಅಂದ. 'ಯಪ್ಪಾ' ಅಂದ್ಲು ಮತ್ತೆ, 'ಹೋಗ್ ಹೋಗ್ ತಿಗಾ ಮುಚ್ಕಂಡು' ಅಂದ ಗೌಡ ಬದ್ಲಾಗಿ ಇವನು ಕೂಡ ಕೆಳಜಾತಿಯವರನ್ನು ತನ್ನ ಸುಖಕ್ಕೆ ಬಳಸಿಕೊಂಡು ಒಂದು ರೀತಿಯಲ್ಲಿ ದರ್ಪಗಾರಿಕೆಯಿಂದ ಮೆರೆಯುತ್ತಿರುತ್ತಾನೆ. ಕೊನೆಗೂ ಯಂಗಟ್ರೋಣಿಯು ಕಾಸಿಲ್ಲದೆ ಮಗನನ್ನು ಕಳೆದುಕೊಳ್ಳುತ್ತಾಳೆ. ಇದರಲ್ಲಿ ಬಡತನ, ದಾರಿದ್ರ್ಯ, ಶೋಷಣೆಯ ಭಾಷೆಯು ತಿಳಿಯುತ್ತದೆ. ಉಳ್ಳವರು ಇಲ್ಲದೇ ಇರುವವರ ಮೇಲೆ ತೋರಿಸುವ ದರ್ಪದ ಭಾಷೆಯನ್ನು ನೋಡಲಾಗುತ್ತದೆ. ಕೊನೆಗೆ ಈ ಕತೆಯಲ್ಲಿ ಪರಿಣಾಮಕಾರಿಯಾಗಿ ಸಾಗಿ ಮುಂದುವರೆದಂತೆ ಸೋಲುತ್ತದೆ.

'ತಿಪ್ಪನಿಗೆ ವಕ್ಕರಿಸಿದ ಲಾಟರಿ ಮಾರಿ' ಲಾಟರಿ ವ್ಯವಸ್ಥೆ ಭಾರತದ ಬೇರೆ ಬೇರೆ ಭಾಷೆಗಳ ಸಾಹಿತ್ಯದಲ್ಲಿ ಪ್ರತಿಬಿಂಬಿತವಾಗಿರುವ ಒಂದು ಕಥಾವಸ್ತುವಾಗಿದೆ. ಈ ಕತೆಯಲ್ಲಿ ಇಂಗ್ಲೀಷ್ ಶಬ್ದಗಳನ್ನು ಸಹ ಬಳಸಲಾಗಿದೆ. ವಿಭಿನ್ನ ಭಾಷಾಮಾದರಿಯಾಗಿದೆ. ಈ ಕಥೆಯು ಹಂದ್ರಾಳವೆಂಬ ಕುಗ್ರಾಮದಲ್ಲಿ ನಡೆಯುತ್ತದೆ. ಇದರಲ್ಲಿ ಕನ್ನಡ ಭಾಷೆಯ ಜೊತೆಜೊತೆಗೆ ಇಂಗ್ಲೀಷ್ ಭಾಷೆಯನನು ಸೇರಿಸಲಾಗಿದೆ. ಉದಾ: ಕೆಲವರು ಕೊಟ್ಟಿಗೆಗಳ ಕಸವನ್ನು ತಿಪ್ಪೆಗಳಿಗೆ ಒಯ್ಯುತ್ತಿದ್ದರು. ಮತ್ತೆ ಕೆಲವರು ಹಾಲನ್ನು ತೆಗೆದುಕೊಂಡು ಡೈರಿಯ ಕಡೆ ಹೋಗುತ್ತಿದ್ದರು. ಹೊಟ್ಟೆ ಅನ್‌ಲೋಡ್ ಆಗಿದ್ದರಿಂದ ಕೆಲವು ಮನೆಗಳಲ್ಲಾಗಲೇ ತಂಗಳಿಗಾಗಿ ಹೊಡೆದಾಟ ಶುರುವಾಗಿತ್ತು. ತಿಪ್ಪನು ಕೆಳವರ್ಗದ ಕುಟುಂಬಕ್ಕೆ ಸೇರಿದವನಾಗಿದ್ದು, ಅವನ ಹೆಂಡತಿಯಾದ

ಯಂಗಟ್ರೋಣಿಯು ಸಂಸಾರವನ್ನು ಸಾಗಿಸುತ್ತಿರುತ್ತಾರೆ. ಅವನ ಮಾವನು ತಿಪ್ಪನನ್ನು ನೋಡಲು ಬರುತ್ತಾನೆ. ಒಂದು ದಿವಸ ಲಾಟರಿಯನ್ನು ತೆಗೆದುಕೊಂಡಿರುತ್ತಾನೆ. ಆಗ ಮಾವನು ತಿಪ್ಪನ ಬಳಿ ವಿಚಾರಿಸುತ್ತಾನೆ.

"ತಿಪ್ಗ ನಿನ್ನತ್ರ ಒಂದ್ ವಿಷಯ ಮಾತಾಡ್ಬೇಕಿತ್ತು' ಎಂದ

ಅಂಗ್ ಬಾ ದಾರಿಗೆ, ಅದೇನ್ ಹೇಳ್ ಮಾವ, ನನ್ತಾವ ನೀನೇನೂ ಹಿಂದ್ ಮುಂದ್ ನೋಡ್ಬೇಡ. . . . .' ಎಂದು ಕುತೂಹಲಗೊಂಡ ತಿಪ್ಗನು.

'ಈ ತಿಂಗ್ಳಿಂದೆ ನೀನು ರಂಗಮ್ಮನ ಮಗ್ಳ ಹುಟ್‌ಕೂದ್ಲಿಗೆ ಕದ್ರಿಗೆ ಬಂದಿದ್ದಾಗ, ಸರಾಬ್ ಅಂಗ್ಡಿತಾವ ಒಂದು ಲಾಟರಿ ಟಿಕೆಟ್ಟು ಕೊಂಡಿದ್ದಲ್ಲ, ಅದೆಲ್ಲೈತೆ? ಇಟ್ಕಂಡಿದ್ದಿಯೋ . . . . ಇಲ್ಲ ಬಿಸಾಕಿದ್ದೀಯೋ.

'ಅರೆ ಶಿವ್ನೆ ಮರೆತಿದ್ದೆ, ಯಾರೇಗ . . . ' ಎಂದು ಅಡುಗೆ ಕೋಣೆಗೆ ಎದ್ದು ಹೋಗಿ ಮೂರ್‍ನಾಲ್ಕು ಗುಡಾಣಗಳನ್ನು ಇಳಿಸಿ ಮೆಣಸಿನಕಾಯಿ ಗುಡಾಣಕ್ಕೆ ಕೈ ಹಾಕಿ ತಡಕಿದ. ಟಿಕೆಟ್ಟು ಅಲ್ಲೇ ಇತ್ತು, ಒಣಮೆಣಸಿನಕಾಯಿ ಕದಲಿಸಿದ್ದರಿಂದ ಮನೆಯಲ್ಲೆಲ್ಲ ಘಾಟು ಸುತ್ತಿಕೊಂಡು ಎಲ್ಲರೂ ಕೆಮ್ಮತೊಡಗಿದರು.

'ತಿಪ್ಗನು ಟಿಕೆಟ್ಟಿನ ಮೇಲಿದ್ದ ಮೆಣಸಿನ ಕೆಮ್ಮನ್ನು ಧೂಳನ್ನು ಕೊಡುವುತ್ತಾ ಉಗ್ರಪ್ಪನ ಕೈಗೆ ಕೊಟ್ಟ, ಉಗ್ರಪ್ಪ ಅಂಗಿಬಟ್ಟೆಯ ಒಳಜೇಬಿಗೆ ಕೈಹಾಕಿ ಹಳೆಯ ಪ್ಯಾಕೆಟ್ ಕ್ಯಾಲೆಂಡರ್ ತೆಗೆದು ಕೊನೆಯ ಪುಟದಲ್ಲಿ ಗುರುತು ಹಾಕಿಕೊಂಡಿದ್ದ ನಂಬರನ್ನು ತಿಪ್ಗನು ಕೊಟ್ಟ ಲಾಟರಿ ಟಿಕೆಟ್ಟಿನ ನಂಬರಿಗೆ ಇಟ್ಟು ನೋಡಿದ. ಕರೆಕ್ಟು! ಎರಡೂ ಒಂದೇ ನಂಬರ್‍ರು, ಅಯ್ಯೋ ಪರಬ್ರಮ್ಮ! ಐದು ಸಾವಿರ ರೂಪಾಯಿ ಬಹುಮಾನ ಹೊಡೆದಿದ್ದ ಆಂಧ್ರಲಕ್ಷ್ಮಿ ಲಾಟರಿ ಟಿಕೆಟ್ಟು ತಿಪ್ಗನ ಅಡುಗೆ ಮನೆಯ ಒಣ ಮೆಣಸಿನಕಾಯಿ ಗುಡಾಣದಲ್ಲಿ ಒಂದು ತಿಂಗಳ ಕಾಲ ಘಾಟು ಕುಡಿಯುತ್ತಾ ಕುಳಿತಿತ್ತೆನ್ನುವುದು ಹಂದ್ರಾಳದಲ್ಲಿ ನಡೆದ ಕೆಲವೇ ಸೋಜಿಗದ ಪ್ರಸಂಗಗಳಲ್ಲೊಂದಾಗಿ ಹೋಯಿತು"[2] ಹಣದ ಆಸೆ ಶೀಘ್ರ ಶ್ರೀಮಂತಿಕೆಯ ಆಸೆಯು ತಿಪ್ಗನಿಗೆ ಹುಟ್ಟುತ್ತದೆ. ಉಗ್ರಪ್ಪ ಮತ್ತು ತಿಪ್ಗನು ಇಬ್ಬರೂ ಸೇರಿ ಕದ್ರಿಗೆ ಪ್ರಯಾಣವನ್ನು ಬೆಳೆಸುತ್ತಾರೆ. ಇಬ್ಬರೂ ಆಸೆಯಿಂದ ಹೋಗುತ್ತಾರೆ.

"ಬೆಳಿಗ್ಗೆ ಹತ್ತು ಗಂಟೆಗೆ ಉಗ್ರಪ್ಪನೂ ತಿಪ್ಗನೂ ಲಗುಬಗೆಯಿಂದ ಲಾಟರಿ ಶಾಪಿಗೆ ಹೋದರು. ಲಾಟರಿ ಅಂಗಡಿಯವನು ಅವರನ್ನು ನೂರೆಂಟು ಪ್ರಶ್ನೆಗಳನ್ನು ಕೇಳಿದನು. ಯಾಕೆ ಇಷ್ಟು ಲೇಟಾಗಿ ಬಂದಿರಿ ಎಂದು ಅನುಮಾನ ಪಟ್ಟುಕೊಂಡನು. ಉಗ್ರಪ್ಪನು ತನ್ನ ಪರಿಚಯ ಮಾಡಿಕೊಂಡು ಲೇಟಾಗಲು ಕಾರಣಗಳನ್ನು ಹೇಳಿದ ಮೇಲೆ ಅವನು ಲೋಕಲ್‌ನವನೆಂದು ತಿಳಿದ ಮೇಲೆ ಹಣ ಕೊಡಲು ಒಪ್ಪಿಕೊಂಡ. ಸದ್ಯ ಗಂಡಾಂತರ ತಪ್ಪಿತು ಎಂದು ನಿಟ್ಟಿಸಿರುಬಿಟ್ಟನು ತಿಪ್ಗ. ಒಂದು ಗಂಟೆ ಕಾಯಿಸಿದ ಮೇಲೆ ಪೇಪರ್ ಮೇಲೆ ಹೆಬ್ಬೆಟ್ಟು ಒತ್ತಿಸಿಕೊಂಡು ನಾಲ್ಕು ನೂರು ಕಮೀಷನ್ ಹಿಡಿದುಕೊಂಡು ನಾಲ್ಕು ಸಾವಿರದ ಆರುನೂರು ರೂಪಾಯಿಗಳನ್ನು ಎಣಿಸಿ ತಿಪ್ಗನ ಕೈಗೆ ಇಟ್ಟನು. ದುಡ್ಡು ಮಸ್ತಾಗಿ ಇದ್ದುದ್ದರಿಂದ ಇಬ್ಬರೂ ಸಾರಾಯಿ ಶಾಪಿಗೆ ಹೋಗದೆ ಬಾರ್ ಅಂಡ್ ರೆಸ್ಟೋರೆಂಟ್‌ಗೆ ನುಗ್ಗಿದರು. ತೃಪ್ತಿಯಾಗುವಷ್ಟು ರಮ್ ಕುಡಿದು, ಎರಡೆರಡು ಪ್ಲೇಟ್ ಲಿವರ್ ಮತ್ತು ಕುರ್ಮ ತಿಂದರು. ತಿಪ್ಗನು ಸಂತೃಪ್ತಿಯಿಂದ ತೇಗುತ್ತಾ 'ನೀನು ಇಲ್‌ದಿದ್ರೆ ನಂಗೆ ಲಾಟರಿ ದಕ್ತಿರ್‍ಲಿಲ್ಲ ಮಾವ. ಇದನ್ನು ನೀನಿಟ್ಕೊ ಅಂತ ಉಗ್ರಪ್ಪನಿಗೆ ನಾಲ್ಕು ನೂರು

ರೂಪಾಯಿ ಕೊಟ್ಟ[೯] ನಂತರ ಹೆಂಡಿತಿಗೆ ಮಕ್ಕಳಿಗೆ ಬಟ್ಟೆಯನ್ನು ತೆಗೆದುಕೊಂಡು ತನ್ನ ಊರಿಗೆ ಪ್ರಯಾಣ ಬೆಳೆಸಿ ಹೋಗುತ್ತಾನೆ. ಅಲ್ಲಿ ಯಂಗಟ್ರೋಣಿಯು ಅವರ ಅಣ್ಣಂದಿರಿಗೆ ಹಾಗೂ ಊರಿನವರಿಗೆಲ್ಲಾ ವಿಚಾರವನ್ನು ಮುಟ್ಟಿಸಿರುತ್ತಾಳೆ.

ಊರಿನವರೆಲ್ಲ ಸಣ್ಣ ಮೊತ್ತದ ಲಾಟರಿಯ ಸುದ್ದಿ ಊರ ಜನ ವಿವಿಧ ಮೊತ್ತದ ಭಾರಿ ಹಣ ಬಂದಿರಬಹುದೆಂದು ತಿಳಿದುಕೊಂಡು ತಿಪ್ಪನ ಮೇಲೆ ಅನುಮಾನವನ್ನು ಪಟ್ಟಿರುತ್ತಾರೆ. ಇಡೀ ಊರೇ ಅವನನ್ನು ವಿಚಾರಿಸುತ್ತಾ ಹೋಗುತ್ತಾರೆ. ಕೆಳವರ್ಗದವರು ಎಲ್ಲಿ ಮೇಲೆ ಬಂದು ಬಿಡುತ್ತಾನೋ ಎಂದು ಊರ ಜನ ಮಾತಾಡಿಕೊಳ್ಳುತ್ತಿರುತ್ತಾರೆ. ಅಣ್ಣಂದಿರ ಬಳಿ ಮನಸ್ತಾಪವಾಗುವುದು, ಊರಿನ ಜನರ ಬಳಿಯಲ್ಲೂ ಸಹ ಅವರ ಜೊತೆಯಲ್ಲಿ ಮನಸ್ತಾಪಗಳು ಅತ್ಯಂತ ವಾಸ್ತವವಾಗಿ ಈ ಕಥೆಯಲ್ಲಿ ಚಿತ್ರಣಗೊಂಡಿದೆ. ಹಾಗೆಯೇ ಪ್ರಾದೇಶಿಕತೆ ಭಾಷೆಯನ್ನು ನೋಡಬಹುದು. ಹಂದ್ರಾಳರು ಕನ್ನಡದ ಜೊತೆಗೆ ತೆಲುಗು ಹಾಗೂ ಇಂಗ್ಲಿಷ್ ಭಾಷೆಯನ್ನು ಹೆಚ್ಚಾಗಿ ಬಳಸಿದ್ದಾರೆ ಎಂದು ಹೇಳಬಹುದು.

"ಮಾನವರ ಅಸಹಾಯಕತೆಯನ್ನು ನಾನು ಹಂದ್ರಾಳರ ಕಥೆಗಳಲ್ಲಿ ಕಂಡದ್ದನ್ನು ದಾಸ್ತೊವಸ್ಕಿ ಕಥೆಗಳಲ್ಲಿ ಮಾತ್ರ ಕಂಡಿದ್ದೇನೆ. ಹಂದ್ರಾಳರ ಕಥೆಗಳು ಮೌನದಲ್ಲೆ ಸಂಕಟದಿಂದ ಮೈಮುರಿದು ಕಾಣದ ಕಂಬನಿ ಸುರಿಸುತ್ತವೆ. ಭಾರತದ ಬಡತನವೆಲ್ಲ ಒಂದಾಗಿ ದುಃಖಿಸುತ್ತದೆ. ಸ್ವಾತಂತ್ರ್ಯನಂತರ ಭಾರತದ ನೈತಿಕ ನೆಲೆಗಟ್ಟು ಬಿರುಕು ಬಿಡುತ್ತಿರುವುದನ್ನು ಅತಿ ಸೂಕ್ಷ್ಮವಾಗಿ ಗಮನಿಸುತ್ತಾ ಬಂದಿದ್ದ. ಈ ಕಥೆಗಾರನಿಗೆ ಭಾರತದ ಭವಿಷ್ಯದ ಬಗೆಗೆ ಇರುವ ಕಳಕಳಿಯನ್ನು ಕಂಡು ನನ್ನ ಮನಸ್ಸು ಈ ಕಥೆಗಾರ ಖಂಡಿತ ಸ್ವತಂತ್ರ ಭಾರತದ ಅತ್ಯಂತ ಪ್ರಮುಖ ಕತೆಗಾರರಲ್ಲೊಬ್ಬನಾಗಬಲ್ಲನೆಂದು ಪಿಸುಗುಟ್ಟಿತು"[೧೦] ಎಂದು ರಾಮಣ್ಣನವರು ಹಂದ್ರಾಳರ ಕತೆಗಳನ್ನು ಕುರಿತು ಹೇಳುತ್ತಾರೆ.

ಹಂದ್ರಾಳರ 'ಜಾಗೃತಿ' ಎಂಬ ಕತೆಯು ದಲಿತರನ್ನು ಶೋಷಣೆ ಮಾಡುವ ಭಾಷೆಯು ಹಾಗೂ ಜಮೀನ್ದಾರಿನ ದರ್ಪಗಾರಿಕೆ ಭಾಷೆಯನ್ನು ನೋಡಬಹುದಾಗಿದೆ. ತುಂಬಾ ಸ್ವಾರಸ್ಯವಾಗಿ ಜಾಗೃತಿ ಕತೆಯನ್ನು ಚಿತ್ರಿಸಿದ್ದಾರೆ. ದರ್ಪಗಾರಿಕೆ ಭಾಷೆಯಿಂದಲೇ ಶೋಷಣೆ ಮಾಡುವುದನ್ನು ಈ ಕತೆಯು ತಿಳಿಸುತ್ತದೆ. ಕತೆಯಲ್ಲಿ ಬರುವ ಪಾತ್ರಗಳಲ್ಲಿ ಬೋಜ ತನ್ನ ಮಗನಾದ ತಿಲಕನನ್ನು ಶಾಲೆಗೆ ಸೇರಿಸಿ, ಅವನನ್ನು ಉನ್ನತ ವಿದ್ಯಾಭ್ಯಾಸವನ್ನು ಮಾಡಿಸುತ್ತಾನೆ. ಮಗನು ಒಂದು ಒಳ್ಳೆಯ ಕೆಲಸಕ್ಕೆ ಸೇರಿಕೊಂಡರೆ ಸಾಕು ಎಂಬ ನಿಲುವನ್ನು ಹೊಂದಿರುತ್ತಾನೆ. ಆದರೆ ದಲಿತ ಕುಟುಂಬಕ್ಕೆ ಸೇರಿದ ಇವರನ್ನು ಊರಿನ ಜಮೀನುದಾರ ಅವರ ಏಳಿಗೆಯನ್ನು ಸಹಿಸದೆ ದರ್ಪಗಾರಿಕೆಯ ಭಾಷೆಯನ್ನು ಬಳಸಿ ಅವರಿಗೆ ನೋವನ್ನು ಕೊಡುತ್ತಿರುತ್ತಾನೆ.

"ಹಟ್ಟಿಯ ಜನವೆಲ್ಲ ಮಲಗಿತ್ತು. ಅವನಿಗೆ ಬುದ್ಧಿ ಬಂದ ನಂತರ ಸುಮಾರು ನಲವತ್ತು ಬೇಸಿಗೆಗಳನ್ನು ಕಂಡಿದ್ದಾನೆ. ಈ ನಲವತ್ತು ಬೇಸಿಗೆಗಳಲ್ಲೂ ತಾನು ಹುಟ್ಟಿ ಬೆಳೆದಂಥ ಹಟ್ಟಿಯಲ್ಲಿ ಯಾವ ಬದಲಾವಣೆಗಳನ್ನೂ ಕಂಡಿಲ್ಲ. ಈ ಜನಕ್ಕೆ ಅದು ಬೇಕಿಲ್ಲ ಕೂಡ. ದಿನವೆಲ್ಲ ದುಡಿದು, ಬಂದ ಹಣದಿಂದ ಕಂಠಪೂರ್ತಿ ಕುಡಿದು ಬಂದು ಹೆಂಡತಿ ಮಕ್ಕಳನ್ನು ಹೊಡೆಯುವರು, ಕುಡಿದ ಖುಷಿಯಲ್ಲಿ ಯಾವುದೋ ನಾಟಕದ ಮಟ್ಟನ್ನು ತೊದಲುತ್ತಾ ಹಾಡುವವರು, ಹಸಿದು ಅಳುವ ಮಕ್ಕಳಿಗೆ ಚಂದ್ರನನ್ನು ತೋರಿಸುತ್ತಾ

ದಾರಿದ್ರ್ಯದ ಭೀಕರತೆಯನ್ನು ಸೌಮ್ಯವಾಗಿ ಅನಾವರಣಗೊಳಿಸುವ ಅಸಹಾಯಕ ನಿರಾಶೆಯ ತಾಯಂದಿರು. ಸೌಕರ್ಯವಿಲ್ಲದ ವೃದ್ಧರು ಸಾವನ್ನು ಆಹ್ವಾನಿಸುತ್ತಾ ವಿಧಿಯನ್ನು ಬಯ್ಯುತ್ತಾ ಗೊಗ್ಗರು ಧ್ವನಿಯಲ್ಲಿ ಕೆಮ್ಮುವುದು, ಸೌದೆಯೋ, ಸಗಣಿಯೋ, ಕೋಳಿಯೋ ಕಳುವಾದುದಕ್ಕೆ ಹಿಡಿ ಹಿಡಿ ಶಾಪ ಹಾಕುತ್ತಾ ಕೆಟ್ಟ ಸ್ವರದಲ್ಲಿ ಬೈದುಕೊಳ್ಳುತ್ತಿರುವವರು, ಸೊಸೆ-ಅತ್ತೆಯಂದಿರ ತಾರಕಕ್ಕೇರಿದ ಜಗಳ, ಕೂಲಿಗೆ ಕರೆಯಲು ಬಂದ ಜಮೀನುದಾರನ ಆಳುಗಳು 'ನಿನ್ನಯ್ಯನ್ ಯಾಕ್ಲೆ ಕೈಕೊಟ್ಟೆ, ಧಣಿ ಹೇಳಿದ್ದು ನಾಳೆ ನಾಟಿಗೆ ಬರ್ಬೇಕಂತೆ. 'ಸಾಲ ವಾಪಸ್ ಕೊಡ್ಬೇಕಂತೆ' ಇತ್ಯಾದಿ ಜಬರ್ದಸ್ತಿನ ಕೂಗುಗಳು . . . . ಅದೇ ಧ್ವನಿಗಳು, ಅದೇ ದೃಶ್ಯಗಳು . . . ತಾನು ಚಿಕ್ಕವನಾಗಿದ್ದಾಗಿನಿಂದಲೂ ಬದಲಾಗದ ಸತ್ಯ ಸ್ಥಿತಿಗಳು"[೧೦] ಇದರಲ್ಲಿ ದಲಿತರ ನೋವಿನ ಭಾಷೆಯನ್ನು ನೋಡಬಹುದು. ಶ್ರೀಮಂತರ ದರ್ಪಗಾರಿಕೆ ಭಾಷೆಗಳನ್ನು ನೋಡಬಹುದು. ತಮ್ಮಲ್ಲಿರುವ ನೋವನ್ನು ತಮ್ಮ ಭಾಷೆಗಳ ಮುಖಾಂತರ ಸ್ಪಷ್ಟಪಡಿಸುತ್ತಾರೆ.

ಹಟ್ಟಿಯ ತಟ್ಪಾಡಜ್ಜ ಎಂಬುವನು ತಮ್ಮಲ್ಲಿರುವ ನೋವನ್ನು ಹಾಡಿನ ಭಾಷೆಯ ಮೂಲಕ ವ್ಯಕ್ತಪಡಿಸುತ್ತಾರೆ. "ಹಟ್ಟಿಯ ಮೇಲ್ಭಾಗದ ತಟ್ಪಾಡಜ್ಜ ಹಾಡುತ್ತಿದ್ದ ಯಾವನೋ ಸಮತಾವಾದಿ ದಾಸನೋಬ್ಬ ರಚಿಸಿದ್ದ ಪದವೊಂದು ಅಲೆ ಅಲೆಯಾಗಿ ತೇಲಿ ಬರುತ್ತಿತ್ತು.

ಹಂದಿಯನ್ನು ತಿಂತೀರ ಊರ ಹೊರಗಿರತೀರ
ಗೋವನ್ನು ತಿಂತೀವಿ ಊರ ಹೊರಗಿರತೀವಿ
ಹಂದಿಯೇನು ತಿಂತೈತೆ ಗೋವೇನು ತಿಂತೈತೆ
ತಿಳಿದು ಹೇಳಿರೋ ದೊಡ್ಡ ಮನುಷ್ಯರೆ. . . .

ತಟ್ಪಾಡಜ್ಜನ ಇಂತಹ ಪದಗಳು ಜಮೀನುದಾರಿ ನಾಗರ ಹೆಡೆ ಎತ್ತಿ ಆಡುತ್ತಿದ್ದ ಆ ಬಯಲು ಸೀಮೆಯಲ್ಲಿ ಯಾರ ಮೇಲೂ ಯಾವುದೇ ರೀತಿಯ ಪ್ರಭಾವವನ್ನು ಬೀರಿರಲಿಲ್ಲ"[೧೧] ತಟ್ಪಾಡಜ್ಜನು ತನ್ನಲ್ಲಿರುವ ನೋವನ್ನು ಪದಗಳ ಭಾಷೆಗಳ ಮೂಲಕ ಹೇಳುತ್ತಾ ಹೋಗುತ್ತಾನೆ. ಇದೇ ರೀತಿಯಲ್ಲಿ ದಲಿತರು ಕಷ್ಟ ಪಡುವ ಜನರು ಅವರಿಗೆ ನ್ಯಾಯವೂ ದೊರಕುತ್ತಿಲ್ಲಾ ಎಂದು ಈ ಕೆಳಗಿನ ಕವಿತೆಯಲ್ಲಿ ಡಾ.ಸಿದ್ಧಲಿಂಗಯ್ಯನವರು ತಮ್ಮದೇ ಆದಂತಹ ಹೋರಾಟದ ನೋವಿನ ಭಾಷೆಯ ಮುಖಾಂತರ ವ್ಯಕ್ತಪಡಿಸುತ್ತಾರೆ.

ಹಸಿವಿನಿಂದ ಸತ್ತೋರು ಸೈಜುಗಲ್ಲು ಹೊತ್ತೋರು
ವದೆಸಿಕೊಂಡು ವರಗಿದೋರು ನನ್ನ ಜನಗಳು
ಕಾಲುಕಯ್ಯಿ ಹಿಡಿಯೋರು ಕೈ ಮಡಗಿಸಿಕೊಳ್ಳೋರು
ಭಕ್ತರಪ್ಪ ಭಕ್ತರೋ ನನ್ನ ಜನಗಳು
ಹೊಲವನುತ್ತು ಬಿತ್ತೋರು ಬೆಳೆಯ ಕುಯ್ದು ಬೆವರೋರು
ಬಿಸಿಲಿನಲ್ಲಿ ಬೇಯೋರು ನನ್ನ ಜನಗಳು
ಬರಿಗೈಲೇ ಬಂದೋರು ಉಸ್ಸೆಂದು ಕುತೋರು

ಹೊಟ್ಟೆ ಬಟ್ಟೆ ಕಟ್ಟಿದೋರು ನನ್ನ ಜನಗಳು
ಮಾಳಿಗೆಗಳ ಎತ್ತಿದೋರು ಬಂಗಲೆಗಳ ಕಟ್ಟಿದೋರು
ತಳಾದೀಗೆ ಸಿಕ್ಕಿದೋರು ನನ್ನ ಜನಗಳು
ಬೀದಿಯಲ್ಲಿ ಬಿದ್ದೋರು ಸದ್ದಿಲ್ಲದೆ ಇದ್ದೋರು
ಒಳಗೊಳಗೇ ಅತ್ತೋರು ನನ್ನ ಜನಗಳು
ಬಡ್ಡಿಯನ್ನು ತೆತ್ತೋರು ಭಾಷಣಗಳ ಬೆಂಕಿಯಲ್ಲಿ
ಬೆಂದು ಬೂದಿಯಾದೋರು ನನ್ನ ಜನಗಳು
ಪರಮಾತ್ಮನ ಹೆಸರು ಹೇಳಿ ಪರಮಾನ್ನ ಉಂಡಜನಕೆ
ಬೂಟುಮೆಟ್ಟು ಹೊಲೆದೋರು ನನ್ನ ಜನಗಳು
ಚಿನ್ನವನ್ನು ತೆಗೆಯೋರು ಅನ್ನವನ್ನು ಕಾಣದೋರು
ಬಟ್ಟೆಯನ್ನು ನೇಯೋರು ಬರಿಮೈಲೇ ಹೋಗೋರು
ಹೇಳಿದಂತೆ ಕೇಳುತಾರೆ ನನ್ನ ಜನಗಳು
ಗಾಳಿಯಲ್ಲೆ ಬಾಳುತ್ತಾರೆ ನನ್ನ ಜನಗಳು"[೧೨]

ಹೀಗೆ ಡಾ.ಸಿದ್ಧಲಿಂಗಯ್ಯನವರು ಕೂಡ ತಮ್ಮ ಕವಿತೆಗಳಲ್ಲಿ ದಲಿತರಿಗೆ ಸಮಾಜದಲ್ಲಿ ಸಿಗಬೇಕಾಗಿರುವುದು ಸಿಗುತ್ತಿಲ್ಲಾ ಎಂಬ ಕಳವಳವನ್ನು ಕವಿತೆಗಳ ಮೂಲಕ ಶೋಷಿತ, ನೋವಿನ ಭಾಷೆಯಿಂದ ವ್ಯಕ್ತಪಡಿಸಿದ್ದಾರೆ.

ಬೋಜ ಮಗನು ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಪಾಸಾದ ತಿಲಕ. ಆದರೆ ಜಮೀನ್ದಾರನ ಮಕ್ಕಳು ಪಾಸಾಗಲಿಲ್ಲ. ಇದರಿಂದ ಜಮೀನ್ದಾರನ ಕೆಂಗಣ್ಣಿಗೆ ಗುರಿಯಾದನು ತಿಲಕ. ಅವನು ಮನಸ್ಸು ಮಾಡಿದರೆ ಇಡೀ ಹಟ್ಟಿಯನ್ನೇ ಸುಟ್ಟು ನಿರ್ನಾಮ ಮಾಡಬಲ್ಲ. ಒಂದು ಎಕರೆ ಭೂಮಿಯನ್ನು ಆವರಿಸಿದ ಜಮೀನುದಾರನ ಮನೆಯಲ್ಲಿ ಪಾಳೆಗಾರಿಕೆಯ ಕ್ರೌರ್ಯ, ದೌಲತ್ತುಗಳು ತಾಂಡವವಾಡುತ್ತಿದ್ದವು. ದೊಡ್ಡ ದೊಡ್ಡ ರಾಜಕಾರಣಿಗಳು, ಅಧಿಕಾರಿಗಳು ಜಮೀನುದಾರನ ಆಪ್ತ ಸ್ನೇಹಿತರು ಮತ್ತು ಅತಿಥಿಗಳಾಗಿದ್ದರು. ಆ ಸುತ್ತಮುತ್ತಲಿಗೆ ಜಮೀನುದಾರನ ದೌರ್ಜನ್ಯಗಳನ್ನು ಖಂಡಿಸುತ್ತಿದ್ದವರು ಅವರೊಬ್ಬರೆ. ಆದ್ದರಿಂದಲೇ ರಾಮಯ್ಯ ಮಾಸ್ತರು ಸುತ್ತಮುತ್ತಲಿನ ಊರುಗಳ ಬಡಜನರ ಪ್ರೀತಿ, ವಿಶ್ವಾಸಗಳನ್ನು ಗಳಿಸಿದ್ದರು. ಸ್ವತಃ ಜಮೀನುದಾರನ ಆಳುಗಳೂ ಸಹ ರಾಮಯ್ಯ ಮಾಸ್ತರನ್ನು ಮೆಚ್ಚುತ್ತಿದ್ದರು. ಆದರೆ ಜಮೀನುದಾರನ ಶ್ರೀಮಂತಿಕೆ ಮುಂದೆ ಮಾಸ್ತರರ ಪ್ರೀತಿ ವಿಶ್ವಾಸಗಳು ಕ್ಷೀಣಿಸಿಬಿಡುತ್ತಿದ್ದವು. ಜಮೀನ್ದಾರ ಮಾಸ್ತರರನ್ನು ಕೇವಲವಾದ ಭಾಷೆಯನ್ನು ಬಳಸಿ ಅವರನ್ನು ಹೀಯಾಳಿಸುತ್ತಾನೆ.

"ಆ ಮಾದಿಗ್ರೊನ್ ಬಗ್ಗೆ ಅದ್ಯಾಕೆ ಅಷ್ಟು ಮುತುವರ್ಜಿ ವಹಿಸಿದ್ದೀರ ಮೇಷ್ಟ್ರೇ? ಜಮೀನುದಾರ ಜಬರದಸ್ತಿನಿಂದಲೇ ಕೇಳಿದ್ದ.

'ಪ್ರತಿಭೆಗೆ ಪ್ರೋತ್ಸಾಹ ಕೊಡಬೇಕಾದ್ದು ಮಾಸ್ತರಾಗಿ ನನ್ನ ಧರ್ಮ, ನಾನು ಗಾಂಧಿಹಾದಿಯಲ್ಲಿ ನಂಬಿಕೆಯುಳ್ಳವನು. ಜಾತಿಮತಗಳ ಭೇದ ನನ್ನಲ್ಲಿಲ್ಲ. ಅದೂ ಅಲ್ಲದೆ ಇದು ಪ್ರಜಾಪ್ರಭುತ್ವ ರಾಷ್ಟ್ರ'

‘ಅಷ್ಟೇನಾ ನಿಮ್ಮ ಮಾತು?

‘ಹೌದು’

‘ಸರಿ, ನೀವು ಹೋಗಬಹುದು’

ಇದಾದ ಮಾರನೆಯ ದಿನ ಜಮೀನುದಾರನ ಕಾರು ಅರಳಿಮರದ ಕೆಳಗೆ ಗಕ್ಕನೆ ನಿಂತಿತು. ಕಾರಿನಲ್ಲಿ ಕುಳಿತೇ ಜಮೀನುದಾರ ‘ಬೋಜ’ ಎಂದು ಕೂಗಿದ. ಬೋಜ ಘೋರ ಅಪರಾಧ ಮಾಡಿದವನಂತೆ, ‘ಯಪ್ಪಾ ಧಣಿ’ ಎಂದು ದೂರದಿಂದಲೇ ಕೈ ಜೋಡಿಸಿಕೊಂಡು ಕಾರಿನ ಹತ್ತಿರ ನಡೆದ.

‘ಏನ್ಲೇ ನಿನ್ನಯ್ಯನ್, ಮಗನ್ನ ಕಾಲೇಜ್ಗೆ ಕಳಿಸಿದ್ದೀಯಂತೆ?

‘ಎಲ್ಲಾ ತಮ್ಮ ದಯೆ ಧಣಿ’ ಮೆಲ್ಲಗೆ ತೊದಲಿದ

‘ಎಲ್ಲಾ ತಮ್ಮ ದಯೆ ಅಂತೀಯ, ನನ್ನ ಕೇಳ್ದೆ ಕಾಲೇಜ್ಗೆ ಕಳ್ಸಿದ್ದೀಯ

‘ಏನೋ ತಪ್ಪಾಯ್ತು ಧಣಿ, ನಿಮ್ಮೊಡ್ಲಾಕೆ ಹಾಕ್ಕೊಳ್ಳಿ, ಅವನೂ ನಿಮ್ಮ ಮಗನಂತೆ ತಿಳ್ಕಳಿ’

‘ಹೂಂ . . . .ಹೂಂ. . . ಕಾಲ ಬದ್ಲಾಗೋಯ್ತು. ನಡೀಲಿ. . . . ಆ ರಾಮಯ್ಯ ಮೇಷ್ಟ್ರೊಬ್ಬ ಅವ್ನೆ. ನಿನ್ನ ಮಗ ಅದೆಂತ ಅಂತಸ್ತಿಗೋಗ್ತಾನೋ ನಾನು ನೋಡ್ತೀನಿ. . . .’ ಕಾರು ಹೊರಟಿತು. ಬೋಜನಿಗೆ ಪಿಚ್ಚೆನಿಸಿತು. ತನ್ನ ಮಗನನ್ನು ಓದಿಸಲು ಜಮೀನುದಾರನನ್ನು ಕೇಳಬೇಕು! ನನ್ನ ಕುಲದ ಸ್ಥಿತಿಯ ಬಗ್ಗೆ ಅಸಹ್ಯವೆನಿಸಿತು”[೧೩] ಇಲ್ಲೂ ಜಮೀನ್ದಾರನ ದರ್ಪಗಾರಿಕೆ ಭಾಷೆಯನ್ನು ನೋಡಬಹುದು. ಹಂದ್ರಾಳರು ಸಮಾಜದಲ್ಲಿ ಆಗುತ್ತಿರುವ ಶೋಷಣೆಗಳನ್ನು, ದರ್ಪಗಾರಿಕೆಯನ್ನು ತಮ್ಮ ಕತೆಗಳ ಮುಖಾಂತರ ನೋವಿನ ಭಾಷೆಯ ಮೂಲಕ ಹೊರ ಜಗತ್ತಿಗೆ ಎತ್ತಿ ತೋರಿಸಿದ್ದಾರೆ.

ತಿಲಕನೂ ಚೆನ್ನಾಗಿ ಓದುತ್ತಿದ್ದ ಅದನ್ನು ಸಹಿಸದಾ ಜಮೀನ್ದಾರನು ಬೋಜನಿಗೆ ಚುಚ್ಚುವಂತೆ ಭಾಷೆಯನ್ನು ಬಳಕೆ ಮಾಡುತ್ತಿದ್ದ. ತಿಲಕನೂ ರಜಾ ದಿನಗಳಲ್ಲಿ ಅಪ್ಪನ ಜೊತೆಯಲ್ಲಿ ಚಪ್ಪಲಿಯನ್ನು ಹೊಲಿಯುತ್ತಿದ್ದಾ. ಒಂದು ದಿನ ಜಮೀನ್ದಾರನು ಅವರ ಬಳಿ ಬಂದು “ಏನ್ಲೇ ಬೋಜ, ಮಗನ್ಗೂ ಚಪ್ಲಿ ಹೊಲಿಯೋದು ಕಲ್ಸಿದ್ದೀಯಾ, ನಿನ್ನಯ್ಯನ್ ಹುಟ್ ಕಸ್ಬು ಎಲ್ಲಿ ಹೋಗ್ತೈತೆ, ನಾಯೀನ ತಗ್ಹೊಂಡೋಗಿ ಸಿಂಹಾಸನದ ಮೇಲೆ ಕುಂದ್ರಿಸಿದಂತೆ’ ‘ವ್ಯಂಗ್ಯ ಮತ್ತು ತಿರಸ್ಕಾರ ತುಂಬಿತ್ತು ಮಾತುಗಳಲ್ಲಿ ತಿಲಕ ತಲೆ ಎತ್ತಿದವನು ಗಂಭೀರವಾಗಿ ನುಡಿದ’.

‘ಯಾಕೆ ಜಮೀನ್ದಾರ್ರೆ, ನಿಮ್ಮ ಮಗ ನೇಗಿಲು ಹಿಡಿದ್ರೆ ತಪ್ಪಿಲ್ಲ. . . .ಪೂಜಾರ್ರ ಮಗ ಗಂಟೆ ಹಿಡಿದ್ರೆ ತಪ್ಪಿಲ್ಲ. . . ನಾನು ಚಪ್ಪಲಿ ಹಿಡಿದ್ರೆ ತಪ್ಪೆ? ಕಸುಬು ಮುಖ್ಯವಲ್ಲ ಅದನ್ನು ಶ್ರದ್ಧೆಯಿಂದ ನ್ಯಾಯ ರೀತಿಯಲ್ಲಿ ಮಾಡೋದು ಮುಖ್ಯ’.

ಜಮೀನುದಾರ ಬಾಯಿಯ ಮೇಲೆ ಬೆರಳಿಟ್ಟುಕೊಂಡಿದ್ದ.

ಪಟ್ಟಣಕ್ಕೆ ಹೋಗಿ ಚಾಲೂಕು ಮಾತು ಕಲ್ತಿದ್ದೀಯಲೇ ಮಗಾ’ ತುಸು ಕೋಪದಿಂದ ನುಡಿದ ಜಮೀನುದಾರ”[೧೪] ಇದರಿಂದ ಜಮೀನ್ದಾರನು ತಿಲಕನ ಮೇಲೆ ತುಂಬಾ ಕೋಪದಿಂದ ದರ್ಪದ ಭಾಷೆಗಳ್ನಾಡಿ ಅವನ ಮೇಲೆ ಕೆಂಡಾಮಂಡಲನಾದನು. ಅವನ ಭವಿಷ್ಯವನ್ನು ಆಳು ಮಾಡುವ ಕೆಲಸಕ್ಕೆ ಕೈ

ಹಾಕಿದನು. ಅವನಿಗೆ ಎಲ್ಲೂ ಕೆಲಸ ಸಿಗದೇ ಇರೋ ರೀತಿಯಲ್ಲಿ ತಂತ್ರವನ್ನುಡಿದನು. ಕೊನೆಗೆ ತಿಲಕ ರಾಜಧಾನಿಯಲ್ಲಿ ಚಪ್ಪಲಿ ಹೊಲೆಯುವ ಕಾಯಕವನ್ನು ಮಾಡುತ್ತಿರುತ್ತಾನೆ. ಬೋಜನು ನನ್ನ ಮಗ ರಾಜಧಾನಿಯಲ್ಲಿ ಒಳ್ಳೆಯ ಕೆಲಸದಲ್ಲಿ ಇದ್ದಾನೆ ಅಂದುಕೊಂಡಿದ್ದನು. ಆದರೆ ಜಮೀನ್ದುದಾರನ ಕೈ ಚಳಕದಿಂದ ತಿಲಕನ ಪಾಲಿಗೆ ಅದು ಮುಳುವಾಗಿ ಪರಿಣಮಿಸಿತು. ಈ ಕಥೆಯಲ್ಲಿ ಶೋಷಣೆಯ ಭಾಷೆಗಳನ್ನು ಕಾಣಬಹುದು. ಹಾಗೂ ದರ್ಪಗಾರಿಕೆಯ ಭಾಷೆ ಎದ್ದು ಕಾಣುತ್ತದೆ. ಇದನ್ನು ಹಂದ್ರಾಳರು ಯಥಾವತ್ತಾಗಿ ಚಿತ್ರಿಸುತ್ತಾ ಹೋಗುತ್ತಾರೆ.

ಕರ್ನಾಟಕದ ರಾಜಕೀಯ ಸಾಂಸ್ಕೃತಿಕ ಕ್ಷೇತ್ರದ ಓರ್ವ ಆಕರ್ಷಕ ಯುವ ರಾಜಕಾರಣಿಯ ಸುತ್ತ ಹೆಣೆದಿರಬಹುದೆಂಬ ಊಹೆಯನ್ನು ಹುಟ್ಟಿಸುವ ಕಥೆ. 'ಕೊನೆ ಘಳಿಗೆಯ ಮೌನ' ನೇರ, ಸರಳವಾದ ಭಾಷೆಯ ಬಳಕೆಯಿಂದ ಈ ಕಥೆಯು ಗಮನ ಸೆಳೆಯುತ್ತದೆ. ಇದರಲ್ಲಿ ಸರಳ ಭಾಷೆಯ ಜೊತೆಗೆ ಇಂಗ್ಲಿಷ್ ಭಾಷೆಯ ಪ್ರಭಾವವನ್ನು ಕಾಣಬಹುದು. ಒಬ್ಬ ರಾಜಕಾರಣಿಯು ಕೊನೆ ಗಳಿಗೆಯಲ್ಲಿ ವೇದನೆ ಪಡುವುದನ್ನು ಕಾಣಬಹುದು. ಸಾವು ಹತ್ತಿರವಾಗುತ್ತಿದ್ದಂತೆ ಬದುಕಬೇಕೆಂಬ ಆಸೆಯು ಈ ರಾಜಕಾರಣಿಗೆ ಬರುತ್ತದೆ.

"ವಿಶಾಲವಾದ ಕಿಟಕಿಯಲ್ಲಿ ಆಸೆಯಿಮದ ಕಣ್ಣು ನೆಟ್ಟೆ, ಹುಣ್ಣಿಮೆ ಕಳೆದು ಮೂರ್ನಾಲ್ಕು ದಿನಗಳಾಗಿರಬೇಕು. ಚಂದ್ರ ಸಮೃದ್ಧಿಯಾಗಿ ಬೆಳಗುತ್ತಿದ್ದಾನೆ. ನಾನೂ ಒಮ್ಮೆ ರಾಜ್ಯದ ರಾಜಕಾರಣದಲ್ಲಿ ಸಾಂಸ್ಕೃತಿಕ ವಲಯದಲ್ಲಿ ಈ ಚಂದ್ರನಂತೆಯೇ ಬೆಳಗಿದವನು. ನಿರಂತರವಾಗಿ ಹಾಗೆಯೇ ಬೆಳಗುತ್ತೇನೆಂದು ಕನಸನ್ನು ಕಂಡವನು. ಆಸೆಯನ್ನು ಇಟ್ಟುಕೊಂಡವನು. ಈಗ ಕನಸಿನ ಕನ್ನಡಿ ಒಡೆದು ಚೂರುಚೂರಾಗಿದೆ. ಇಂತಹ ಸ್ಥಿತಿಯಲ್ಲಿಯೂ ನಾನು ಮೊದಲಿನಂತಾಗಬಹುದೆ ಎನ್ನುವ ದೂರ ಆಸೆ, ಅಟ್‌ಲಿಸ್ಟ್ ಬದುಕಬೇಕೆನ್ನುವ ಆಸೆ, ಸಾವು ಹತ್ತಿರ ಬರುತ್ತಿರುವಂತೆ ಮನುಷ್ಯನಿಗೆ ಬದುಕುವ ಛಲ, ಆಸೆ ಅತಿಯಾಗುತ್ತದೆಂಬ ಸತ್ಯ ಅನುಭವಕ್ಕೆ ಬರುತ್ತಿದೆ. ನನ್ನನ್ನು ನೋಡಲು ಇಂದು ಯಾರು ಬಂದಿದ್ದರೋ ಏನೋ. . .. .?

ಯಾವುದೋ ವಿಚಿತ್ರವಾದ ತೀವ್ರ ಸ್ವರೂಪದ ಖಾಯಿಲೆ ನನ್ನನ್ನು ಆವರಿಸಿಕೊಂಡಿದೆ. ಎಷ್ಟೊಂದು ಮಂದಿ ಡಾಕ್ಟರುಗಳು ನನ್ನಲ್ಲಿನ ಖಾಯಿಲೆಯನ್ನು ಡಯಾಗ್ನೈಸಿಸ್ ಮಾಡಲು ಪ್ರಯತ್ನಿಸಿ ಸೋತಿದ್ದಾರೆ. ನನ್ನ ಖಾಯಿಲೆಯ ಬಗ್ಗೆ ಏನೇನೋ ಸುದ್ದಿಗಳು ಹಬ್ಬಿವೆಯಂತೆ. ಮೆಡಿಕಲ್ ಓದಿರುವ ನನಗೂ ಸಹ ನನ್ನ ರೋಗದ ಬಗ್ಗೆ ಕಿಂಚಿತ್ತೂ ತಿಳಿದಿಲ್ಲ. ಕಣ್ಣುಗಳು ಮೂಲೆಯಲ್ಲಿದ್ದ ವಿಶಾಲವಾದ ಸೋಫಾದ ಕಡೆ ಹೊರಳಿದವು"[೧೫] ಆ ರಾಜಕಾರಣಿಯು ಮನಸ್ಸಿನಲ್ಲಿ ತಳಮಳಗೊಂಡು ಸರಳ ಭಾಷೆಯನ್ನು ನೋಡಬಹುದು.

ರಾಜಕಾರಣಿಯು ತನ್ನ ಜೀವನದಲ್ಲಿ ಮಾಡಿರುವ ಕೆಟ್ಟ ಕೆಲಸಗಳನ್ನೆಲ್ಲಾ ಮತ್ತೆ ನೆನಪು ಮಾಡಿಕೊಳ್ಳುತ್ತಾನೆ. ಅವನ ಪಾಪಪ್ರಜ್ಞೆ, ಆತ್ಮವಿಮರ್ಶೆ ಅದಕ್ಕೆ ಅವನ ಸುತ್ತಲಿನವರ ವಾಸ್ತವ ಪ್ರತಿಕ್ರಿಯೆಗಳು ಅವನನ್ನು ಚುಚ್ಚುತ್ತಿದ್ದವು. ರಾಜಕಾರಣಿಯು ಖಾಯಿಲೆಗೆ ತುತ್ತಾಗಿ ಆಸ್ಪತ್ರೆಗೆ ಸೇರಿದ ಮೇಲೆ ಅವನನ್ನು

ಕೇವಲವಾಗಿ ಕಾಣುತ್ತಾ, ಅವನ ಹಿಂದೆ ಕೆಟ್ಟದಾಗಿ ಮಾತಾಡಿಕೊಳ್ಳುತ್ತಿರುತ್ತಾರೆ. ಹೆಂಡತಿ ಇವನನ್ನು ಬಿಟ್ಟುಹೋಗಿದ್ದು, ವಸುಧಾ ಎಂಬ ಹೆಣ್ಣಿನ ಸಹವಾಸವನ್ನು ಮಾಡುತ್ತಾನೆ.

"ರಾಜಕೀಯ, ಸಾಹಿತ್ಯ, ಸಂಗೀತ ಎಲ್ಲ ಕ್ಷೇತ್ರಗಳಲ್ಲೂ ಅವಳಲ್ಲಿದ್ದ ಆಸಕ್ತಿ ನನ್ನನ್ನು ಆಕರ್ಷಿಸಿತ್ತು. ಅವಳನ್ನು ನನ್ನೊಂದಿಗಿರಲು ಕೇಳಿಕೊಂಡೆ. ಒಪ್ಪಿಕೊಂಡಳು. ಸಂಬಂಧ, ಪ್ರೇಮ, ಕಾಮ, ವ್ಯಾಮೋಹಗಳಿಗೆ ಯಾವುದೇ ನಿರ್ದಿಷ್ಟವಾದ ಅರ್ಥವಾಗಲಿ, ವ್ಯಾಖ್ಯೆಯಾಗಲಿ ಪರಿಮಿತಿಗಳಾಗಲಿ ಇದೆಯೆಂಬುದನ್ನು ಅವಳು ಸುಳ್ಳು ಮಾಡಿದ್ದಳು. ನನಗೆ ಹೆಗಲುಕೊಟ್ಟು ಓಡಾಡಲು ನೆರವಾದಳು. ಅಡುಗೆ ಮಾಡಿ ಬಡಿಸಿದಳು, ಔಷಧಿ ಕುಡಿಸಿದಳು, ಹಾಸಿಗೆಯ ಸುಖ ನೀಡಿದಳು. ಕೊನೆ ಕೊನೆಗೆ ನನ್ನ ರಾಜಕೀಯ ನಿರ್ಧಾರಗಳಲ್ಲಿನ ತಪ್ಪುಗಳನ್ನು ಎತ್ತಿ ತೋರಿಸುತ್ತಿದ್ದಳು. ಅವಳ ಮಾತನ್ನು ಕೇಳಿದ್ದಿದ್ದರೆ ನಾನು ರಾಜಕೀಯವಾಗಿ ಇಂದು ನೆಲಕಚ್ಚುತ್ತಿರಲಿಲ್ಲ. ಈಗ ತಾಯಿಯಂತೆ ಶುಶ್ರೂಷೆ ಮಾಡುತ್ತಿದ್ದಾಳೆ. ವಾರದ ಹಿಂದೆ ಅವಳು ಅಳುತ್ತಾ ಹೇಳಿದ್ದಳು. 'ನಿಮ್ಮ ಆಸ್ತಿಯ ಮೇಲೆ ನಾನು ಕಣ್ಣಿಟ್ಟಿರುವೆನಂತೆ. ಮಗಳಿಗೆ ವಯಸ್ಸಿನವಳು ಹಾಸಿಗೆ ಹಂಚಿಕೊಳ್ಳುತ್ತಿದ್ದಾಳೆ. ನಾಚಿಕೆಯಿಲ್ಲ, ಮಾನ ಮರ್ಯಾದೆಯಿಲ್ಲ ಎಂದು ಇಲ್ಲಿಗೆ ಬಂದವರೆಲ್ಲಾ ಮಾತನಾಡಿಕೊಳ್ಳುತ್ತಾರೆ. ನೀವು ಸತ್ತರೆ ಸಾಕೆಂದು ನಾನು ಕಾಯುತ್ತಿರುವೆನಂತೆ. ಆದರೆ ಸತ್ಯ ಹೇಳುತ್ತೇನೆ. ನೀವು ಮೊದಲಿನಂತಾದರೆ ಸಾಕು ನಾನು ಪ್ರಾಕ್ಟೀಸ್ ಮಾಡಿ ಹಣ ಗಳಿಸಬಲ್ಲೆ. ನನ್ನ ಜೀವನ ನಡೆಸಬಲ್ಲೆ. . ." ಏಕೋ ಕಣ್ಣುಗಳು ಹನಿಗೂಡುತ್ತಿವೆ. . . . ಹಾಗೆಯೇ ಮಂಪರು ಆವರಿಸುತ್ತಿದೆ"[೧೬] ವಸುಧಾಳಿಗೆ ಜೀವನದಲ್ಲಿ ಯಾವ ಆಸೆಯು ಇರದೇ ಅವಳು ಪ್ರೀತಿಗಾಗಿ ಮನಸೋಲುತ್ತಾಳೆ. ಸಮಾಜದಲ್ಲಿ ಅವಳಿಗೆ ಕೆಟ್ಟ ಕೆಟ್ಟ ಮಾತುಗಳಿಂದ ನಿಂದಿಸುತ್ತಿರುತ್ತಾರೆ. ಆದರೆ ರಾಜಕಾರಣಿಗೆ ಪ್ರೀತಿಯಾ ಬದಲು ಅವನನ್ನು ನೋಡಿಕೊಳ್ಳುವಂತಿರಬೇಕು. ತನ್ನ ರಾಜಕಾರಣದ ಜೀವನದಲ್ಲಿ ಎಂತೆಂಥ ಹೆಣ್ಣನ್ನು ಅನುಭವಿಸಿದ ಕ್ಷಣಗಳನ್ನು ಸಹ ನೆನಪಿಗೆ ತಂದುಕೊಳ್ಳುತ್ತಾನೆ. ಇವನಿಗೆ ಸಾವು ಹತ್ತಿರವಾಗುತ್ತಿದ್ದಂತೆ ಬದುಕಬೇಕೆಂಬ ಆಸೆಯು ಹುಟ್ಟುತ್ತದೆ. ವಸುಧಾಳು ತನ್ನ ಅಂತರಂಗದ ಭಾವನೆಗಳನ್ನು ಹಾಗೂ ಹೊರಗಡೆ ಮಾತಾಡಿಕೊಳ್ಳುತ್ತಿರುವುದನ್ನು ಬಹಳ ಸರಳ ಭಾಷೆಯಲ್ಲೇ ಹೇಳುತ್ತಾಳೆ.

'ಪಿಶಾಚಿಯ ಹಲ್ಲುಗಳನ್ನು ಬಿತ್ತಿ ಬೆಳೆದರೆ ಹೆಣಗಳ ಸುಗ್ಗಿಯನ್ನಲ್ಲದೆ ಬೇರೇನನ್ನು ನಿರೀಕ್ಷಿಸಲು ಸಾಧ್ಯ. ಗಾಂಧಿ ಮಹಾತ್ಮನು ಹುಟ್ಟಿದ ಊರಿನಲ್ಲಿಯೇ ನೈಸರ್ಗಿಕ ವಿಕೋಪ, ವಸುಧಾಳಾಗಿದ್ದು, ವಿಜ್ಞಾನ ತಂತ್ರಜ್ಞಾನದ ಏನೆಲ್ಲ ಆವಿಷ್ಕಾರಗಳೂ ನಿಸರ್ಗದ ಮುಂದೆ ಸೊನ್ನೆಯಾಗಿತ್ತು. ಭೂಕಂಪ ಪೀಡಿತ ಜನರಿಗೆ ಒಂದು ಲಕ್ಷ ಸಹಾಯಧನ ಕಳಿಸು, ಮತ್ತೆ ಅದಕ್ಕೆ ಪಬ್ಲಿಸಿಟಿಯು ಬೇಡವೆಂದನು. ರಾಜಕಾರಣಿಯಯ ಬಾಯಿಂದ ನಿಧಾನವಾಗಿ ಮಾತುಗಳು ಬಂದವು. ವಸುಧಾ ಮಂಚದ ಹತ್ತಿರದ ರಿವಾಲ್ವಿಂಗ್ ಚೇರ್ ಮೇಲೆ ಕುಳಿತುಕೊಳ್ಳುತ್ತಾ ಹಾಲು ಕುಡಿಸುತ್ತಾ ಹೇಳಿದಳು. ಅಕ್ಕ ಬಂದಿದ್ದರು ಎಂದು ಹೇಳಿದಳು. ಅವನ ಕಣ್ಣುಗಳು ಅವಳ ಕಡೆ ತಿರುಗಿದವು. ಅವಳು ಮುಂದುವರೆಸಿದಳು. ಅದೇ ನಿಮ್ಮ ಮೊದಲ ಹೆಂಡತಿ ರಜನಿ, ಮುಂದಿನ ವಾರ ನಿಮ್ಮ ಮಕ್ಕಳಿಬ್ಬರು ಅಮೇರಿಕಾದಿಂದ ಬರ್ತಾರಂತೆ. ಆಮೇಲೆ ನನಗೂ ನಿಮಗೂ ಯಾವ ಸಂಬಂಧವೂ ಇಲ್ಲವಂತೆ. ನಿಮ್ಮ ಹೆಣವನ್ನು ಮುಟ್ಟಲು ನನಗೆ ಅವಕಾಶ ಕೊಡುವುದಿಲ್ಲವಂತೆ. ನಾನೇನು

ತಪ್ಪು ಮಾಡಿದ್ದೇನೆ. ಅವಳ ಕಣ್ಣಂಚಿನಲ್ಲಿ ನೀರು ಸುರಿಯತೊಡಗಿತು. ವಸುಧಾ ನನಗೂ ಒಂದು ಆಸರೆಯು ದೊರಕಿದ ಸಂದರ್ಭದಲ್ಲಿ ಬೇರೆಯಾಗುವ ಸಂದರ್ಭ ಒದಗಿ ಬರುತ್ತಿದೆ. ವಸುಧಾಳು ತನ್ನ ಸರ್ವಸ್ವವನ್ನು ಅವನಿಗೆ ಅರ್ಪಿಸಿದ್ದಳು. ವಯಸ್ಸಿನಲ್ಲಿ ಅವಳು ಚಿಕ್ಕವಳಾದರೂ ತಲೆಕೆಡಿಸಿಕೊಂಡಿರಲಿಲ್ಲಾ. ಅವಳ ತಳಮಳಗಳು ನೋವಿನ ಭಾಷೆಯ ಮುಖಾಂತರ ವ್ಯಕ್ತವಾಗಿದೆ.

ಈ ಕಥೆಯಲ್ಲಿ ಸಿ.ಜಿ.ಕೆಯವರ ನೆನಪುಗಳು ಕಾಣಬಹುದು. ರಂಗಭೂಮಿಯಲ್ಲಿ ಅತ್ಯಂತ ಹೆಸರುವಾಸಿಯಾದ ಸಿ.ಜಿ.ಕೆ. ನೆನಪುಗಳು ಅಜಾರಾಮರ. ಹಂದ್ರಾಳರ ಇತರ ಕೆಲವು ಕಥೆಗಳಲ್ಲೂ ಹೀಗೆ ನಮ್ಮ ನಡುವಿನ ಕೆಲವು ಪ್ರಸಿದ್ಧರ ಹೆಸರುಗಳು ಸುಳಿದುಹೋಗುವುದುಂಟು. ಸಿ.ಜಿ.ಕೆ.ಗೆ ಒಂದು ದಿನ ಹಾರ್ಟ್ ಅಟ್ಯಾಕ್ ಆಗಿದ್ದಾಗ ಆಸ್ಪತ್ರೆಗೆ ಚೀಟಿಯನ್ನು ನೀಡಿದ ಕ್ಷಣಗಳನ್ನು ನೆನಪು ಮಾಡಿಕೊಳ್ಳುತ್ತೇನೆ.

"ಹೇಗಿದ್ದೀರಿ ಜಿ.ಕೆ? ವಾರ್ಡ್ ಪ್ರವೇಶಿಸುತ್ತಾ ಕೇಳಿದ್ದೆ.

'ಅಯ್ಯೋ ನೀವ್ಯಾಕೆ ಬರ್‍ಲಿಕ್ಕೋದ್ರಿ ಸಾರ್. ಮೊದ್ಲು ನಿಮ್ಗೇ ಹುಷಾರಿಲ್ಲ" ಮಾಮೂಲಿನಂತೆ ತಮಾಷೆ ಹೊಡೆದಿದ್ದ ಮನುಷ್ಯ. ನಾನು ಹೋಗಿದ್ದು ಅವರಿಗೂ, ಅವರನ್ನು ಕಂಡು ನನಗೂ ಸಂತಸ ಆಗಿತ್ತು. ಒಂದು ರೀತಿ ಒಂದೇ ದೋಣಿಯ ಪಯಣಿಗರಂತೆ.

"ಸಾವನ್ನು ಕಾಯುವುದು ಒಂದು ರೀತಿಯ ವಿಚಿತ್ರ ಖುಷಿಯ ವಿಷಯವಾಗಿದೆ. ಸಾರ್. ಆಸ್ಪತ್ರೆಗೆ ಸೇರಿದ ಮೇಲೆ ಸಾವಿನ ಬಗ್ಗೆ ಬದುಕಿನ ಬಗ್ಗೆ ಸೀರಿಯಸ್‌ನೆಸ್ ಹೋಗಿಬಿಟ್ಟಿದೆ. ಮತ್ತು ಸಾವೊಂದೇ ಸರ್ವ ಸತ್ಯ ಅನ್ನಿಸುತ್ತಿದೆ. ಮನುಷ್ಯ ಯಾವಾಗಲೂ ಒಂಟಿಯೆಂದೆ ನ್ನನ ಭಾವನೆ. ಮನುಷ್ಯ ತನ್ನಲ್ಲಿ ತಾನೇ ವಿಘಟನೆಗೊಳ್ಳುತ್ತಿರುತ್ತಾನೆ. ಪ್ರೊಫೆಸರ್ ಬಾಯಿಂದ ಸಾವಿನ ಸತ್ಯದ ಸಾಲುಗಳು ಧೈರ್ಯದಿಂದ ಹೊರಬರುತ್ತಿದ್ದವು.

"ಹೌದು ಸಾರ್, ಏನಾಗಿದೆ ಈ ದೇಶಕ್ಕೆ? ಎಲ್ಲವೂ ಕಲುಷಿತಗೊಂಡಿದೆ. ಅನ್ನ, ನೀರು, ಗಾಳಿ, ರಾಜಕೀಯ, ಸಾಹಿತ್ಯ, ಪ್ರೀತಿ . . . . ಅಷ್ಟೇಕೆ ಮನಸ್ಸು, ಹೃದಯಗಳು ಕೂಡ. ಇಲ್ಲದಿದ್ದಲ್ಲಿ ರಾಜಕೀಯದಲ್ಲಿ ಇದು ಪ್ರಮುಖ ಸ್ಥಾನದಲ್ಲಿರಬೇಕಾದ ನೀವು ಅತಂತ್ರರಾಗುತ್ತಿರಲಿಲ್ಲ. ಹಾದಿಗಳು ಇಡೀ ಆರ್ಥಿಕ ವ್ಯವಸ್ಥೆನ ಹಾಳುಗೆಡವಿ ಬಿಟ್ರು. ನೀವು ಏನೇ ಹೇಳಿ ಸಾರ್, ಈ ದೇಶಾನ ಪೊಲಿಟಿಷಿಯನ್ಸು, ಬ್ಯೂರೋಕ್ರೇಟ್ಸ್ ಸೇರಿ ಹರಿದು ಹಂಚಿ ತಿಂದು ಬಿಟ್ರು. ರೈತರು, ಬಡವರು ಬೀದಿ ಪಾಲಾಗಿ ಬಿಟ್ರು. ಬುದ್ಧಿವಂತರನ್ನು, ಪ್ರಾಮಾಣಿಕರನ್ನು ಬದುಕನ್ನು ಹಾಳು ಮಾಡಿಬಿಡ್ರು. ಸಾರಾಯಿ ಬಡವರ ಲಿವರ್‌ಗಳನ್ನು ಸುಡ್ತಾ ಇದೆ. ಅವನ್ನು ಶ್ರೀಮಂತರು, ರಾಜಕಾರಣಿಗಳು ನಂಚಿಕೊಂಡು ತಿನ್ತಾ ಇದ್ದಾರೆ. ಎಲ್ಲರಿಗೂ ದುಡ್ಡು ಬೇಕು. ಪವರ್ ಬೇಕು ಓಹ್. "ಪ್ರೋಫೆಸರ್ ಭಾವುಕರಾಗುತ್ತಿದ್ದರು. ಡಾಕ್ಟರು ಬಂದು ಮಾತನಾಡಬಾರದೆಂದರು. ನಾನು ಅಲ್ಲಿಂದ ಹೊರಬಿದ್ದೆ"[೧೭] ಸಿ.ಜಿ.ಕೆಯವರು ತೀರಾ ಸರಳವಾದ ಭಾಷಾ ನುಡಿಯಲ್ಲೇ ರಾಜಕಾರಣಿಗೆ ಹೇಳುತ್ತಾ ಹೋಗುತ್ತಾ, ಇಂದಿನ ಪ್ರಜಾಪ್ರಭುತ್ವವನ್ನು ಹಾಳು ಮಾಡುತ್ತಿರುವುದು ರಾಜಕಾರಣಿಗಳು ಎಂದು ದೂರುತ್ತಾರೆ. ದೇಶವನ್ನು, ರಾಜ್ಯವನ್ನು ಅಧಿಕಾರದ ಆಸೆಯಿಂದ ಒಡೆದು ಆಳುವ ನೀತಿಯನ್ನು ಅನುಸರಿಸುತ್ತಿದ್ದಾರೆ. ಇಡೀ ದೇಶವನ್ನು ಮಾರುತ್ತಿದ್ದಾರೆ ಎಂದು ಸಿ.ಜಿ.ಕೆಯವರು ತನ್ನ ಭಾಷಾಶೈಲಿಯಲ್ಲಿ

ಹೇಳುತ್ತಾರೆ. ಹಂದ್ರಾಳರು ಅಹಿಂಸೆಯ ಹಿಂದೆ ತುಂಬಿಕೊಂಡ ಹಿಂಸೆ ಹಾಗೂ ನಗುವಿನ ಹಿಂದೆ ಬಚ್ಚಿಟ್ಟುಕೊಂಡ ಕ್ರೌರ್ಯವನ್ನು ಬಹಳ ಸರಳ ಭಾಷೆಯಲ್ಲಿ ಯಥಾವತ್ತಾಗಿ ಚಿತ್ರಿಸಿದ್ದಾರೆ. ಹಂದ್ರಾಳರು ತಮ್ಮ ವಿಭಿನ್ನ ವಿಭಿನ್ನ ಕಥೆಗಳಲ್ಲಿ ಭಾಷಾ ಚೆಲುವು ಅದ್ಭುತವಾಗಿದೆ. ಓದುಗನ ಮನಸ್ಸನ್ನು ಒಂದೇ ಕಡೆ ನಿಲ್ಲಿಸುವ ಪ್ರಯತ್ನವನ್ನು ಮಾಡಿದ್ದಾರೆ.

ಹಂದ್ರಾಳರ ಮತ್ತೊಂದು ಸರಳ ಭಾಷೆಯ ಕತೆಗಳಲ್ಲಿ 'ಅಂತರ್ಮುಖಿ' ಕತೆಯು ತಿರುಳನ್ನು ತಿಳಿದವರಿಗೆಲ್ಲಾ ತುಂಬಾ ಅರ್ಥವುಳ್ಳದ್ದು. ಆದರ್ಶ, ನೋವು, ಜೈಲು, ಅಧಿಕಾರದ ದಾಹ, ಅಮಲು, ಅಸಹ್ಯ ಅಹಂಕಾರ, ಅಸಡ್ಡೆಗಳು, ಸಾತ್ವಿಕ ಕ್ರೋಧ, ಆಲೋಚನೆಗಳ ಸಮ್ಮಿಳನವು ಈ ಕತೆಯಲ್ಲಿ ವ್ಯಕ್ತವಾಗಿದೆ. ಕತೆಯಲ್ಲಿ ಬರುವ ನಾಯಕ ನಿರಾಸೆಯ ಮಾತುಗಳನ್ನಾಡುತ್ತಾನೆ.

"ನನ್ನನ್ನು ಕಂಡ ತಕ್ಷಣ ನಿನ್ನ ಮುಖ ಹೇಗೆ ನಾಚಿಕೆಯಿಂದ ಮುದುಡುತ್ತದೆ ಎಂಬುದನ್ನು ನೋಡಬಹುದಿತ್ತು. ಆದರೆ ನಿನ್ನನ್ನು ಕಾಣಬೇಕೆಂಬ ಕಾಯುವಿಕೆಯಲ್ಲಿ ಇರುವಂತಹ ತೃಪ್ತಿ. ಆತುರ, ಚಡಪಡಿಕೆ ನಿನ್ನನ್ನು ಕಂಡ ತಕ್ಷಣ ಉಳಿಯಲಾರದೇನೋ ಎನ್ನುವ ಮಾನಸಿಕ ಚಪಲತೆ ಗೊಂದಲ ಎಂದರೂ ಸರಿಯೇ ನನ್ನಲ್ಲಿ ಸಂಚಯವಾಗುತ್ತಿರುವುದು ನನ್ನಲ್ಲಿ ನಾನೇ ಇಲ್ಲವಾಗುತ್ತಿರುವಂತಹ ಅಥವಾ ಕನ್‌ಫ್ಯೂಸ್ ಆಗುತ್ತಿರುವಂತಹ ಬೆಳವಣಿಗೆಯೆಂದು ನನಗೀಗಾಗಲೇ ಫ್ಲಾಶ್ ಆಗಿದೆ. ಹೌದಲ್ಲವೇ? ತೃಪ್ತಿಯ ಹಿಂದೆ ಅತೃಪ್ತಿಯ ನೆರಳು ಸದಾ ಕಾಡುತ್ತಿರುತ್ತದೆ. ಯಾವುದೇ ಕ್ರಾಂತಿಯ ನಂತರ, ಬದಲಾವಣೆಯ ನಂತರ, ಸಾಧನೆಯ ನಂತರ, ಸಂಶೋಧನೆಯ ನಂತರ ಸಿಗುವುದಾದರೂ ಏನು? ಸಂಭೋಗದ ನಂತರ, ಮುಪ್ಪಿ ಮೈಥುನದ ನಂತರ, ಊಟದ ನಂತರ ಸಿಗುವುದು ತೃಪ್ತಿಯೇ? ಅಂತಹ ತೃಪ್ತಿಯ ಬೆನ್ನಲ್ಲಿಯೇ ನಿರಾಸಕ್ತಿಯ ಅವಸ್ಥೆ ಆವರಿಸಿಕೊಳ್ಳುವುದು ಮಾನವ ಜನಾಂಗದಲ್ಲಿ ವ್ಯಕ್ತವಾಗುವ ಒಂದು ಕಾಂಪ್ರೆಹೆನ್ಸಿವ್ ಫ್ಯಾಕ್ಟ್. ಆದ್ದರಿಂದಲೇ ಮಾನವ ಸದಾ ಅತೃಪ್ತ; ಜೊತೆಗೆ ಕ್ರಿಯೇಟಿವ್ ಆಗಿರುವುದು ಕೂಡ.

ಬೆಳಿಗ್ಗೆ ಫ್ಯಾಕ್ಟರಿಗೆ ಹೋಗಿ ನಿರ್ದಿಷ್ಟ ಉದ್ದೇಶವಿಲ್ಲದವನಂತೆ ಆ ಯಂತ್ರಗಳೊಂದಿಗೆ ನಾನೊಂದು ಮೂಕ ಯಂತ್ರವಾಗಿ ಖಿನ್ನ ಮನಸ್ಕನಾಗಿ ಫ್ಯಾಕ್ಟರಿಯಿಂದ ವಾಪಸ್ಸು ಬಂದ ನಂತರ ನಾನೆಲ್ಲೂ ಹೊರಹೋಗುವುದಿಲ್ಲ. ರಾಜಧಾನಿಯ ಮುಖ್ಯರಸ್ತೆಗಳ ನಿಯಾನ್ ದೀಪಗಳ ಬೆಳಕಿನಲ್ಲಿ ಕನಸುಗಳನ್ನರಸುತ್ತಾ ಅಲೆದಾಡಿದ ದಿನಗಳ ನೆನಪೇ ಮಾಸಿಹೋಗುತ್ತಿದೆ. ಕಣ್ಣ ಕಡಲಿನಲ್ಲಿ ಚಂದ್ರ ನಕ್ಷತ್ರಗಳನ್ನು ಸೆರೆಹಿಡಿಯುವ ಕೆಲಸವನ್ನು ತುಂಬಾ ಹಿಂದೆಯೇ ಬಿಟ್ಟು ಬಿಟ್ಟಿದ್ದೇನೆ."[೧೮] ಈ ಕಥೆಯಲ್ಲಿ ವೈರಾಗ್ಯದ ಭಾಷೆಯನ್ನು ನೋಡಬಹುದು. ಜೀವನದಲ್ಲಿ ಎಲ್ಲವನ್ನೂ ಮಾಡಿ ಬಿಟ್ಟಿದ್ದೇನೆ. ಈ ಸಮಾಜದಲ್ಲಿ ಅವನಿಗೆ ನಿಯಂತ್ರಿಸುತ್ತಿರುವುದು ಹಸಿವು, ಕಾಮ, ಸೆಳೆತ, ಧರ್ಮ, ಆತೃಪ್ತಿ ಮುಂತಾದ ಆಮೂರ್ತ ರೂಪಗಳೇ ಹೆಚ್ಚಾಗಿವೆ. ಅಮ್ಮನನ್ನು ಕಳೆದುಕೊಂಡು, ತಂಗಿಗೆ ಮದುವೆಯಾಗದೆ ಆತ್ಮಹತ್ಯೆಯನ್ನು ಮಾಡಿಕೊಳ್ಳುತ್ತಾಳೆ. ಇದೆಲ್ಲಾ ನನ್ನಿಂದಲೇ ಆಗಿಹೋಗಿದೆ. ಅವನ ಮನದಲ್ಲಿ ಅರಿಸ್ಟಾಟಲ್, ಮಾರ್ಕ್ಸ್, ಲೋಹಿಯಾ ವಿಚಾರಧಾರೆಗಳು ಹಾಗೂ ಸಿದ್ಧಾಂತಗಳು ಅವನ ಮನದ ಪದರಿನಲ್ಲಿ ಕೆಟ್ಟ ಟೇಪ್‌ರಿಕಾರ್ಡ್‌ನ ಕ್ಯಾಸೆಟ್‌ನಂತೆ ಸುರುಳಿಯಾಗಿ ಬಿಟ್ಟಿವೆ.

ಆದರ್ಶ ಜೀವನಕ್ಕಾಗಿ ತನ್ನೊಡನೆ ಜೈಲಿನಲ್ಲಿದ್ದ ನಾಯಕನ ಸ್ನೇಹಿತ, ಹೊರ ಬಂದ ನಂತರ ಬದುಕಿನೊಡನೆ ರಾಜಿ ಮಾಡಿಕೊಂಡು ಅಧಿಕಾರ ಪಡೆದು ಸರಕಾರ ನಡೆಸತೊಡಗುತ್ತಾನೆ. ಆದರ ಮತ್ತೆ ಜೈಲು ಸೇರಿದ ಕಥಾನಾಯಕ ಅವನಿಗೆ ಪತ್ರ ಬರೆಯುತ್ತಾನೆ. ಈಗ ನಿನ್ನ ವಿಷಯಕ್ಕೆ ಬರುತ್ತೇನೆ ನಿನ್ನಲ್ಲಿಗೆ ಬರಬಾರದೆಂಬ ತೀರ್ಮಾನಿಸಿದ್ದೇನೆ. ಬರುವೆಯಾದರೆ ನೀನೇ ಒಮ್ಮೆ ಈ ಕತ್ತಲೆಕೋಣೆಗೆ ಬಾ, ನಾನು ಆತ್ಮಹತ್ಯೆಯನ್ನು ಇಷ್ಟರಲ್ಲೇ ಮಾಡಿಕೊಳ್ಳಬಹುದು. ಅದಕ್ಕೆ ಮುಂಚೆ ಒಂದೇ ಒಂದು ಸಾರಿ ನೀನು ಮೋಡುಬೀಡಿಯನ್ನು ಸೇದುವುನ್ನು ಆ ಮೋಟು ಬೀಡಿಯ ಹೊಗೆಯಲ್ಲಿ ದೇವತೆಗಳು ಪ್ರತ್ಯಕ್ಷವಾಗುವುದನ್ನು ನಾನು ನೋಡಬೇಕು. ಅದಕ್ಕಿಂತಲೂ ಹೆಚ್ಚಾಗಿ ನಿನ್ನ ಮುಖದ ಮೇಲೆ ನಾನು . . . ಎಂದು ಕತೆಯು ಮುಗಿಯುತ್ತದೆ. ಈ ಕತೆಯಲ್ಲಿ ಮೌನದ ಭಾಷೆಯಲ್ಲಿ ಸಂಕಟದಿಂದ ಈ ಕತೆಯು ಕಾಣದ ಕಂಬನಿ ಸುರಿಸುತ್ತವೆ. ಬಡತನದಿಂದ ಬೇಸತ್ತು, ಏನೂ ಮಾಡಲಿಕ್ಕಾಗದೆ ಕೊನೆಗೆ ಸಾವಿನ ದಾರಿಯನ್ನು ನೋಡುವ ಪ್ರಸಂಗ ಬರುತ್ತದೆ. ಹಂದ್ರಾಳರ ಕತೆಗಳಲ್ಲಿ ಒಂದಕ್ಕೊಂದು ವಿಭಿನ್ನತೆಗಳಿರುವುದು ಕಾಣಬಹುದು.ಇಡೀ ಸಮಾಜದಲ್ಲಿ ಜನರು ಪಡುತ್ತಿರುವ ಕಷ್ಟಗಳನ್ನು ತಮ್ಮ ಕತೆಗಳಿಗೆ ನೇರವಾಗಿ ತರುತ್ತಾರೆ.

'ಛಿದ್ರ' ಎಂಬ ಕಥೆಯಲ್ಲಿ ಹೆಣ್ಣಿನ ಜೀವನ ವೃತ್ತಾಂತ ಸರಳಭಾಷೆಯಲ್ಲಿ ವ್ಯಕ್ತವಾಗಿದೆ. ರಂಜಿತ, ರಶ್ಮಿಯ ಬದುಕು ಯಾವ ರೀತಿ ಕಾಮುಕರ ಕೈಯಲ್ಲಿ ಸಿಕ್ಕಿ ನಲುಗಿಹೋಗುತ್ತದೆ. ಆಕೆಯ ಬಡತನ ಹಾಗೂ ತುತ್ತು ಅನ್ನಕ್ಕಾಗಿ ಪರಿತಪಿಸುವ ಕಥೆಯಾಗಿದೆ. ಗಂಡಸರ ಕಾಮುಕರ ಕಣ್ಣಿಗೆ ತುತ್ತಾಗಿ ಅವಳು ತನ್ನನ್ನು ತಾನೇ ಅರ್ಪಿಸಿಕೊಳ್ಳುತ್ತಾಳೆ. ಹಂದ್ರಾಳರು ಈ ಕತೆಯಲ್ಲಿ ರಂಜಿತರಶ್ಮಿಯು ಸಿನಿಮಾಗಳಲ್ಲಿ ನಟಿಯಾಗಲು ನಿರ್ದೇಶಕರ, ನಿರ್ಮಾಪಕರ ಕೈಗೆ ತುತ್ತಾಗುತ್ತಾಳೆ. ಸಿನಿಮಾದ ಆಸೆ ಗಗನಕ್ಕೇರುತ್ತದೆ.

"ಯಾರು ಬೇಕಿತ್ತು?

ನೀವೇ ಸಾರ್"ಮೃದುವಾಗಿತ್ತು ಸ್ವರ

"ನಿಮ್ಮ ಪರಿಚಯ ನನಗಾಗಲಿಲ್ಲ" ಫೋನಿನಲ್ಲಿ ಎರಡು ಕಾಫಿ ಹೇಳಿದ್ದೆ.

"ನನ್ನ ಹೆಸರು ಸುಂದರಿ ಅಂತ ಸಾರ್. ನನ್ನ ಊರು ಕೊಟ್ಟಾಯಂ ಹತ್ತಿರ ಒಂದು ಊರು, ತುಂಬಾ ಕಷ್ಟದಲ್ಲಿದ್ದೇನೆ. ನನಗಿರುವ ಆಸ್ತಿಯೆಂದರೆ ಈ ಸೌಂದರ್ಯವೊಂದೆ, ಮೆಟ್ರಿಕ್ ಓದಿದ್ದೇನೆ. ಒಂದಿಷ್ಟು ಡ್ಯಾನ್ಸ್ ಕಲಿತಿದ್ದೇನೆ. ನೀವು ಹೊಸ ಸಿನಿಮಾವೊಂದಕ್ಕೆ ಏರ್ಪಾಡು ಮಾಡುತ್ತಿರುವಿರಂತೆ. ನನಗೊಂದು ಛಾನ್ಸ್ ಕೊಡಿಸುವಿರಾದರೆ ಕಷ್ಟದಲ್ಲಿರುವ ನನಗೆ ಸಹಾಯ ಮಾಡಿದಂತಾಗುತ್ತದೆ".

ಅವಳ ಮಾತುಗಳಲ್ಲಿ ನೋವು, ನುಸುಳಿದ್ದರಲ್ಲಿ ಸಂಶಯವಿರಲಿಲ್ಲವಾದರೂ ಅವಳನ್ನು ನಂಬುವಲ್ಲಿ ನನಗೊಂದಿಷ್ಟು ಕಷ್ಟವೇ ಆಯಿತು.

"ನೋಡಿ ನಾನು ನಿರ್ದೇಶಕನೂ ಅಲ್ಲ, ನಿರ್ಮಾಪಕನೂ ಅಲ್ಲ, ನಾನೊಬ್ಬ ಸಾಹಿತಿ . . . ನಾನೇನು ಸಹಾಯ ಮಾಡಬಲ್ಲೆ . . . ಎಂದೆ.

"ಹಾಗೆನ್ನಬೇಡಿ ಸಾರ್, ನಿಮ್ಮ ಮಾತು ನಡೆಯುತ್ತದಂತೆ, ದಯವಿಟ್ಟು ಇಲ್ಲ ಅನ್ನಬೇಡಿ, ನನ್ನ ಬದುಕಿನ ಪ್ರಶ್ನೆ ಅನ್ನದ ಪ್ರಶ್ನೆ" ನನ್ನ ಕಾಲನ್ನು ಹಿಡಿದು ಬೇಡಲು ಮುಂದಾದಳು. ಇದೇ ಸಮಯಕ್ಕೆ

ನಿರ್ದೇಶಕ ರಾಜು ನನ್ನ ರೂಮಿಗೆ ಬಂದರು. ಸುಂದರಿಯನ್ನು ಕ್ಷಣಕಾಲ ಎವೆಯಿಕ್ಕದೆ ನೋಡಿದರು. ಅವರು ತಮ್ಮ ಸಿನಿಮಾಕ್ಕೆ ಹೊಸ ಡ್ಯಾನ್ಸರ್ ಒಬ್ಬಳ ಶೋಧನೆಯಲ್ಲಿ ತೊಡಗಿದ್ದರು. ಈ ಅವಕಾಶವನ್ನು ಥಕ್ಕನೆ ಉಪಯೋಗಿಸಿಕೊಂಡಿದೆ."[೧೯] ತನ್ನ ಹೊಟ್ಟೆಪಾಡಿಗಾಗಿ ಸಿನಿಮಾದಲ್ಲಿ ಯಾವುದಾದರೂ ಛಾನ್ಸ್ ಸಿಗಬಹುದು. ಹೆಚ್ಚು ಹೆಚ್ಚು ಹಣ ಗಳಿಸಬಹುದೆಂದು ತಿಳಿದು ಸಿನಿಮಾಕ್ಕೆ ಬರುತ್ತಾಳೆ. ರಾಜುರವರ ಚಿತ್ರದಲ್ಲಿ ಅವಳಿಗೆ ಡ್ಯಾನ್ಸರ್ ಪಾತ್ರವು ದೊರಕುತ್ತದೆ. ಆ ಚಿತ್ರದಲ್ಲಿ ಅವಳು ಮೈ ಪ್ರದರ್ಶನ ಮಾಡಬೇಕಿತ್ತು. ಅವಳಿಗೆ ಮೊದಲ ಬಾರಿಗೆ ಹತ್ತು ಸಾವಿರ ರೂ ಸಂಭಾವನೆ ದೊರಕಿತ್ತು. ಮುಂದಿನ ಸಿನಿಮಾಗಳಲ್ಲಿ ಅವಕಾಶ ಸಿಕ್ಕಿತ್ತು. ರಂಜಿತಾರಶ್ಮಿಯು ಮೊದಲು ಚಿತ್ರರಂಗಕ್ಕೆ ಪ್ರವೇಶಕ್ಕೂ ಮುಂಚೆ 'ಟ್ರಯಲ್' ಎಂದು ಸುಂದರಿಯನ್ನು ಕುಣಿಸಲಾಯಿತು.

"ನಾನು ನನ್ನ ಕೊಠಡಿಗೆ ಹಿಂತಿರುಗಿದ್ದೆ. ಸುಂದರಿಯ ಕತೆ ಅಂದು ರಾತ್ರಿ ಮುಗಿಯುವುದರಲ್ಲಿತ್ತು. ಅವಳಿಗೂ ಕುಡಿಸಿದ್ದರು. ಅವಳೂ ತುಂಬಾ ಮಾತನಾಡತೊಡಗಿದ್ದಳು. ರಾಜು ಬಂದು ನನ್ನ ಕಿವಿಯಲ್ಲಿ ಉಸುರಿದರು 'ನೀವು ಒಂದು ಕೈ ನೋಡುವುದಾದರೆ ನೋಡಿ, ತುಂಬಾ ಫ್ರೆಶ್ ಆಗಿದೆ. ಇನ್ನು ಹದಿನೈದು ದಿನ ನಮಗೊಳ್ಳೆಯ ಊಟ. . . ಓ' ಸಾರಿ, ನಿಮ್ಮ ಸಂಬಂಧಿ ಎಂದಿರಲ್ಲ, ಕ್ಷಮಿಸಿ, ನಮ್ಮ ಬಣ್ಣದ ಬದುಕಿನಲ್ಲಿ ಇವೆಲ್ಲ ಮಾಮೂಲಿ ಅಲ್ಲವ' ಎಂದು ನಾನು ಮೌನಿಯಾಗಿದ್ದೆ. ಆನಂತರ ಸುಂದರಿಯ ಕೊಠಡಿಯ ಲೈಟುಗಳು ಆರಿ ಹೋಗಿದ್ದವು. ಆ ಕತ್ತಲೆಯಲ್ಲಿ ರಾಜು ಹಾಗೂ ನಾಗರಾಜು ಇಬ್ಬರೂ ಸುಂದರಿಯಲ್ಲಿ ಕರಗಿ ಹೋಗಿದ್ದರು. ನಾನಿನ್ನೂ ಬರೆಯುತ್ತಿದ್ದೆ. ಭಾವುಕನಾಗಿಯೇ ಇದ್ದೆ. ಸುಮಾರು ಒಂದು ಗಂಟೆಯಾಗಿರಬೇಕು. ನನ್ನ ಕೊಠಡಿಯ ಬಾಗಿಲು ತಟ್ಟಿದ ಸದ್ದು, ಬಾಗಿಲು ತೆರೆದೆ. ಸುಂದರಿ ನಿಂತಿದ್ದಳು. ಅವಳ ಕೆದರಿದ ಕೂದಲು, ಅಸ್ತವ್ಯಸ್ತ ಉಡುಪು, ಶುಷ್ಕ ನಗು. . . . ಎಲ್ಲವನ್ನೂ ತಿಳಿಸುತ್ತಿತ್ತು. ಅವಳ ಕುಡಿತದ ಅಮಲು ಇಳಿದುಹೋಗಿತ್ತು.

"ನಿಮ್ಮಲ್ಲಿ ಹೋಗುವಂತೆ ಹೇಳಿದರು ಅಣ್ಣ, ಅವರಿಬ್ಬರೂ ನನ್ನನ್ನು ಚೆನ್ನಾಗಿ ಉಪಯೋಗಿಸಿಕೊಂಡರು. ನೀವೇನಾದರೂ ಮಾಡಿಕೊಳ್ಳಿ, ನನಗೆ ಮೋಸ ಮಾತ್ರ ಮಾಡ್ಬೇಡಿ ಅಣ್ಣ" ಎಂದು ಕಾಲಿಗೆ ಎರಗಿದ್ದಳು. ಅವಳು ರೋಧಿಸುತ್ತಾ "ಅಣ್ಣ" ಎಂದ ಧ್ವನಿ ನನ್ನ ಹೃದಯ ಮನಸ್ಸುಗಳಲ್ಲಿ ಮಾರ್ದನಿಸಿತ್ತು. ಹಂದ್ರಾಳಕ್ಕೆ ಹೋಗಿಬಂದದ್ದು ಇನ್ನೂ ಹಸಿಯಾಗಿದ್ದರಿಂದ ಆ ಧ್ವನಿ ಪಕ್ಕನೆ ನೆನಪಾಯಿತು"[೨೦] ರಂಜಿತರಶ್ಮಿಯ ಮೈಯಲ್ಲಿದ್ದ ಶಕ್ತಿ, ಮಾಂಸ, ಸೌಂದರ್ಯ, ಕಾಮ ಎಲ್ಲವನ್ನೂ ಮದ್ರಾಸಿನ ಸಿನಿಮಾ ಜಗತ್ತು ಅನುಭವಿಸಿದ ಮೇಲೆ ಆಕೆ ಕೊಟ್ಟಾಯಂಗೆ ಎಸೆಯಲ್ಪಡುತ್ತಾಳೆ. ಅಲ್ಲಿ ದಿನನಿತ್ಯದ ತನ್ನ ಹೊಟ್ಟೆಪಾಡಿಗಾಗಿ ಬರುವ ಗಿರಾಕಿಗಳೂ ಇಲ್ಲದೆ ಕಾಯುವ ಹಂತವನ್ನು ಆಕೆ ಮುಟ್ಟಿದ್ದಾಳೆ. ಹೆಣ್ಣು ತನ್ನ ಜೀವನಕ್ಕಾಗಿ ತನ್ನ ಸರ್ವಸ್ವವನ್ನೇ ಮಾರಿಕೊಳ್ಳುತ್ತಾಳೆ. ಪುರುಷ ಎಂಬ ಹದ್ದುಗಳು ಹೆಣ್ಣನ್ನು ಕಿತ್ತು ತಿನ್ನುವ ಪ್ರಸಂಗಗಳನ್ನು ಹಂದ್ರಾಳರ ಕಥೆಗಳಲ್ಲಿ ನೋಡಬಹುದು. ಹಾಗೆಯೇ ಸಾಮಾಜಿಕ ಹೊಣೆಗಾರಿಕೆ ದಟ್ಟವಾಗಿ ಕಂಡರೂ, ಕಲೆಗಾರಿಕೆ ಎಂದೂ ದುರ್ಬಲವಾಗಿಲ್ಲ. ಮನುಷ್ಯನ ಭಯಾನಕ ವೇದನೆಯ ವಿವರಗಳನ್ನು

ಮಂಡಿಸುತ್ತಾ ಹೋಗುವ ಹಂದ್ರಾಳರು ತಮ್ಮ ಸಹಜ ವೈನೋದಿಕ ಪ್ರಜ್ಞೆಯನ್ನು ಬಿಟ್ಟುಕೊಡದೆ ಓದುಗನ ಹೃದಯ ಮತ್ತು ಮನಸ್ಸನ್ನು ತಟ್ಟುತ್ತಾರೆ. ಸಾಮಾಜಿಕ ಕಳಕಳಿ ಮತ್ತು ಪ್ರಶ್ನಾತೀತ ಮಾನವೀಯತೆಯ ಮುಖಾಂತರ ಭಾಷೆಗಳ ಜೀವಾಳವಾಗಿದೆ. ಕಡೆಗಣಿಸಲ್ಪಟ್ಟ ದುರ್ಬಲ ಗೊಂಡಿರುವ ಇವಳು ಹಂದ್ರಾಳರ ಕತೆಯಲ್ಲಿ ಪರವಾದ ನಿಲುವನ್ನು ನಿಸ್ಸಂಕೋಚವಾಗಿ ತಾಳುವುದೇ ಇವಳ ವ್ಯಕ್ತಿತ್ವವಾಗಿದೆ. ನಂತರ ಸಿನಿಮಾಗಳಲ್ಲಿ ಅವಳ ಕನಸು ನುಚ್ಚು ನೂರಾಗಿತ್ತು. ಚಿತ್ರರಂಗದಲ್ಲಿ ಬೇಡಿಕೆ ಕಡಿಮೆಯಾಗಿತ್ತು. ಮತ್ತೆ ಅವಳ ಜೀವನಕ್ಕಾಗಿ ವೇಶ್ಯೆವಾಟಿಕೆಗೆ ಇಳಿದಿದ್ದಳು.

“ಪರಶುರಾಮ ಹೊರಗೆ ಕಾಯುತ್ತಿದ್ದ, ಸೈಕಲ್‌ನಲ್ಲಿ ಕುಳಿತೆ. ಮತ್ತೆ ಕೊಟ್ಟಾಯಂಗೆ ಅವನು ಸೈಕಲ್ ತುಳಿಯಲಾರಂಭಿಸಿದ. ನಾನು ಮೌನವಾಗಿದ್ದೆ. ಪರಶುರಾಮನೆ ಮೌನ ಮುರಿದು ಮಾತನಾಡಿದ. “ಸುಂದರಿ ತುಂಬಾ ಒಳ್ಳೆಯವಳಾಗಿದ್ದಳು ಸಾರ್. ಸಿನಿಮಾದಲ್ಲಿ ಮಾಡಿ ಊರಿಗೆ ಬಂದ ನಂತರ ಈ ಕೆಲಸಕ್ಕೆ ಇಳಿದಳು. ಸಿನಿಮಾದೋರು ತುಂಬಾ ಅಲ್ಕಾ ಜನ ಅವಳನ್ನು ಕೆಡಿಸ್ಬಿಟ್ರಂತೆ. ಅವಳು ಸಿನಿಮಾಕ್ಕೆ ಹೋಗ್ದೆ ಇದ್ದಿದ್ರೆ ಯಾರಾದ್ರೂ ಮದ್ವೆ ಆಗಿರೋರು. ಪಾಪದ ಹುಡುಗಿ ಕಡೆಗೆ ಬದುಕಿಗಾಗಿ ಈ ದಂಧೆ ಹಿಡಿದ್ಲು. ಮೊದಲು ಪರ್ವಾ ಇರ್ಲಿಲ್ಲ. ಸುಮಾರು ಜನ ಲಾರಿ ಡ್ರೈವರ್‌ಗಳು ಸುಂದರಿಯ ಹೆಂಚಿನ ಮನೆಯಲ್ಲಿ ನಕ್ಷತ್ರಗಳನ್ನು ಎಣಿಸಿದ್ದಾರೆ. ನಾನೂ ಒಂದು ರಾತ್ರಿ ಸುಂದರಿಯೊಡನೆ ಕಳೆದಿದ್ದೇನೆಂದರೆ ನಿಮಗೆ ಆಶ್ಚರ್ಯವಗಬಹುದು. ಈಗ ಈ ದಂಧೆಯಲ್ಲಿ ತುಂಬಾ ಪೈಪೋಟಿ ಸಾರ್. ಸರಿ ಸಾರ್, ನೀವ್ಯಾಕೆ ಇಷ್ಟು ಬೇಗ ವಾಪಸ್ಸಾದಿರಿ? ಸುಂದರಿ ಇಂದು ಇರುವಂತೆ ಬಲವಂತ ಪಡಿಸುತ್ತಿದ್ದಳು. ಅವಳ ಕೈಲಿ ವಿಸ್ಕಿ ಕುಡಿಯೋದೆ ಒಂದು ಮಜ. . . .” ಅವನು ನಕ್ಕ.

ನಾನು ಗಂಭೀರವಾಗಿ ನುಡಿದೆ. ‘ಅವಳು ನನಗೆ ತಂಗಿಯಾಗಬೇಕಾಗಿದ್ದವಳು. “ಅವನು ಬೆಚ್ಚಿ ಬಿದ್ದವನಂತೆ ಹಿಂತಿರುಗಿ ನನ್ನ ಕಡೆ ನೋಡಿದ್ದ. ಕೊಟ್ಟಾಯಂನ ವಿದ್ಯುತ್ ದೀಪಗಳು ಅನತಿ ದೂರದಲ್ಲಿ ಕಾಣುತ್ತಿದ್ದವು. ಆ ಕುಳಿರ್ಗಾಳಿಯಲ್ಲೂ ನಾನು ವಿಪರೀತ ಬೆವರುತ್ತಿದ್ದೆ”[೨೧] ಈ ಸರಳಭಾಷೆ ಹಾಗೂ ಬಡತನದ ಭಾಷೆಯು ಈ ಕಥೆಗಳಲ್ಲಿ ಹೆಣ್ಣಿನ ಮೇಲೆ ನಡೆಯುವ ದೌರ್ಜನ್ಯವನ್ನು, ಲೈಂಗಿಕ ಶೋಷಣೆ ಮುಂತಾದ ಅನ್ಯಾಯಗಳನ್ನು ವಿವಿಧ ದೃಷ್ಟಿಕೋನಗಳಿಂದ ಚಿತ್ರಿಸುವುದನ್ನು ಕಾಣಬಹುದು. ಹೆಣ್ಣಿನ ಮೇಲೆ ಹಂದ್ರಾಳಗಿರುವ ಗೌರವ ಮರ್ಯಾದೆಗಳು ಅವರ ಕತೆಗಳಲ್ಲಿ ವ್ಯಕ್ತವಾಗುತ್ತಾ ಹೋಗುತ್ತವೆ.

ಹಂದ್ರಾಳರ ಕತೆಗಳಲ್ಲಿ ‘ಇಣುಕದಿರಿ ಧ್ವನಿಗಳೇ ನಮ್ಮದೆಗಳಲ್ಲಿ’ ನೆನಪುಗಳನ್ನು ಮೆಲುಕು ಹಾಕುವಂತಹ ಕತೆಯಾಗಿದೆ. ಇದರಲ್ಲಿ ಹಂದ್ರಾಳರ ಸರಳ ಭಾಷಾ ಚೆಲುವು ಗಮನಾರ್ಹವಾದುದು. ಈ ಕತೆಯಲ್ಲಿ ಕಾವ್ಯಾತ್ಮಕ ಭಾಷೆ ಹಾಗೂ ಭಾವುಕ ಭಾಷೆಯು ಬಳಕೆಯಿರುವುದು ಕಾಣಬಹುದು. ಇದೊಂದು ಪತ್ರದ ಶೈಲಿಯಲ್ಲಿರುವ ಕಥೆಯಾಗಿದೆ. ಇದು ಮುಖ್ಯವಾಗಿ ನೆನಪಿನ ಅನಾವರಣವೇ ಆಗಿದೆ. ಒಂದು ಹೆಣ್ಣಿನ ನೆನಪುಗಳು ಭಾವನಾತ್ಮಕವಾಗಿ ಮೂಡಿಬಂದಿದೆ. ಅದಕ್ಕೆ ಬಂದಿರುವ ಶಕ್ತಿಯೆಂದರೆ ಹಂದ್ರಾಳರವರು ಬಳಸಿರುವ ಭಾಷೆ.

"ನಾನು ಕಣೋ ಕಥೆಗಾರ, ನನ್ನದ್ದು ಕನಸುಗಳ ಮಳೆ ಸುರಿಸಿ ಸದ್ದಿಲ್ಲದೆ ದೂರ ಸರಿದ ಪ್ರೀತಿಯ ಸರದಾರ. ನೆನಪಾಗಲಿಲ್ಲವೆ? ಗುರುತು ಬರಲಿಲ್ಲವೆ? ನನ್ನ ಕಣ್ಣುಗಳನ್ನು ಕಡಲಿಗೆ ಹೋಲಿಸಿದವನೆ, ನನ್ನ ಹೃದಯ ಬಡಿತದಲ್ಲಿ ಕಿನ್ನರ ಲೋಕದ ಸಂಗೀತ ಆಲಿಸಿದವನೆ. ನನ್ನ ತೊಡೆಯ ಮೇಲೆ ಮಲಗಿ ನನ್ನ ತಲೆಯೊಳಗೆ ಪ್ರೀತಿಯ ತಾಜ್‌ಮಹಲ್ ಕಟ್ಟಿದವನೆ; ನನ್ನದೆಯಲ್ಲಿ ಕಾಮನಬಿಲ್ಲುಗಳ ಮೂಡಿಸಲು ತಿಣುಕಿದವನೆ; ನನ್ನ ಭಾವನೆಗಳ ಸುಳಿಯಲ್ಲಿ ಸುರುಳಿಯಾಗಿ ನರಳಿದವನೆ; ಹೃದಯ, ಮನಸ್ಸು, ಪ್ರೀತಿ, ಪ್ರೇಮ ಮುಂತಾದ ಪರಿಕಲ್ಪನೆಗಳಿಗೆ ಅರ್ಥ ಹುಡುಕಲು ನನ್ನೊಂದಿಗೆ ಸೆಣೆಸಿದವನೆ. . . . ಮರೆಯಲುಂಟೆ ನೀನು ನನ್ನನ್ನು, ನಾನು ನಿನ್ನನ್ನು ಈ ಪತ್ರ ಬರೆಯುತ್ತಿರುವ ಉದ್ದೇಶ ನಿನ್ನನ್ನು ನೋಯಿಸಲೇನೂ ಅಲ್ಲ, ನೆನಪುಗಳಿಂದ ಅವಕ್ಕಾಗಿ ಅಳಬಹುದು ನೀನು. ಅಳುಬುರುಕ, ಭಾವಕ ಜೀವಿ ನೀನು, ಗೊತ್ತು ನನಗೆ, ಅತ್ತು ಬಿಡು ಮಗುವಿನಂತೆ ಬಿಕ್ಕಳಿಸಿ ಅತ್ತಾಗ ಹೃದಯ ಹಗುರವಾಗುತ್ತದೆಂಬ ಸತ್ಯ ಅರಿವಾಗಿದೆ ನನಗೆ. ನಾನು ನಿನ್ನ ಸಂಗಾತಿಯಾಗಲಾರದವಳಾಗಿದ್ದೆ. ನಿನ್ನ ದುರಂತ ಕಥೆಯೊಂದರ ನಾಯಕಿಯಾಗುವುದಕ್ಕೆ ಮಾತ್ರ ಲಾಯಕ್ಕಾಗಿದ್ದೆ. ನೀನು ಬರೆದ ದುರಂತ ಕತೆಗಳನ್ನು ನಾನು ತುಂಬಾ ಮೆಚ್ಚಿಕೊಳ್ಳುತ್ತಿದ್ದೆ. ನೀನೇ ಒಮ್ಮೆ ಹೇಳಿದ್ದೆ. "ಇಬ್ಬರು ಸೆಂಟಿಮೆಂಟಲ್ ಮೂರ್ಖರು ಒಟ್ಟಿಗೆ ಬದುಕು ನಡೆಸಲು ಸಾಧ್ಯವಾಗುವುದಿಲ್ಲ" ಎಂದು. ನಾವಿಬ್ಬರೂ ಮೂರ್ಖರೆಂಬ ಸತ್ಯ ಸಾಬೀತಾದಂತಾಯಿತು. ನನ್ನ ಮ್ಯಾನರಿಸಮ್‌ಗಳನ್ನು ನಿನ್ನ ಕಥೆಗಳಲ್ಲಿ ನಯವಾಗಿ ಉಪಯೋಗಿಸಿಕೊಂಡೆ. "ನೀನೆ ನನ್ನ ಸ್ಫೂರ್ತಿ ದೇವತೆ" ಎಂದು ನೀನು ಭಾವುಕನಾಗಿ ನುಡಿದಾಗ ನಾನು ನಂಬಿದೆ"[೨೨] ಪ್ರಿಯತಮನಿಗೆ ತನ್ನ ಪತ್ರದ ಮುಖಾಂತರ ತನ್ನ ತೊಳಲಾಟವನ್ನು ತಿಳಿಸುತ್ತಾ ಹೋಗುತ್ತಾಳೆ. ಹಂದ್ರಾಳರು ಕಾವ್ಯಾತ್ಮಕ ಭಾಷೆಯ ಮೂಲಕ ಈ ಕತೆಗೆ ಒಂದು ರೀತಿಯ ಪುಷ್ಟಿಯನ್ನು ನೀಡಿದ್ದಾರೆ. ಕತೆಯಲ್ಲಿ ನಾಯಕಿಯು ತನ್ನ ಪ್ರಿಯಕರನನ್ನು ನೆನೆದು ಅವನಿಗೆ ಪತ್ರವನ್ನು ಬರೆಯುತ್ತಾಳೆ. ಅವಳಿಗೂ ಮತ್ತು ಅವನಿಗೂ ಮದುವೆಯಾಗಿದ್ದರೂ, ಹಳೆಯ ನೆನಪುಗಳನ್ನು ಮೆಲುಕು ಹಾಕುವಂತಹದನ್ನು ನೋಡುವುದು. ಹೆಣ್ಣಿನ ಬದುಕು ಮೊಂಬತ್ತಿಯಂತೆ. ಹೆಣ್ಣು ತ್ಯಾಗದ ಪ್ರತೀಕವಾಗಿದ್ದಾಳೆ. ಹೆಣ್ಣು ದೇವತೆ, ವಂಚಕಿ, ಮಾಯಾವಿ, ತ್ಯಾಗಿ ಏನೆಲ್ಲಾ ರೂಪಾಂತರಗಳಲ್ಲೂ ಜೀವಂತವಾಗಿದ್ದಾಳೆ.

"ಕಾಮ ನಮಗೆ ಮುಖ್ಯವಾಗಿರಲಿಲ್ಲ. ಆದರೂ ಪ್ರೇಮದ ಹಿಂದೆ ಕಾಮ ನಯವಾಗಿ ಬಚ್ಚಿಟ್ಟುಕೊಂಡಿರುತ್ತದೆಂಬ ಬಲವಾದ ಗುಮಾನಿ. ಪ್ರೇಮ ಅಮೂರ್ತ ರೂಪ. ಕಾಮದ ರೂಪದಲ್ಲಿ ಅದು ಮೂರ್ತ. ಅವಸ್ಥೆಯನ್ನು ಪಡೆದುಕೊಳ್ಳುತ್ತದೆ. ಆದ್ದರಿಂದಲೇ ಏನೋ ನೀನು ಒಮ್ಮೊಮ್ಮೆ ನನ್ನ ತುಟಿಗಳನ್ನು ಕಚ್ಚಿಬಿಡುತ್ತಿದ್ದೆ. ಅದು ನನಗೆ ಇಷ್ಟವಾಗುತ್ತಿತ್ತು. ನಿನ್ನ ಸ್ಪರ್ಶ ಹಿತವಾಗುತ್ತಿತ್ತು. ಇದೆ ಕಾಮ ಮತ್ತು ಪ್ರೇಮದ ಸಂಕ್ರಮಣ ಸ್ಥಿತಿಯಿದ್ದಿರಬೇಕು. ಆ ಮಧುರ ನೆನಪುಗಳು ಈಗಲೂ ಹಚ್ಚ ಹಸುರಾಗಿವೆ. ಹೌದು, ನೆನಪುಗಳು ವಾಸ್ತವಕ್ಕಿಂತ ತುಂಬಾ ಅಪ್ಯಾಯಮಾನರಾಗಿರುತ್ತವೆ. ನೆನಪುಗಳನ್ನು ಕೆದಕಿದಾಗ ಒಂದು ರೀತಿಯ ಸಂಕೀರ್ಣವಾದ ಖುಷಿಯುಂಟಾಗುತ್ತದೆ. ಬಯಕೆಗಳನ್ನು ಈಡೇರಿಸಿಕೊಳ್ಳಬೇಕೆಂದಾಗ ಇರುವ ಆತುರ, ಉತ್ಸಾಹ ಮತ್ತು ಖುಷಿ ಬಯಕೆಗಳು ಈಡೇರಿದ ನಂತರ ಇರುವುದಿಲ್ಲ. ತೃಪ್ತಿಯ ಹಿಂದೆಯೇ ಅತೃಪ್ತಿಯ ನೆರಳು ಕಾಡುತ್ತಿರುತ್ತದೆ.

'ನೀನೇ ನನ್ನ ಸ್ಫೂರ್ತಿ ದೇವತೆ' ಎಂದು ಉಡಾಫೆ ಹೊಡೆಯುತ್ತಿದ್ದೆ. ನಿನ್ನ ಹೆಂಡತಿಯೆಂಬ ಪ್ರಾಣಿ ನಿನ್ನೊಂದಿಗೆ ಪ್ರೀತಿ ಮಾತುಗಳ ಮುತ್ತುಗಳನ್ನುದುರಿಸುತ್ತಿರಬಹುದು. ನಾನು ನನ್ನ ಗಂಡನಿಗೆ ಮಾಡಿದಂತೆ, ಅವಳು ಕೂಡ ಮದುವೆಗೆ ಮುಂಚೆ ಬೇರೊಬ್ಬನಿಗೆ ಮನಸ್ಸು ಕೊಟ್ಟಿದ್ದಿರಬಹುದು. . . . ನಾನು ನಿನಗೆ ಕೊಟ್ಟ ಹಾಗೆ. ಹೌದು, ಮನುಷ್ಯ ಹೆಚ್ಚು ಹೆಚ್ಚು ವಿಚಾರಶೀಲನಾದಂತೆ ತಣ್ಣಗಿನ ಕ್ರೌರ್ಯವನ್ನು ಬೆಳೆಸಿಕೊಂಡು ಬಿಡುತ್ತಾನೆ. . . . ಇನ್ನೊಬ್ಬರಿಗೆ ಅದರ ಸುಳಿವೂ ಕೂಡ ಕೊಡದಂತೆ. . . . ಕಥೆಗಾರನಾಗಿ ಇದೆಲ್ಲ ನಿನಗೆ ಗೊತ್ತಿರಲೇಬೇಕು. ಹನಿಮೂನ್‌ಗೆಂದು ಗೋವೆಗೆ ಹೋದಾಗ ಕಡಲತೀರದಲ್ಲಿ ಅಲೆಯುತ್ತಿರುವಾಗ ಎಷ್ಟು ಜಾಗ್ರತೆ ವಹಿಸಿದರೂ ನನಗರಿವಿಲ್ಲದೆ ನನ್ನ ಬಾಯಲ್ಲಿ ನೀನು ಸುಳಿದಿದ್ದೆ. ಕಡಲಿಗಿಳಿಯುವಂತೆ ನನ್ನ ಗಂಡ ಬಲವಂತಪಡಿಸಿದಾಗ, "ಪ್ಲೀಸ್ ದೇವು ಬೇಡ, ನನಗೆ ಸಮುದ್ರವೆಂದರೆ ಭಯ . . . ." ಎಂದಿದ್ದೆ. ಅವನು ಬೆರಗಾಗಿ ಸುತ್ತಲೂ ನೋಡಿ, 'ಯಾರೆ ಅವನು ದೇವು' ಎಂದು ಕೇಳಿದಾಗ ಅವನ ಎದಗೊರಗಿ . . . .ಅವನೆದೆಯ ಕೂದಲಲ್ಲಿ ಬೆರಳಾಡಿಸುತ್ತಾ "ಇನ್ನಾರು . . . . ನೀವೆ ನನ್ನ ದೇವರು . . . ನನ್ನ ಬದುಕಿಗೆ ಚೈತನ್ಯ ತುಂಬುವ, ಬೆಳಕು ಚೆಲ್ಲುವ ದೇವರು . . ." ಎಂದು ಸುಳ್ಳು ಹೇಳಿದ್ದೆ. ಅವನು ನಂಬಿದ"[೨೩] ಇದರಲ್ಲಿ ಹಳೆಯ ಪ್ರೀತಿಗೆ ಹೆಚ್ಚು ಮಾನ್ಯತೆಯನ್ನು ನೀಡಿದ್ದಾಳೆ. ಯಾವಾಗಲೂ ತನ್ನ ಪ್ರಿಯಕರನ ನೆನಪು ಕಾಡುತ್ತಿರುತ್ತದೆ. ಇದರಲ್ಲಿ ಭಾವುಕ ಭಾಷೆಯು ಕಾಣುತ್ತದೆ. ಹಾಗೂ ಕಾವ್ಯಾತ್ಮಕ ಭಾಷೆಯ ಚೆಲುವನ್ನು ನೋಡಬಹುದು.

ಹಂದ್ರಾಳರು ತಮ್ಮ ಪ್ರಾದೇಶಿಕ ಭಾಷೆಗಳಿಂದ ಕತೆಗಳನ್ನು ರಚಿಸುತ್ತಾ ಹೋಗುತ್ತಾರೆ. ಇವರ ಕತೆಗಳಲ್ಲಿ ನಾವು ತಿಳಿದದ್ದು ದರ್ಪದ ಭಾಷೆ, ಹಳ್ಳಿಗಾಡಿನ ಭಾಷೆ, ಬಡತನದ ಭಾಷೆ, ಹೆಣ್ಣಿನ ಭಾಷೆ, ಕಾವ್ಯಾತ್ಮಕವಾದ ಭಾಷೆ, ಭಾವನಾತ್ಮಕವಾದ ಭಾಷೆ, ದ್ವೇಷದ ಭಾಷೆಗಳನ್ನೆಲ್ಲಾ ತಿಳಿಯಲಾಗಿದೆ. ಒಂದು ಕತೆಯಿಂದ ಇನ್ನೊಂದು ಕತೆಯು ಭಿನ್ನವಾಗಿರುವುದನ್ನು ನೋಡಬಹುದು. ಇವರ ಕತೆಗಳಲ್ಲಿ ಕೆಳವರ್ಗದ ಜನರು ಮಾತಾಡುವಂತಹ ಭಾಷೆಗಳು ಹೊಲೆರು, ಮಾದಿಗರು ಮಾತನಾಡುವ ಭಾಷೆಗಳನ್ನು ಯಥಾವತ್ತಾಗಿ ತಮ್ಮ ಕತೆಗಳಲ್ಲಿ ಬಳಸಿದ್ದನ್ನು ನೋಡಬಹುದಾಗಿದೆ. ಒಂದು ಕಥೆಗೆ ವಸ್ತುವು ಎಷ್ಟು ಮುಖ್ಯವೋ, ಭಾಷೆಯು ಅಷ್ಟೆ ಮುಖ್ಯವಾಗುತ್ತದೆ. ಹಾಗೂ ಕತೆಗೆ ಒಂದು ರೀತಿಯ ಸೌಂದರ್ಯವನ್ನು ಸಹ ಕೊಡುತ್ತದೆ. ಅದೇ ಭಾಷೆಯ ಚೆಲುವು. ತೇಜಸ್ವಿಯವರ ಕಥೆಗಳಲ್ಲಿ ಮುಸ್ಲಿಂ ಪಾತ್ರಗಳು ಹೆಚ್ಚಾಗಿ ಬರುತ್ತದೆ. ಮುಸ್ಲಿಂರನ್ನು ಏಕವಚನದಲ್ಲಿ ಮಾತಾಡಿಸೋದು, ಮುಸ್ಲಿಂರು ಮಾತನಾಡುವ ಕನ್ನಡ ಭಾಷೆಯನ್ನು ಯಥಾವತ್ತಾಗಿ ಬಳಸೋದು, ಆದ್ದರಿಂದ ಕತೆಗಳಿಗೆ ನಿರಂತರತೆ ಬರುವುದರ ಜೊತೆಗೆ ಶಿಷ್ಟ ಭಾಷೆಯ ಒಳಗಡೆ ಒಂದು ಗ್ರಾಂಥಿಕವಾದಂತಹ ಭಾಷೆಯು ಹೆಚ್ಚು ಆಪ್ತವಾಗುತ್ತಾ ಹೋಗುತ್ತದೆ. ದೇವನೂರುರವರು ಬಳಸುವಂತಹ ಕುಸುಮಬಾಲೆ ಕನ್ನಡ ಅವರ ಕಥೆಗಳಲ್ಲಿ ಬರುವಂತಹ ಕನ್ನಡವು ಸಂಪೂರ್ಣವಾಗಿ ಆ ಭಾಗದಲ್ಲಿ ಬರುವಂತಹ ಭಾಷೆಯಾಗಿದ್ದು, ಅಂದರೆ ಮೈಸೂರು ಭಾಗದ ಕನ್ನಡ ದೇವನೂರುರವರ ಕಥೆಗಳಿಗೆ ಮೆರಗನ್ನು ನೀಡಿರುವುದನ್ನು ವಿಮರ್ಶಕರು ಗುರುತಿಸಿದ್ದಾರೆ. ಅದೇ ರೀತಿಯಲ್ಲಿ ಕೇಶವರೆಡ್ಡಿ ಹಂದ್ರಾಳರ ಕತೆಗಳನ್ನು ಗುರುತಿಸಬಹುದಾಗಿದೆ.

ಕರ್ನಾಟಕದಲ್ಲಿ ಕನ್ನಡ ಒಂದೇ ಭಾಷೆಯಾಗಿದ್ದರೂ ಕೂಡ ಉಪಭಾಷೆಗಳು ಸಾಕಷ್ಟಿವೆ. ಮಂಡ್ಯ ಕನ್ನಡವೇ ಬೇರೆ, ಪಾವಗಡ ಕನ್ನಡವೇ ಬೇರೆ, ಧಾರವಾಡದ ಕನ್ನಡವೇ ಬೇರೆ, ಈ ಭಾಷೆಗಳಿಂದಲೇ ಒಂದು ಪ್ರಾದೇಶಿಕವಾಗಿ ಒಬ್ಬ ಕವಿಯೂ, ಕತೆಗಾರನನ್ನು ಗುರುತಿಸಿ ಪ್ರಾಮುಖ್ಯತೆಯನ್ನು ಪಡೆದುಕೊಳ್ಳುತ್ತಾನೆ. ಬೇಂದ್ರೆಯವರ ಪದ್ಯಗಳನ್ನು ಅಥವಾ ಕುವೆಂಪುರವರ ಪದ್ಯಗಳನ್ನು ನೋಡಿಕೊಂಡರೆ ತುಂಬಾ ವಿಭಿನ್ನವಾದದ್ದು. ಒಂದೇ ಒಂದು ಸೂರ್ಯೋದಯವನ್ನು ಬೇಂದ್ರೆಯವರು ಹೇಳುವ ರೀತಿ, ವರ್ಣಿಸುವ ರೀತಿಯು ಬೇರೆಯಾಗಿದೆ. ಕುವೆಂಪುರವರು ಹೇಳುವಂತಹದೇ ಬೇರೆ. ಹಾಗಾಗಿ ಭಾಷೆ ಎನ್ನುವಂತಹದು ತುಂಬಾ ವಿಶಿಷ್ಟವಾಗಿ ನಮ್ಮ ಸಂವೇದನೆಗಳಲ್ಲಿ ಬಳಕೆ ಮಾಡಿಕೊಳ್ಳುತ್ತೇವೆ.

ಈ ಒಂದು ನಿಟ್ಟಿನಲ್ಲಿ ಕೇಶವರೆಡ್ಡಿ ಹಂದ್ರಾಳರು ಬಳಸಿರುವ ಪ್ರತಿಯೊಂದು ಕತೆಗಳಲ್ಲೂ ವಿಭಿನ್ನವಾದ ಭಾಷಾಶೈಲಿನ್ನು ಹಾಗೂ ಭಾಷಾ ಚೆಲುವನ್ನು ನೋಡಬಹುದು. ಅವರದೇ ಆದಂತಹ ಭಾಷಾಶೈಲಿಯಲ್ಲಿ ಅವರ ಕತೆಗಳು ನೇರ ಓದುಗನಿಗೆ ತಟ್ಟುವಂತೆ, ಮನ ಮೀಡಿಯುವಂತೆ ಕತೆಗಳಲ್ಲಿ ಭಾಷಾ ಬಳಕೆಯನ್ನು ನೋಡಬಹುದಾಗಿದೆ. ಅವರ ಕತೆಗಳಲ್ಲಿ ನೇರವಾಗಿ ಜನಗಳು ಮಾತಾಡುವಂತಹ ಭಾಷೆಗಳನ್ನು ಬಳಸುತ್ತಾರೆ. ಹಾಗೂ ಹಿಡಿದಿಟ್ಟುಕೊಳ್ಳುತ್ತಾರೆ. ಹಂದ್ರಾಳರದ್ದು ಜನಗಳ ಭಾಷೆ, ಜನಗಳ ಭಾಷೆಯನ್ನು ಕಥೆಯೊಳಗೆ ವಿಲೀನಗೊಳಿಸುತ್ತಾರೆ. ಅವರು ಹುಟ್ಟಿದ ಸ್ಥಳದಿಂದ ನಾನು ಬೆಳೆದ ಪರಿಸರದಿಂದ ಅವರ ಕಥೆಗಳು ಪ್ರಭಾವ ಬಿದ್ದರೆ, ನನ್ನ ಊರಿಗೆ ನ್ಯಾಯವನ್ನು ಕೊಟ್ಟಂತೆ ಆಗುತ್ತದೆ. ಒಂದು ಕತೆಯನ್ನು ಓದುಗನು ಓದಿದ ತಕ್ಷಣಕ್ಕೆ ಈ ಭಾಗದ ಕತೆಯೆಂದು ಗೊತ್ತಾಗುತ್ತದೆ.

ಕೇಶವರೆಡ್ಡಿ ಹಂದ್ರಾಳರ ಕತೆಗಳಲ್ಲಿ ತೆಲುಗಿನ ಪ್ರಭಾವವನ್ನು, ಕನ್ನಡದ ತುಳು ಪ್ರಭಾವವನ್ನು, ತುಮಕೂರು ಕನ್ನಡವನ್ನು ಹಾಗೂ ಬೆಂಗಳೂರು ಕನ್ನಡವನ್ನು ನೋಡಬಹುದು. ಮಧುಗಿರಿಯ ಬ್ಯಾಲ್ಯ ಎಂಬ ಊರು ಹಂದ್ರಾಳರ ಹತ್ತಿರ ಬರುತ್ತದೆ. ಹಂದ್ರಾಳದಿಂದ ಬ್ಯಾಲ್ಯಕ್ಕೆ ಹೋಗುತ್ತಾ ಬರುತ್ತಾ ಜನರು ಇರುತ್ತಾರೆ. ಅಲ್ಲಿ ಜಾಸ್ತಿ ಕೂಲಿ ಕಾರ್ಮಿಕರು ಇದ್ದು, ಹಂದ್ರಾಳರು ಜಮೀನ್ದಾರರಾಗಿದ್ದು ಅವರ ಹೊಲದಲೆಲ್ಲ ಕೆಲಸ ಮಾಡಲಿಕ್ಕೆ ಹೊಲೆಯರು, ಮಾದಿಗರು ಎಲ್ಲರೂ ಬರುತ್ತಿರುತ್ತಾರೆ. ಅವರು ಯಾವ ತರಹದ ಭಾಷೆಯನ್ನು ಬಳಸುತ್ತಾರೆ. ಅದಕ್ಕೆ ಅವರು ಕೊಡತಕ್ಕಂತಹ ಸಾಮಾಜಿಕ ನ್ಯಾಯ ಯಾವುದು ಹಾಗೂ ಅವರಿಗೆ ಕೊಟ್ಟಂತಹ ಸಾಮಾಜಿಕ ಗೌರವವನ್ನು ಅವರು ಬಳಸುವ ಭಾಷೆಗೆ ಕೊಡುತ್ತಾರೆ.

ಇವರ ಕತೆಗಳಲ್ಲಿ ಹಸಿವಿನ ಭಾಷೆ, ಕಾರ್ಮಿಕರ ಭಾಷೆ, ಬಡತನದ ಭಾಷೆಯನ್ನು ಬಳಸಿದ್ದಾರೆ. ಅಧಿಕಾರಯುಕ್ತವಾಗಿ ಭಾಷೆಯನ್ನು ಬಳಸುತ್ತಾರೆ. ಗಲಾಟೆಯಲ್ಲಿ ಇನ್ನೊಬ್ಬರನ್ನು ಕಟ್ಟಿ ಹಾಕುವುದಕ್ಕೆ ಅಶ್ಲೀಲ ಪದಗಳನ್ನು ಬಳಸುತ್ತಾರೆ. ಇನ್ನೊಬ್ಬರಿಗೆ ಅಪಹಾಸ್ಯದಿಂದ ಬಳಸುವ ಭಾಷೆ ನಗರದಲ್ಲಿ ಬಳಸುವಾಗ ವ್ಯಂಗ್ಯವಾಗಿ ಬಳಸುತ್ತಾರೆ. ಹಳೆಯ ಕತೆಗಳನ್ನು ತೆಗೆದುಕೊಂಡರೆ ಅಲ್ಲಿ ಹಳ್ಳಿಗಾಡಿನ ಭಾಷೆಯನ್ನು ಬಳಸುತ್ತಾರೆ. ಇಂಗ್ಲೀಷ್, ಕನ್ನಡ ಹಾಗೂ ತೆಲುಗು ಕನ್ನಡ ಎರಡೂ ಭಾಷೆಗಳನ್ನು ತಮ್ಮ ಕತೆಗಳಲ್ಲಿ ಬಳಸುವಂತದ್ದು ನೋಡಬಹುದು. ಅವರ ಎಲ್ಲಾ ಕತೆಗಳಲ್ಲೂ ತೆಲಗಿನ ಪ್ರಭಾವವನ್ನು ಕಾಣಬಹುದು. ಆಂಧ್ರ, ಹಂದ್ರಾಳರದ ಪೂರ್ವಿಕರು ತೆಲುಗಿನಿಂದ ಬಂದವರು. ಅವರ ಹೆಚ್ಚು ಕತೆಗಳಲ್ಲಿ ತೆಲುಗು ಮತ್ತು ಕನ್ನಡದ

ಮಿಶ್ರಣ ಹೆಚ್ಚಾಗಿ ಕಾಣಬಹುದು. ತುಮಕೂರು ಮತ್ತಿತ್ತರ ತಾಲ್ಲೂಕು ಮತ್ತು ಗಡಿಭಾಗದಲ್ಲಿ ತೆಲುಗಿನ ಪ್ರಭಾವವನ್ನು ಬಿಟ್ಟು ಅವರ ಕತೆಗಳನ್ನು ಬರೆಯಲಿಕ್ಕೆ ಸಾಧ್ಯವಿಲ್ಲ. ಯಾಕೆಂದರೆ ಅವರ ಮನೆ ಮಾತು ಕನ್ನಡವಾಗಿದ್ದರು ಅವರ ಹೊಲಗಳಲ್ಲಿ, ಗದ್ದೆಗಳಲ್ಲಿ ಬಹುತೇಕ ಕೆಲಸಗಳಲ್ಲಿ ಮಾತಾಡುವಾಗ ತೆಲುಗಿನ ಪ್ರಭಾವ ಹೆಚ್ಚಾಗಿ ಕಾಣಬಹುದು. ಇದು ವ್ಯಕ್ತಿಯ ಮೇಲೆ ಪ್ರಭಾವವಿರುವುದಲ್ಲ ಬದಲಿಗೆ ಅದು ಸಂಸ್ಕೃತಿಯ ಮೇಲೆ ಪ್ರಭಾವ ಬೀರುತ್ತದೆ ಎಂದು ಹೇಳಬಹುದಾಗಿದೆ.

ಅಡಿ ಟಿಪ್ಪಣಿಗಳು :

೧. ಸಾಮಾನ್ಯ ಭಾಷಾವಿಜ್ಞಾನ – ಡಾ.ಕೆ.ಕೆಂಪೇಗೌಡ, ಪು.ಸಂ–೧

೨. ಕನ್ನಡ ಭಾಷೆಯ ಚರಿತ್ರೆ, ಡಿ.ಎನ್.ಶಂಕರಭಟ್, ಪು.ಸಂ–೨೦

೩. ಹಂದ್ರಾಳರ ಕಥಾ ಜಗತ್ತು –೧, ಕೇಶವರೆಡ್ಡಿ ಹಂದ್ರಾಳ, ಪು.ಸಂ.೩

೪. ಹಂದ್ರಾಳರ ಕಥಾ ಜಗತ್ತು –೧, ಕೇಶವರೆಡ್ಡಿ ಹಂದ್ರಾಳ, ಪು.ಸಂ.೧೨೩

೫. ಹಂದ್ರಾಳರ ಕಥಾ ಜಗತ್ತು –೧, ಕೇಶವರೆಡ್ಡಿ ಹಂದ್ರಾಳ, ಪು.ಸಂ.೧೨೫

೬. ಹಂದ್ರಾಳರ ಕಥಾ ಜಗತ್ತು –೧, ಕೇಶವರೆಡ್ಡಿ ಹಂದ್ರಾಳ, ಪು.ಸಂ.೧೨೬

೭. ಹಂದ್ರಾಳರ ಕಥಾ ಜಗತ್ತು –೨, ಕೇಶವರೆಡ್ಡಿ ಹಂದ್ರಾಳ, ಪು.ಸಂ.೧೮೯

೮. ಹಂದ್ರಾಳರ ಕಥಾ ಜಗತ್ತು –೨, ಕೇಶವರೆಡ್ಡಿ ಹಂದ್ರಾಳ, ಪು.ಸಂ.೧೧೨

೯. ಒಂದು ಹಿಡಿ ಮಣ್ಣು – ಡಾ.ಬೆಸಗರಹಳ್ಳಿ ರಾಮಣ್ಣ, ಪು.ಸಂ.ಗಿಖ

೧೦. ಹಂದ್ರಾಳರ ಕಥಾ ಜಗತ್ತು –೧, ಕೇಶವರೆಡ್ಡಿ ಹಂದ್ರಾಳ, ಪು.ಸಂ.೪೩೩

೧೧. ಹಂದ್ರಾಳರ ಕಥಾ ಜಗತ್ತು –೧, ಕೇಶವರೆಡ್ಡಿ ಹಂದ್ರಾಳ, ಪು.ಸಂ.೪೩೪

೧೨. ಆಯ್ದ ಕವಿತೆಗಳು, ಡಾ.ಸಿದ್ದಲಿಂಗಯ್ಯ, ಪು.ಸಂ.೭೦

೧೩. ಹಂದ್ರಾಳರ ಕಥಾ ಜಗತ್ತು –೧, ಕೇಶವರೆಡ್ಡಿ ಹಂದ್ರಾಳ, ಪು.ಸಂ.೪೩೯

೧೪. ಹಂದ್ರಾಳರ ಕಥಾ ಜಗತ್ತು –೧, ಕೇಶವರೆಡ್ಡಿ ಹಂದ್ರಾಳ, ಪು.ಸಂ.೪೪೦

೧೫. ಮೋಡ ಕರಗುವ ಮುನ್ನ – ಕೇಶವರೆಡ್ಡಿ ಹಂದ್ರಾಳ, ಪು.ಸಂ.೨೮

೧೬. ಮೋಡ ಕರಗುವ ಮುನ್ನ – ಕೇಶವರೆಡ್ಡಿ ಹಂದ್ರಾಳ, ಪು.ಸಂ.೨೯

೧೭. ಮೋಡ ಕರಗುವ ಮುನ್ನ – ಕೇಶವರೆಡ್ಡಿ ಹಂದ್ರಾಳ, ಪು.ಸಂ.೩೨

೧೮. ಹಂದ್ರಾಳ, ಕೇಶವರೆಡ್ಡಿ ಹಂದ್ರಾಳ, ಪು.ಸಂ.೩೪೧

೧೯. ಜಡೆಗೆ ಗುಲ್‌ಮೊಹರ್ ಕೈಗಳು, ಕೇಶವರೆಡ್ಡಿ ಹಂದ್ರಾಳ, ಪು.ಸಂ.೧೭

೨೦. ಜಡೆಗೆ ಗುಲ್‌ಮೊಹರ್ ಕೈಗಳು, ಕೇಶವರೆಡ್ಡಿ ಹಂದ್ರಾಳ, ಪು.ಸಂ.೧೯

೨೧. ಜಡೆಗೆ ಗುಲ್‌ಮೊಹರ್ ಕೈಗಳು, ಕೇಶವರೆಡ್ಡಿ ಹಂದ್ರಾಳ, ಪು.ಸಂ.೨೪

೨೨. ಮೋಡ ಕರಗುವ ಮುನ್ನ – ಕೇಶವರೆಡ್ಡಿ ಹಂದ್ರಾಳ, ಪು.ಸಂ.೨೧

೨೩. ಮೋಡ ಕರಗುವ ಮುನ್ನ – ಕೇಶವರೆಡ್ಡಿ ಹಂದ್ರಾಳ, ಪು.ಸಂ.೨೫

ಅಧ್ಯಾಯ –೪

ಹಂದ್ರಾಳರ ಕಥೆಗಳಲ್ಲಿ ಗ್ರಾಮ ಸಂಸ್ಕೃತಿ

ಅಧ್ಯಾಯ-೪

ಹಂದ್ರಾಳರ ಕಥೆಗಳಲ್ಲಿ ಗ್ರಾಮ ಸಂಸ್ಕೃತಿ

ಕೇಶವರೆಡ್ಡಿ ಹಂದ್ರಾಳರು ಮೂಲತಃ ಗ್ರಾಮೀಣ ಪ್ರದೇಶದಿಂದ ಬಂದವರಾಗಿದ್ದು ಹಂದ್ರಾಳ ಎಂಬ ಗ್ರಾಮದಲ್ಲಿ ಅವರ ಜನನ. ಹಂದ್ರಾಳರು ಜನಪ್ರಿಯ ಶೈಲಿಯ ಕಥೆಗಾರರಾಗಿ, ನವಿರು ಹಾಸ್ಯದ ಆದರೆ ಬದುಕಿನ ಕಠೋರ ಸತ್ಯಗಳಿಗೆ ಮುಖಾಮುಖಿಯಾಗಿ ಕತೆಗಳನ್ನು ಬರೆದಿದ್ದಾರೆ. ಸಿಜಿಕೆ ಮತ್ತು ಬೆಸಗರಹಳ್ಳಿ ರಾಮಣ್ಣನವರನ್ನು ತಮ್ಮ ಮಾನಸ ಗುರುಗಳೆಂದು ನಂಬಿದ್ದ, ನಂಬಿರುವ ಹಂದ್ರಾಳರು ಅವರಿಬ್ಬರೂ ಬದುಕಿರುವ, ಸೃಜನಶೀಲತೆಗಳ ಪ್ರಮುಖ ಚಾಲನೆಯಲ್ಲಿದ್ದವರು. ಬಂಡಾಯ-ದಲಿತ ಬರವಣಿಗೆ ಕಳೆದ ದಶಕದ ಕಥಾಕ್ಷೇತ್ರದ ಹೊಚ್ಚಹೊಸ ಬೆಳವಣಿಗೆ, ಮಾರ್ಕ್ಸ್‌ವಾದ, ಲೋಹಿಯಾವಾದ, ಅಂಬೇಡ್ಕರ್ ವಾದಗಳು ಮುಪ್ಪರಿಗೊಂಡು ಬೆಳೆಯುತ್ತಿರುವ ಈ ಚಳುವಳಿಯಲ್ಲಿ ಕೆಳಸ್ತರದ ಜಾತಿವರ್ಗಗಳ ಶೋಷಿತ ಜನರ ಪ್ರತಿಭಟನೆಯ ಧ್ವನಿ ಉಗ್ಗಡಿಸುತ್ತದೆ. ಇದರ ಮುಖ್ಯಕಥೆಗಾರರು ಬೆಸಗರಹಳ್ಳಿ ರಾಮಣ್ಣ, ಕಾಳೇಗೌಡ ನಾಗವಾರ, ಕುಂ.ವೀರಭದ್ರಪ್ಪ, ಬರಗೂರು ರಾಮಚಂದ್ರಪ್ಪ, ಸುಧಾಕರ, ಶಾಂತರಸ, ಚೆನ್ನಣ್ಣ ವಾಲಿಕಾರರು ಮಾನವತೆಯನ್ನು ಕುಂಠಿಸುವ ವ್ಯವಸ್ಥೆಯ ವಿರುದ್ಧ ಬೆಸಗರಹಳ್ಳಿಯ ಕತೆಗಳು ಹಾಗೂ ಹಂದ್ರಾಳರ ಕತೆಗಳು ಸಿಡಿಯುತ್ತವೆ. ಅಂತರ್ಜಾತೀಯ ಪ್ರೇಮದಿಂದ ಸ್ಥಿತ್ಯಂತರದ ಸಾಧ್ಯತೆಯ ಭವಿಷ್ಯವನ್ನು ನಾಗವಾರರು ಕಾಣುತ್ತಾರೆ. ವೀರಭದ್ರಪ್ಪನವರ ಪ್ರತಿಭಟನೆಯ ಪ್ರಚಂಡ ಶಕ್ತಿ ಒಮ್ಮೊಮ್ಮೆ ಪ್ರತಿಹಿಂಸೆಯವರೆಗೂ ಪ್ರಸರಿಸುತ್ತದೆ. ಹಾಗೆಯೇ ಹಂದ್ರಾಳರ ಕಥೆಗಳು ಗ್ರಾಮಸಂಸ್ಕೃತಿಯನ್ನು ಎತ್ತಿ ಹಿಡಿಯುವಲ್ಲಿ ಕೆಲಸವನ್ನು ಮಾಡುತ್ತದೆ.

ಹಂದ್ರಾಳರ ಸಣ್ಣಕತೆಗಳಲ್ಲಿ ಕಂಡುಬರುವ ಗ್ರಾಮಜೀವನದ ವೈವಿಧ್ಯಗಳು ಅಚ್ಚರಿಗೊಳಿಸುವಂತವು. ಜೀವನದಲ್ಲಿ ತಮ್ಮ ಗಮನಕ್ಕೆ ಬಂದಿರಬಹುದಾದ ಜನರ, ತಾವೇ ಕಲ್ಪಿಸಿಕೊಳ್ಳುವ ವ್ಯಕ್ತಿಗಳ ಸ್ವಭಾವಗಳ ಮೇಲ್ನೋಟದ ಸರಳತೆ ಹಾಗೂ ಆಳದ ಸಂಕೀರ್ಣತೆಗಳು ಸೂಚಿತವಾಗುವಂತೆ ಅವರನ್ನು ಚಿತ್ರಿಸುವಂತೆಯೇ, ಚಾರಿತ್ರಕ ವ್ಯಕ್ತಿಗಳ ಅವರಲ್ಲಿಯೂ ಮಹಾನ್ ಸಾಹಿತಿಗಳ ಹಾಗೂ ಅವರ ಕಥಾ ಸಾಹಿತ್ಯದ ಜನಪ್ರಿಯ ಪಾತ್ರಗಳ ಸ್ವಭಾವಗಳನ್ನು ಕೂಲಂಕುಷವಾಗಿ ಗ್ರಹಿಸಿ, ಅವರನ್ನೂ ಆ ಪಾತ್ರಗಳನ್ನೂ ವಾಸ್ತವಿಕ ಎನ್ನುವಂತೆ ಸುಸಂಗತವಾಗಿಯೂ, ಸುಂದರವಾಗಿಯೂ ಹಂದ್ರಾಳರು ತಮ್ಮ ಕತೆಗಳಲ್ಲಿ ಕಡೆದಿರುತ್ತಾರೆ.

ಭಾರತದ ಶ್ರೇಷ್ಠ ಸಾಹಿತಿಗಳಲ್ಲಿ ಕೆಲವರ ಜೀವನ ಚರಿತ್ರೆಗಳಲ್ಲಿ ಲಭ್ಯವಾಗುವ ಕೆಲವು ಅಂಶಗಳನ್ನು ಆಧಾರವಾಗಿಟ್ಟುಕೊಂಡು, ಉಳಿದವುಗಳನ್ನು ತಮ್ಮ ಸುತ್ತಮುತ್ತಲಿನ ಪರಿಸರದ ಶಕ್ತಿಯಿಂದ, ಸುಸಂಬದ್ಧವಾಗುವಂತೆ ನೈಜವಾಗಿ ಚಿತ್ರಿಸುತ್ತಾ ಹೋಗುತ್ತಾರೆ. ಅವರ ವಿಶ್ವಸನೀಯ ವ್ಯಕ್ತಿಚಿತ್ರಗಳನ್ನು ತಮ್ಮ ಕೆಲವು ಕಥೆಗಳಲ್ಲಿ ಹಂದ್ರಾಳರು ನೀಡುತ್ತಾರೆ. ಇಂಥ ಚಿತ್ರಗಳ ವೈಶಿಷ್ಟ್ಯವೆಂದರೆ ಭಾರತೀಯ ಸಾಹಿತಿಗಳನ್ನು ನೆನಪಿಸುವಾಗಲೂ ಅವರ ವ್ಯಕ್ತಿತ್ವಕ್ಕೆ ಸುಸಂಗತವಾಗುವಂತೆಯೂ ಹೀಗಿದ್ದೂ ಕನ್ನಡಿಗ ಎಂದೇ ನಾವು

ಭಾವಿಸಬಹುದಾದ ತಮ್ಮದೇ ದೃಷ್ಟಿಕೋನದಿಂದ ಅವರನ್ನು ವೀಕ್ಷಿಸುತ್ತಿರುವಂತೆಯೂ ಹಂದ್ರಾಳರು ತಮ್ಮ ಕತೆಗಳಲ್ಲಿ ಚಿತ್ರಿಸುತ್ತಾರೆ.

ಇದು ಹಂದ್ರಾಳರವರ ಸ್ವೋಪಜ್ಞತೆಯ ದ್ಯೋತಕವಾಗಿರುವಂತೆ ಗ್ರಾಮೀಣ ಸಂಸ್ಕೃತಿಗಳ ಹಾಗು ನಗರಗಳ ಸಾಮರಸ್ಯದ ಕಡೆಗೆ ಅವುಗಳ ಹಿನ್ನೆಲೆಯ ಜಾಗತಿಕ ಮೂಲಭೂತ ಮಾನವೀಯತೆಯ ಸಮಾನ ಧರ್ಮದ ಕಡೆಗೂ ನಮ್ಮ ಗಮನ ಸೆಳೆಯುತ್ತದೆ. ತಮಗೇ ವಿಶಿಷ್ಟವಾದ ಮನೋಧರ್ಮವನ್ನೂ ಜೀವನ ದರ್ಶನವನ್ನೂ ಪ್ರಕಟಿಸುವ ಇಂಥ ಕತೆಗಳೂ ಅವರ ಇತರ ಕತೆಗಳೊಡನೆ ಸಮರಸವಾಗಿ ಕೂಡಿಕೊಳ್ಳುವುದು ಹಂದ್ರಾಳರ ಅಸಾಧಾರಣ ಪ್ರತಿಭೆಯ ಮೇಲೆ ಬೆಳಕು ಚೆಲ್ಲುತ್ತದೆ.

ಹಂದ್ರಾಳರು ಗ್ರಾಮ ಸಂಸ್ಕೃತಿಯನ್ನು ಅದರ ಪ್ರಸ್ತುತ ಹಾಗೂ ಪ್ರಾದೇಶಿಕ ರೂಪಾಂತರಗಳೊಡನೆ ಆಳವಾಗಿ ಅಧ್ಯಯನ ಮಾಡಿ ಹಾಗೂ ಹಳ್ಳಿಯ ಸ್ಥಿತಿಗತಿಗಳನ್ನು ತಿಳಿದು ಅದನ್ನು ತಮ್ಮ ಜೀವನದಲ್ಲಿಯೂ ರೂಢಿಸಿಕೊಂಡಿದ್ದ ಹಂದ್ರಾಳರು ಭಾರತೀಯ ಹಾಗೂ ಕರ್ನಾಟಕದ ಗ್ರಾಮೀಣ ಸಂಸ್ಕೃತಿಯ ವಕ್ತಾರರಾಗಲು ಹೆಚ್ಚು ಸಮರ್ಥರು ಎಂದು ಭಾವಿಸಬಹುದು. ನಮ್ಮ ಶ್ರೇಷ್ಠ ಕತೆಗಾರರಲ್ಲೊಬ್ಬರಾದ ಹಂದ್ರಾಳರು ಗ್ರಾಮೀಣ ಸಂಸ್ಕೃತಿಯ ಸಾರವನ್ನೇ ತಮ್ಮ ಕತೆಗಳಲ್ಲಿ ಭಟ್ಟಿ ಇಳಿಸಿದ್ದಾರೆ. ಅವರ ಆಸಕ್ತಿ, ವಿದ್ವತ್ತು ಮತ್ತು ಸಾಹಿತ್ಯ ಸೃಷ್ಟಿ ಕತೆಯ ಕ್ಷೇತ್ರದಲ್ಲಿ ಸೈ ಎನ್ನಿಸಿಕೊಂಡವರು ಈ ಹಂದ್ರಾಳರು. ಗ್ರಾಮೀಣ ಸಂಸ್ಕೃತಿಯ ಉಪನ್ಯಾಸಗಳಲ್ಲಿ ಅವರು ಮೊದಲು ಸಂಸ್ಕೃತಿಯ ಸ್ವರೂಪವನ್ನು ಬಿತ್ತರಿಸಿ ಬಳಿಕ ನಗರ ಸಂಸ್ಕೃತಿಗಳೂ, ಶಿಷ್ಟ ಪಾಮರ ಸಂಸ್ಕೃತಿಗಳೂ ಅಭಿನ್ನವೆಂದು ವಾದಿಸಿ, ಗ್ರಾಮೀಣ ಸಂಸ್ಕೃತಿಯು ಪ್ರಕಾಶಗೊಳ್ಳುವ ಹಾಡು, ಕತೆ, ಗಾದೆ, ಒಗಟು ಇತ್ಯಾದಿ ಮೌಖಿಕ ಸಾಹಿತ್ಯ ಪ್ರಕಾರಗಳಿಂದಲೂ ವಿವಿಧ ಪದ್ಧತಿ ಆಚಾರಗಳಿಂದಲೂ ನಿದರ್ಶನಗಳನ್ನು ನೀಡುತ್ತ ತಮ್ಮ ವಾದವನ್ನು ಸಮರ್ಥಿಸಿಕೊಳ್ಳುತ್ತಾರೆ. ನಮ್ಮ ಮೌಖಿಕ ಸಾಹಿತ್ಯದ ಉದಾಹರಣೆಗಳು ಹಾಗೂ ಪ್ರಾಚೀನ ಸಾಹಿತ್ಯ ಮತ್ತು ಆಚಾರ ವಿಚಾರಗಳು ಇವುಗಳಿಂದ ಅವರು ಎತ್ತಿ ತೋರಿಸುವ ಅವುಗಳ ಪರ್ಯಾಯ ಉಲ್ಲೇಖಗಳನ್ನು ನೋಡಬಹುದು.

ಸಂಸ್ಕೃತಿ ಎಂದರೆ 'ಅರಗಿದ ಅನ್ನದಂತೆ. ಆಚಾರದಲ್ಲಿ ಪರಿಣಾಮವಾಗಿರುವ ವಿದ್ಯೆ' ಎಂದು ಹೇಳಿ, ಅದಕ್ಕೆ ಪರ್ಯಾಯ ಶಬ್ದವಾಗಿ 'ರಘುವಂಶ'ದ ಮೊದಲು ಶ್ಲೋಕಗಳಲ್ಲೊಂದರಲ್ಲಿ ಬಳಸುವ 'ವಿನಯ' ಎಂಬ ಶಬ್ದವನ್ನು ಕಾಣಬಹುದು. ಸಂಸ್ಕೃತಿಯಲ್ಲಿ ಮುಪ್ಪರಿಗೊಳ್ಳುವ ಮೂರು ಗುಣಗಳನ್ನು ಕಾಣಬಹುದು. ಹೊಂದಾಣಿಕೆ, ಹೆಚ್ಚುತನ, ಹಿರಿಯತನ. ಯಾವುದೇ ಒಂದು ಸಂಸ್ಕೃತಿಯು ಬದುಕಿರುವ ಮರ ಬೆಳೆಯುತ್ತಲೇ ಇರುವಂತೆ ಸಂಸ್ಕೃತಿಯ ಅರ್ಥ ದಿನ ದಿನಕ್ಕೂ ಬೆಳೆಯುತ್ತಲೇ ಇರುತ್ತದೆ. ಅದನ್ನು ಬೆಳೆಯುವುದು ಆತ್ಮಪರೀಕ್ಷೆ, ಶುದ್ಧೀಕರಣ ಮಾಡಿಕೊಂಡ ಅಂತರಂಗದಲ್ಲಿ ಸಾಣೆಗೆ ಹಿಡಿದ ವಜ್ರದ ಕಾಂತಿಯಂತೆ ಒಂದು ಹೊಸ ಕಾಂತಿ ಹುಟ್ಟುತ್ತದೆ. ವಜ್ರದ ಕಾಂತಿಗಿಂತ ಸಹಜವಾಗಿ . . . . . ಇರುವ ಮನೋಭಾವ, ಅದರಿಂದ ಮೂಡಿದ ಅದರಿಂದ ಪ್ರೇರಿತವಾದ ನಡೆ, ಇವೆರಡೂ ಸಂಸ್ಕೃತಿಯ ಗುರುತುಗಳು; ಸಂಸ್ಕೃತಿಯ ಅರ್ಥ ಬೆಳೆಯುತ್ತಲೇ ಇರುತ್ತದೆ ಎನ್ನುವ ಮಾತನ್ನು ವಿಸ್ತರಿಸುತ್ತಾ ಸಂಸ್ಕೃತಿಯನ್ನು ಉತ್ತರೋತ್ತರಣಿ ಎಂದು ಕರೆಯಬಹುದು. ಹೀಗೆ ಅದು ಮುಂದೆ ಮುಂದೆ ಹೋಗುತ್ತ ನದಿಯ ಹಾಗೆ ವಿಶಾಲವೂ ಆಳವೂ ಆಗುತ್ತದೆ

ಎಂದು ತಿಳಿಯಲಾಗಿದೆ. ಪುರುಷಾರ್ಥ ಚತುಷ್ಟಯಗಳಲ್ಲಿ ಮೋಕ್ಷ ಎನ್ನುವುದು ನದಿಯು ಸಮುದ್ರವನ್ನು ಸೇರಿ ಸಮುದ್ರವಾಗುವ ಹಾಗೆ. ನಮಗೆ ತ್ರಿವರ್ಗ ಎಂದರೆ ಧರ್ಮಾರ್ಥಕಾಮಗಳು ಸಾಕು. ಗೀತೆಯಲ್ಲಿ ಧರ್ಮ ವಿರುದ್ಧ ಕಾಮವನ್ನು ಎತ್ತಿ ಹಿಡಿದಿದೆ. ಹೀಗೆ ಈ ಮೂರು ಪುರುಷಾರ್ಥಗಳಲ್ಲಿ ಪರಸ್ಪರ ಹೊಂದಾಣಿಕೆ ಇರಬೇಕು. ಸಾಮರಸ್ಯ ಸಾಧಿಸಿಕೊಳ್ಳಬೇಕು ಎಂಬುದೇ ಸಂಸ್ಕೃತಿ.

ಪಾಶ್ಚಾತ್ಯ ವಿದ್ವಾಂಸರು ಜನತೆಯ ಸಂಸ್ಕೃತಿಯನ್ನು ನಿರ್ದೇಶಿಸುತ್ತಾ ನಾಗರಿಕ ಜನಾಂಗದ ಅಪಂಡಿತ ಕುಲಗಳಲ್ಲಿ ಕಾಣಸಿಗುವ ಪರಂಪರ ಪ್ರಾಪ್ತವಾದ ತಿಳಿವು, ಅರಿವು, ಅದೇ ಜನತೆಯ ಸಂಸ್ಕೃತಿ ಎಂದು ಅದನ್ನು ಒಂದು ವಿಶಿಷ್ಟರೂಪವನ್ನಾಗಿ ವಿಂಗಡಿಸುತ್ತಾರೆ. ನಾಗರಿಕ-ಗ್ರಾಮೀಣ, ಶಿಷ್ಟ-ಅನಕ್ಷರಸ್ಥ, ಪಂಡಿತ-ಪಾಮರ ಇಂಥ ಬೇಧವು ಹಂದ್ರಾಳರಿಗೆ ಒಪ್ಪಿಗೆಯಾಗುವುದಿಲ್ಲ. ಗ್ರಾಮೀಣದಲ್ಲಿ ಈ ಕೊನೆಯಿಂದ ಆ ಕೊನೆಯವರೆಗೆ ಕಂಠಪಾಠ ಮಾಡಿರುವ ನಿರಕ್ಷರರಿದ್ದಾರೆ. ಚುಟಿಕೆ ಹೊಡೆಯುವಷ್ಟು ಹೊತ್ತಿನಲ್ಲಿ ಹಾಡು ಲಾವಣಿಗಳನ್ನು ಕಟ್ಟಬಲ್ಲ ಪಾಮರರಿದ್ದಾರೆ, ಸಾವಿರಾರು ನುಡಿಯ ಹಾಡುಗಳು ಇಪ್ಪತ್ತು ಮೂವತ್ತನ್ನು ನಿರಾಯಾಸವಾಗಿ ಚಾಚೂ ತಪ್ಪಿಲ್ಲದೆ, ಇತರರ ಸಹಾಯವಿಲ್ಲದೆ ಬಾಯಲ್ಲಿ ಹೇಳುವ ಹೆಣ್ಣು ಹೆಂಗಸರಿದ್ದಾರೆ. ಹೆಸರಾದ ಡಾಕ್ಟರುಗಳು ಕೈಬಿಟ್ಟ ವ್ಯಾಧಿಯನ್ನು ಛುಟಿಕಾ ಮಂತ್ರಮೂಲಿಕೆಗಳಿಂದ ಗುಣಪಡಿಸಬಲ್ಲ ತಜ್ಞರಿದ್ದಾರೆ.

ಇದಕ್ಕೆ ಕಾರಣ 'ಋಷಿಗಳ ತಪೋವನಗಳು, ಜೈನರ ಬಸದಿಗಳು, ಬೌದ್ಧರ ವಿಹಾರಗಳು, ಬ್ರಾಹ್ಮಣರ ದೇವಾಲಯಗಳು, ರಾಜರ ಸಭೆಗಳು, ವಿದ್ವಾಂಸರ ಗೋಷ್ಠಿಗಳು, ದಾಸರ ಹರಿಕಥೆಗಳು, ಶರಣ-ಸಾಧುಗಳ ತತ್ವಗಳು, ಕೊನೆಗೆ ಭಿಕ್ಷುಕರ ಹಾಡುಗಳು, ಇವೆಲ್ಲ ಸಾವಿರಾರು ಸಲ ಸಂಸ್ಕೃತಿಯ ತೆರೆಗಳನ್ನು ಜನತೆಯ ಮೇಲೆ ಹಾಯಿಸಿ ಹರಿಯಿಸಿ ಪ್ರಜಾವರ್ಗಕ್ಕೆ ಬೇಕಾದ ಹಾಗೆ ಸಂಸ್ಕೃತಿಯ ಗಂಗಾಸ್ನಾನವನ್ನು ಮಾಡಿಸಿವೆ. 'ಜ್ಞಾನಭಕ್ತಿ ಮಾರ್ಗಗಳ ಸೌಂದರ್ಯವನ್ನು ಮೆರೆಯುತ್ತಿರುವ ಶ್ರೇಯಃಪ್ರಧಾನವಾದ ವೈದಿಕ ಸಂಸ್ಕೃತಿ ಕುಲಕುಲಾಂತರಗಳ ಆಚಾರಸಮಯಾದಿ ನಾನಾ ವ್ಯವಹಾರಗಳಲ್ಲಿ ಹಾಸುಹೊಕ್ಕಾಗಿ ಬೆರೆತು ಹೋಗಿದೆ.'

ಸೂರ್ಯ ನಮಸ್ಕಾರ ವೈದಿಕವೂ ಹೌದು, ಗ್ರಾಮೀಣದಲ್ಲಿಯೂ ಈ ಆಚರಣೆ ಇದೆ. ವಿಧಿವಿಲಾಸವನ್ನು ಎಲ್ಲರೂ 'ಹಣೆಯ ಬರಹ' ಎಂದೇ ರೂಢಿಯಾಗಿ ಹೇಳಿಕೊಳ್ಳುತ್ತೇವೆ. ವಿವಾಹ ವಿಧಿಗಳಲ್ಲಿಯೂ ಗ್ರಾಮೀಣ ಸಂಸ್ಕೃತಿಯು ಹೇಗೆ ವೈದಿಕ ಸಂಸ್ಕೃತಿಯ ರೂಪಾಂತರ, ಪ್ರತಿಬಿಂಬ ಎಂಬುದನ್ನು ಕಾಣುತ್ತೇವೆ. 'ವೀಳ್ಯದ ಶಾಸ್ತ್ರ' ನಿಶ್ಚಿತಾರ್ಥ, ಚಪ್ಪರ, ವಿವಾಹ ಮಂಟಪ ಕಟ್ಟುವಿಕೆ, ಧಾರೆ, ಕನ್ಯಾದಾನ, ಸೇಸೆಯಲ್ಲಿ ಕನ್ಯಾರವರು ಪರಸ್ಪರವಾಗಿ ಅಕ್ಷತೆಯಿಂದ ಅರ್ಜಿಸುವರು, ಭೂಮ, ನವದಂಪತಿಗಳು ಒಟ್ಟಿಗೆ ಮಾಡುವ ಭೋಜನ, ಕುಂಕುಮದ ನೀರು ತುಂಬಿದ ಕಳಶಗಳನ್ನು ಹೂಡುವುದು, ನಾಗವಲಿ, ಗದ್ದುಗೆ, ತಾಂಬೂಲ, ಚರ್ವಣ, ವಿವಾಹದ ಮುಖ್ಯಾಂಗವಾಗಿದೆ. ಮಾಂಗಲ್ಯಧಾರಣ, ಹಲವು ಜಾತಿಗಳಲ್ಲಿದ್ದ ಬಸವಿ ಬಿಡುವ ಸಂಪ್ರದಾಯವೂ ವೇದಗಳ ಕಡೆಯಿಂದ ಬಂದಿರಬಹುದು ಎಂಬ ಊಹೆಯೂ ಸಾಧ್ಯ. ಏಕೆಂದರೆ ಕಾನೀನ ಪುತ್ರ ಪದ್ಧತಿಯನ್ನು ಇದು ಹೋಲುತ್ತದೆ. ಕೆಲವರು ಕ್ಷೇತ್ರಜನನ್ನು ಚೌರಸನೆಂದು ಗ್ರಹಿಸುವುದೂ ಈ ಅನುಮಾನವನ್ನು ಸಮರ್ಥಿಸುತ್ತದೆ. ಮಕ್ಕಳ ಆಟಗಳನ್ನು ಪರಿಶೀಲಿಸಬಹುದು.

'ಸ್ವಾದಿಷ್ಪಯ್ಯ ಮಾದಿಪ್ಪಯ್ಯ ಮತ್ತಿಷ್ಟು ತುಪ್ಪ ಹಾಕಯ್ಯ, ಹಾಕಯ್ಯ' ಎಂದು ಕೆನ್ನೆಗಳನ್ನು ಹಿಡಿದು ಮಗುವನ್ನು ಹಿಂದಕ್ಕೆ ಮುಂದಕ್ಕೆ ಜೂಗಾಡಿಸುವುದು. ಈಗಿನ ಹೆಂಗಸು ಗಂಡಸರ ಉಡುಗೆ ತೊಡುಗೆಗಳನ್ನು ವೇದಕಾಲೀನ ಹಳ್ಳಿಯ ಹೆಂಗಸರು ಕಟ್ಟುವ ತುರುಬ, ಅವರು ಸೊಪ್ಪು ಸೆದೆಗಳನ್ನು ತುರುಕಿಕೊಳ್ಳುವುದಕ್ಕಾಗಿ ಮಗ್ಗುಲಾಗಿ ಕಟ್ಟುವ ಮಡಿಲು, ಅವರುಡುವ ಸೀರೆ, ಗಂಡಸರುಡುವ ಧೋತರ ದಟ್ಟೆ, ಕಠಾರಿ ಕಚ್ಚೆಧೋತರ, ಬಣ್ಣದ ತಲೆಸುತ್ತು, ಪಾಗುಗಳು, ಇವೆಲ್ಲ ವೇದದ ಕಾಲದವು. ಅಷ್ಟೆ ಅಲ್ಲ ಹಳ್ಳಿಯ ಕಾಲದ ತೊಟ್ಟಿಯ ಮನೆಗಳು, ನಮ್ಮ ಮನೆಗಳಲ್ಲಿರುವ ಹಳೆಯ ಮಂಚ, ಕಾಲುಮಣಿ, ಮಣೆ, ಚಾಪೆಗಳು ವೇದಗಳ ಕಾಲದಲ್ಲಿದ್ದ ಜನರು ಉಪಯೋಗಿಸುತ್ತಿದ್ದವು.

ಸಂಸ್ಕೃತಿಯು ಸಮಾಜದ ಒಂದು ರಚನೆಯಾಗಿದೆ. ಲಿಂಗ, ಜಾತಿ, ವರ್ಗ, ಇವೆಲ್ಲವೂಒಂದರ ಜೊತೆಗೆ ಮತ್ತೊಂದನ್ನು ಬೇರ್ಪಡಿಸಲು ಆಗದೆ ಜೊತೆಯಾಗಿ ಬೆರೆತಿರುವುದೇ ಸಂಸ್ಕೃತಿಯಾಗಿದೆ. ಇದು ಕಣ್ಣಿಗೆ ಕಾಣುವ ಬದುಕಿನ ಹಂಬಲ ಪ್ರೇರಣೆ, ಪ್ರಭಾವ ಈ ಘಟನೆಗೆ ಕಾರಣವಾಗಿದೆ ಎಂಬ ಹುಡುಕಾಟವಾಗಿದೆ. ಇಂತಹ ಸಾಹಿತ್ಯಕ್ಕೆ ಪ್ರೇರಣೆ ಪ್ರಭಾವ ಬೀರುತ್ತದೆ. ಜಾತಿ, ಲಿಂಗ, ವರ್ಗದಿಂದ ವ್ಯತ್ಯಾಸವನ್ನು ಸಮಾಜದಲ್ಲಿ ತಿಳಿಯುವುದು. ನಂತರ ಸಂಬಂಧವನ್ನು ತಿಳಿಯುವುದು ಹಾಗೂ ಆರ್ಥಿಕ, ಸಾಮಾಜಿಕ, ರಾಜಕೀಯವಾಗಿ ರೂಪ ಪಡೆಯುತ್ತದೆ.

ಹಂದ್ರಾಳರು ಕನ್ನಡ ಕಥಾಸಾಹಿತ್ಯ ಲೋಕಕ್ಕೆ ಕಥೆಗಾರರೆಂದೇ ಪ್ರಸಿದ್ಧರಾಗಿದ್ದಾರೆ. ಸ್ವಾತಂತ್ರ್ಯ ನಂತರದ ಗ್ರಾಮೀಣ ಪ್ರದೇಶದ ಸ್ಥಿತ್ಯಂತರಗಳನ್ನು ತಮ್ಮದೇ ಆದ ಅನನ್ಯವಾದ ರೀತಿಯಲ್ಲಿ ಕಥನವಾಗಿಸಿದ್ದಾರೆ. ಕಥೆ, ಕಥಾಪ್ರಪಂಚ, ಕಥನಕ್ರಿಯೆ ಪರಸ್ಪರ ಸಂಬಂಧ ಪಡೆದು ಸಂಕಥನವಾಗಿರುವ ಪರಿ ವಿಶಿಷ್ಟವಾಗಿದೆ. ವಸಾಹತ್ತೋತ್ತರ ಹಾಗೂ ಜಾಗತೀಕರಣದ ಸಂದರ್ಭದಲ್ಲಿ ಗ್ರಾಮೀಣ ಪ್ರದೇಶದ ಜನರ ಸಂಬಂಧಗಳು, ರಾಜಕೀಯ, ಧಾರ್ಮಿಕ ಸಮಸ್ಯೆಗಳು, ಆರ್ಥಿಕ ಸ್ಥಿತಿಗಳು ಯಾವ ಸ್ವರೂಪದಲ್ಲಿವೆ ಎಂಬುದನ್ನು ತಮ್ಮದೇ ಆದ ಕಥನಗಾರಿಕೆಯಲ್ಲಿ ಹಿಡಿದಿಟ್ಟಿದ್ದಾರೆ. ಕಥೆಗಾರರಾದ ಹಂದ್ರಾಳರು ಹಳ್ಳಿಯ ಚಿತ್ರಗಳಿಗೆ ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ತನ್ನದೇ ಆದ ಒಂದು ಸ್ಥಾನವಿದೆ. ಆಧುನಿಕ ಸಾಹಿತ್ಯದ ಬಹಳಷ್ಟು ಲೇಖಕರಿಗೆ ಹಳ್ಳಿಯ ಬದುಕೇ ವಸ್ತು, ಮಾಸ್ತಿ, ಕುವೆಂಪು, ಕಾರಂತ, ಲಂಕೇಶ್, ಅನಂತಮೂರ್ತಿ, ತೇಜಸ್ವಿ, ದೇವನೂರು ಮಹಾದೇವ, ಕುಂ.ವೀರಭದ್ರಪ್ಪ, ಕಾ.ತ.ಚಿಕ್ಕಣ್ಣ ಇವರಿಗೆ ಭಾರತೀಯ ಗ್ರಾಮೀಣ ಪ್ರದೇಶದ ಬದುಕಿನ ಸ್ಥಿತ್ಯಂತರಗಳೇ ವಸ್ತುವಾಗಿದೆ. ಈ ಸಾಲಿಗೆ ಕೇಶವರೆಡ್ಡಿ ಹಂದ್ರಾಳರು ಸೇರುತ್ತಾರೆ.

ವಸಾಹತುಶಾಹಿ ಅನುಭವದ ಮೂಲಕ ಒದಗಿದ ದಿಗ್ಭ್ರಮೆಯಲ್ಲಿ ನಾಡಿನ ಪ್ರಜ್ಞೆ, ನಂಬಿಕೆ ಮತ್ತು ಆಚರಣೆಗಳ ನಡುವಣ ಸಹಬಾಳ್ವೆಗೆ ತೀವ್ರತರ ಆಘಾತ ಒದಗಿದ್ದನ್ನು ಅರಗಿಸಿಕೊಳ್ಳುವುದು ಮುಖ್ಯವಾಗಿದ್ದ ಸಂದರ್ಭದಲ್ಲಿ ಇದರಿಂದ ಬಿಡುಗಡೆಗೊಳ್ಳಲು ಹಲವು ಮಾದರಿಗಳನ್ನು ಕನ್ನಡ ಸಾಹಿತ್ಯ ಲೋಕ ಹುಡುಕಿಕೊಂಡಿತು.

"ಕೇಶವರೆಡ್ಡಿ ಹಂದ್ರಾಳು ಎಂಥ ಸಾಯಿಲ್ ಕನ್ಸರ್‌ವೇಟರ್ ಎಂದರೆ ಅವರೊಂದಿಗೆ ಮಣ್ಣೆಂದರೆ ಮೂಗು ಮುರಿಯುವವರು ದಿನಗಟ್ಟಲೆ ಒಡನಾಡಬೇಕು. ಮಣ್ಣು ಹಸಿರಿಗೆ ಹಲವು ವ್ಯಾಖ್ಯಾನ ಬರೆಯುವ

ಪರಿಯನ್ನು ರೆಡ್ಡಿಯವರಿಂದ ತಿಳಿಯಬೇಕು. ಕಕ್ಕುಲಾತಿಯ ಗೀಜಗನ ಗೂಡಾದ ರೆಡ್ಡಿ ಮಣ್ಣಿನಿಂದ ರೂಪಿತಗೊಂಡಂಥವರೆಂದು ಅರ್ಥವಾಗುವುದು ಆವಾಗಲೇ, ಅವರೆದೆಯೊಳಗೆ ಒಕ್ಕಲ ಒನಪಿನ ನೂರಾರು ನಿರ್ಲಕ್ಷಿತ ಪಾತ್ರಗಳು ಮಣ್ಣುಮಸಿ ಸೆಗಣಿ, ಚಿಂಗುವಾಸನೆ ಬೀರುತ್ತಲೇ ಅವರ ಸೃಜನಶೀಲ ಪ್ರತಿಭೆಗೆ, ಗ್ರಾಮೀಣ ಅನನ್ಯ ಸಂವೇದನೆಗೆ ಕಸುವು ಒದಗಿಸುತ್ತಲೇ ಇರುತ್ತವೆ. ಆ ಜೀವಂತ ಪಾತ್ರಗಳು ರೆಡ್ಡಿಯ ಸೂಕ್ಷ್ಮಗ್ರಾಹಿ ಪಂಚೇಂದ್ರಿಯಗಳ ಮೂಲಕ ನಾಗರಿಕ ಸಮಾಜದೊಂದಿಗೆ ಕ್ಯಾತೆ ತೆಗೆಯುತ್ತಲೆ ಇರುತ್ತವೆ. ಕನ್ನಡದ ಸ್ವಯಂಘೋಷಿತ ಅಥವಾ ಆರೋಹಿತ ಶ್ರೇಷ್ಠ ಲೇಖಕರು ಕಲಿಸದಿರುವ ಎಷ್ಟೋ ನಿಗೂಡ, ಜ್ವಲಂತ ಸತ್ಯಗಳನ್ನು ರೆಡ್ಡಿಯವರ ಮೂಲಕ ಹೊರಹಾಕುತ್ತಲೇ ಇರುತ್ತವೆ. ಆದ್ದರಿಂದಲೇ ನಾನು ರೆಡ್ಡಿಯವರಂಥ ಕಥನ ಪ್ರತಿಭೆಗಳನ್ನು ಕುರುಚಲು ಕಾಡುಗಳಿಗೆ ಹೋಲಿಸುವುದು. ಉದ್ಯಾನವನಗಳಿಗಿಂತ ಮುಖ್ಯವಾಗಿ ಕನ್ನಡ ಸಾಹಿತ್ಯಕ್ಕೆ ಅತ್ಯಗತ್ಯವಾಗಿ ಬೇಕಾಗಿರುವುದು ಹಲವು ವಿಧದ ಕಾಡುಗಳು. ಅಂಥ ಕಾಡುಗಳನ್ನು ಸೃಷ್ಟಿಸುವ ತಾಕತ್ತು ನಿಸ್ಸಂದೇಹವಾಗಿ ನಮ್ಮೆಲ್ಲರ ಪ್ರೀತಿಯ ಹಳ್ಳಿ ಹೈದ ಕೇಶವರೆಡ್ಡಿ ಹಂದ್ರಾಳು ಅವರಿಗೆ ಖಂಡಿತ ಇದೆ"[೧]

ವಸಾಹತುಶಾಹಿಯೆಂದರೆ ಬಲಿಷ್ಠವಾದ ಮುಂದುವರಿದ ಸಮಾಜ, ಇಲ್ಲವೇ ಶಕ್ತಿಗಳು ಹಿಂದುಳಿದಿರುವ ರಾಷ್ಟ್ರಗಳು, ವರ್ಣ-ವರ್ಗಗಳ, ದೇಶ-ಭಾಷೆಗಳ, ಗಂಡು-ಹೆಣ್ಣುಗಳ ಮಟ್ಟದಲ್ಲಿ ಏರ್ಪಡುವ ಕ್ರೌರ್ಯ, ಶೋಷಣೆ, ಧಾರ್ಮಿಕ-ಆರ್ಥಿಕ ಬಲತ್ಕಾರ ವಸಾಹತುಶಾಹಿಯ ಆಕ್ರಮಣ ಎರಡು ಬಗೆಯದು. ಒಂದು ಬೌತಿಕ, ಎರಡು ಮಾನಸಿಕ, ಗಾಂಧೀಜಿಯು ವಸಾಹತುಶಾಹಿಯ ಆಕ್ರಮಣವನ್ನು ಅಹಿಂಸೆ, ಧಾರ್ಮಿಕ, ರಾಜಕೀಯ ಹಿನ್ನೆಲೆಗಳಿಂದ ಯಾವ ರೀತಿ ಪ್ರತಿರೋಧಿಸಬಹುದೆಂದು ಚಿಂತಿಸಿದರೆ, ಸಾಹಿತಿಗಳು ಸಾಂಸ್ಕೃತಿಕ ಚಿಂತಕರು, ವಸಾಹತು ಸಂದರ್ಭದ ಸಂವೇದನೆಗಳಿಗೆ ಕಥೆ, ಕಾದಂಬರಿ, ಪ್ರಬಂಧ, ಕಾವ್ಯ ಕಾದಂಬರಿಗಳ ರೂಪದಲ್ಲಿ ಅಭಿವ್ಯಕ್ತಿ ಕೊಡುವುದರ ಮೂಲಕ ಪ್ರತಿರೋಧ ಒಡ್ಡಿದರು.

"ಪತ್ರಿಕೆಗಳಿಗೆ ನಿಯತಕಾಲಿಕವಾಗಿ ಕಥೆಗಳನ್ನು ಬರೆಯುವುದರ ಮೂಲಕ ಜನಪ್ರಿಯರಾಗಿರುವ ಕೇಶವರೆಡ್ಡಿ ಹಂದ್ರಾಳರು 'ಜನಪ್ರಿಯ'ವೆಂಬ ಹಣೆಪಟ್ಟಿಯ ಸೂತ್ರಕ್ಕಿಂತ ಭಿನ್ನವಾದ 'ಗಂಭೀರ' ಕಥಾ ರಚನೆಯ ರೀತಿಯಲ್ಲಿಯೇ 'ಜನಪ್ರಿಯ' ಅಂಶಗಳನ್ನು ರೂಢಿಸಲೆತ್ನಿಸಿದವರು. ಹಂದ್ರಾಳರು ಮೂಲತಃ ಗ್ರಾಮೀಣ ಪರಿಸರ ಸಂವೇದನೆಯಲ್ಲಿ ಬೆಳೆದವರಾದರೂ ಆಮೇಲೆ ಅದಕ್ಕೆ ಆಧುನಿಕ ಸಂವೇದನೆ, ಸಂಕೀರ್ಣತೆ-ಸಿದ್ಧಾಂತಗಳ ಹೊಳಪನ್ನು ಸೇರಿಸಿಕೊಂಡವರು. ಗ್ರಾಮೀಣ ಬದುಕೇ ಅವರ ಬಹುತೇಕ ಕಥೆಗಳ ವಸ್ತುವಾಗಿದ್ದರೂ ಅವರದು ಪ್ರಸಂಗ ಆಧಾರಿತ ಕಥನ ಅಲ್ಲ. ಇದಕ್ಕೆ ಅವರ ಆಧುನಿಕ ಸಂವೇದನೆ, ವಿಸ್ತಾರವಾದ ಅನುಭವ ಮತ್ತು ಸೈದ್ಧಾಂತಿಕ ಚಿಂತನೆಗಳೇ ಮುಖ್ಯ ಕಾರಣ. ಹೀಗಾಗಿ ಈ ತೆರದ ಸಂವೇದನೆ ಮತ್ತು ಅನುಭವಗಳೇ ಅವರ ಕಥಾ ಸಂವಿಧಾನದ ಹಂದರವನ್ನು ನಿರ್ಧಾರಗೊಳಿಸುತ್ತವೆ. ಹಂದ್ರಾಳರ ಬರವಣಿಗೆಯಲ್ಲಿ ಇರುವ ಆಪ್ತತೆ, ಹಾಗೆಯೇ ಅಬ್ಬರ, ಆರ್ಭಟ, ಅಟಾಟೋಪಗಳಿಲ್ಲದೆ ಸಹಜವಾಗಿ ವಸ್ತುಸ್ಥಿತಿಗೆ ಭಂಗ ತಾರದ ನಿರೂಪಣೆ, ಸಿದ್ಧಾಂತ, ಆದರ್ಶಗಳ ಆಶಯಪೂರಕವಾಗಿ ಕಥಾನಕ್ಕೆ ಕಳೆಕಟ್ಟಿವೆ.

ಕಥೆಗಳಿಗೆ ಕಾವ್ಯಾತ್ಮಕ ಚೌಕಟ್ಟನ್ನು ನಿರ್ಮಿಸುತ್ತಾ ಮಾನವೀಯ ಹೃದಯವನ್ನು ಮುಟ್ಟುವುದು ಈ ಕಥೆಗಾರನ ಮುಖ್ಯ ಗುರಿ[31]

ಭೌತಿಕ ಮತ್ತು ಮಾನಸಿಕ ಆಕ್ರಮಣದ ಸ್ವರೂಪಗಳನ್ನು ಕನ್ನಡ ಸಂವೇದನೆಯು ಸ್ವೀಕರಿಸಿದ ಮತ್ತು ನಿರಾಕರಿಸಿದ ನೆಲೆಗಳು ಹಾಗೂ ಅಂತಹ ನೆಲೆಗಳನ್ನು ನಮ್ಮ ಅಗತ್ಯಗಳಿಗೆ ಬೇಕಾಗುವಂತೆ ತಿದ್ದಿ ಮಾರ್ಪಡಿಸಿಕೊಂಡ ಪ್ರಕ್ರಿಯೆಯು ಅನನ್ಯವಾಗಿದೆ. ಅದರಲ್ಲೂ ಗ್ರಾಮೀಣ ಪ್ರದೇಶದ ಪ್ರಕೃತಿಯ ಸಂಪನ್ಮೂಲಗಳ ನಾಶ, ಕೈಗಾರಿಕೀಕರಣದಿಂದುಂಟಾದ ಅರ್ಥ ವ್ಯವಸ್ಥೆ, ಬಂಡವಾಳಶಾಹಿಯ ಪ್ರಾಬಲ್ಯ, ಜಾತಿ, ಮತ, ವರ್ಗ, ವರ್ಣ ಇವುಗಳ ನಡುವೆ ಉಂಟಾದ ಬಿರುಕುಗಳು ನಮ್ಮ ಕನ್ನಡ ಲೇಖಕರ ಮನಸ್ಸುಗಳನ್ನು ತಟ್ಟಿದವು. ಹೀಗಾಗಿ ಅವರು ಗ್ರಾಮೀಣ ಪರಿಸರವನ್ನು ಹಿಡಿದಿಡಲು ಪ್ರಯತ್ನಿಸಿದರು. ಇದು ವಸಾಹತುಶಾಹಿಗೆ ತೋರಿದ ಪ್ರತಿರೋಧವೆಂಬುದುರಲ್ಲಿ ಎರಡು ಮಾತಿಲ್ಲ.

ಹಾಗೆಯೇ ಮಾಸ್ತಿ, ಕುವೆಂಪು, ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರು ಈ ರೀತಿಯ ಗ್ರಾಮೀಣ ಸಂವೇದನಗಳಿಗೆ ಅಭಿವ್ಯಕ್ತಿ ನೀಡಿರುವುದನ್ನು ಗಮನಿಸಬಹುದು. ಕಾರಂತರ 'ಮರಳಿಮಣ್ಣಿಗೆ' ಚಿಗುರಿದ ಕನಸು, ಸ್ವಪ್ನದ ಹೊಳೆ, ಚೋಮನದುಡಿ, ಬೆಟ್ಟದ ಜೀವ ಈ ಕಾದಂಬರಿಗಳಲ್ಲಿ ಬರುವ ಪಾತ್ರಗಳು ಹಳ್ಳಿಗಳ ವಿಶಿಷ್ಟವಾದ ಸುಂದರ ಪರಿಸರದಲ್ಲಿ ನೈಸರ್ಗಿಕ ತಾದಾತ್ಮವನ್ನು ಅನುಭವಿಸುತ್ತವೆ. ವಸಾಹತುಶಾಹಿ ಆಗಮನದಿಂದುಂಟಾದ, ಆಧುನಿಕತೆಯಿಂದಾಗಿ ಉಂಟಾದ ಸಾಮಾಜಿಕ, ಆಥಿಕ, ರಾಜಕೀಯ ಸ್ಥಿತ್ಯಂತರಗಳ ಸಂದರ್ಭದಲ್ಲಿ ಕಳೆದುಹೋಗಿರುವ ಶಾಂತಿ ನೆಮ್ಮದಿಯ ಜೀವನವನ್ನು ಕಂಡುಕೊಳ್ಳುವ ಪ್ರಯತ್ನ ಈ ಕೃತಿಗಳಲ್ಲಿದೆ. ಗ್ರಾಮೀಣ ಜೀವನದ ಆರ್ಥಿಕ ಸ್ಥಿತಿಗತಿಗಳು, ಸಾಮಾಜಿಕ ಪರಿಸ್ಥಿತಿಗಳು, ರಾಜಕೀಯ ಹಾಗೂ ಸಾಮಾಜಿಕ ಸಮಸ್ಯೆಗಳೆಲ್ಲವನ್ನು ವಸಾಹತುಶಾಹಿಗೆ ಪ್ರತಿರೋಧ ವ್ಯಕ್ತಪಡಿಸುವ ರೀತಿಯಲ್ಲಿ ಅನಾವರಣಗೊಳಿಸುತ್ತಾರೆ. ಹಾಗೆಯೇ ಕುವೆಂಪು ಅವರೂ ಸಹ 'ಮಲೆಗಳಲ್ಲಿ ಮದುಮಗಳು', 'ಕಾನೂರು ಹೆಗ್ಗಡತಿ', ಮಲೆನಾಡಿನ ಚಿತ್ರಗಳು ಮತ್ತು ಸಣ್ಣಕಥೆಗಳಲ್ಲಿ ವಸಾಹತುಶಾಹಿಯ ಸಂದರ್ಭದ ಗ್ರಾಮೀಣ ಸಮಾಜದ ಸ್ಥಿತ್ಯಂತರಗಳನ್ನು ಕಟ್ಟಿಕೊಡುತ್ತಾರೆ. ಈ ಮೂಲಕ ವಸಾಹತುಶಾಹಿಗೆ ಪ್ರತಿರೋಧವನ್ನು ಒಡ್ಡುತ್ತಾರೆ.

ಹಂದ್ರಾಳರ 'ಹಾರುತಿಹುದು ಏರುತಿಹುದು ನೋಡು ನಮ್ಮ ಬಾವುಟ'ವು ಸ್ವಾತಂತ್ರ್ಯ ಕತೆಯಲ್ಲಿ ಬರುವ ಭಾರತ ಗ್ರಾಮೀಣ ಬದುಕು ಸ್ವಾತಂತ್ರ್ಯ ಬಂದ ನಂತರ ಪಡೆದಿರುವ ವಿಕಾರ ರೂಪದ ನೈಜವರ್ಣನೆ, ಮೂಡಿ ಬಂದಿರುವ ವಿಧಾನವನ್ನು ಕಂಡು ಕತೆಗಾರನ ಮೇಲೆ ಅಭಿಮಾನ ಮೂಡಿದೆ. ಗ್ರಾಮೀಣ ಭಾರತದಿಂದ ಬಂದ, ಸ್ವಾತಂತ್ರ್ಯ ನಂತರ ಭಾರತದ ನೈತಿಕ ನೆಲೆಗಟ್ಟು ಬಿರುಕು ಬಿಡುತ್ತಿರುವುದನ್ನು ಅತೀ ಸೂಕ್ಷ್ಮವಾಗಿ ಗಮನಿಸಲಾಗಿದೆ. ಹಂದ್ರಾಳಗಿರುವ ಭಾರತದ ಭವಿಷ್ಯದ ಬಗೆಗೆ ಇರುವ ಕಳಕಳಿಯು ಈ ಕತೆಯಿಂದ ವ್ಯಕ್ತವಾಗುತ್ತದೆ.

"ಸ್ವತಂತ್ರ ಭಾರತದ ಎಪ್ಪತ್ತೂ ಕೋಟಿಗೂ ಮೀರಿದ ಮಹಾ ಸತ್ಪ್ರಜೆಗಳೇ, ಸ್ವಾತಂತ್ರ್ಯದ ಆಚರಣೆಯ ಗುಂಗಿನಲ್ಲಿರುವ ನಿಮಗೆ ರಾಮನೆಂಬ ಪಾಪದ ಹುಡುಗನೊಬ್ಬನ ಕತೆಯನ್ನು ಹೇಳುತ್ತೇನೆ ಕೇಳಿ, ನನ್ನ ರಾಮ

ತ್ರೇತಾಯುಗದ ಶ್ರೀರಾಮಚಂದ್ರನ ಬಾಲ್ಯಾವಸ್ಥೆಯ ಅಪರಾವತಾರವೇನೂ ಅಲ್ಲ, ಅಥವಾ ಇಥೋಪಿಯಾದ ಭೀಕರ ಕ್ಷಾಮದ ಹಲ್ಲುಗಳಿಗೆ ಸಿಕ್ಕಿಕೊಂಡ ಹುಡುಗನೂ ಅಲ್ಲ, ಏಕೆಂದರೆ ಇಲ್ಲಿ ತಪಸ್ಸಿನಿಂದಲೋ, ಯೋಗದಿಂದಲೋ ಮಳೆ ತರಿಸುವ, ಕೆರೆ ಕಾಲುವೆಗಳನ್ನು ತುಂಬಿಸುವ ಮಹಾಯತಿಗಳಿದ್ದಾರೆ, ತಪಸ್ವಿಗಳಿದ್ದಾರೆ. ಅವರನ್ನು ಬೆಂಬಲಿಸುವ ಮಹಾನಾಯಕರುಗಳಿದ್ದಾರೆ. ಗಾಂಧಿ ಪೋಟೋದ ಹಿಂದೆ ಸಾರಾಯಿ ಬಾಟಲಿ, ಕೊಡಲಿ ಮಚ್ಚುಗಳನ್ನು ಬಚ್ಚಿಟ್ಟು 'ಶಾಂತಿ'ಯ ಬಗ್ಗೆ ಭಾಷಣ ಮಾಡುವ, ರಾತ್ರಿಯಲ್ಲಿ ಅತ್ಯಾಚಾರಗಳನ್ನು ಮಾಡುತ್ತಾ ಅದನ್ನು ಹಗಲು ಪತ್ರಿಕೆಗಳಲ್ಲಿ ಖಂಡಿಸುವ, ದಾರಿದ್ರ್ಯ, ನಿರುದ್ಯೋಗ, ಲಂಚಗುಳಿತನಗಳನ್ನು ಉಗ್ರವಾಗಿ ಟೀಕಿಸುತ್ತಾ ಐಷಾರಾಮ ಜೀವನದಲ್ಲಿ ಓಲಾಡುವ ಜನರಿರುವ ಈ ಪುಣ್ಯಭೂಮಿಯ ಅತ್ಯಂತ ಸಾಮಾನ್ಯ ಆದರೂ ಅಪರೂಪದ ಹುಡುಗ ನನ್ನ ರಾಮ. ರಾಮನ ಕತೆಯನ್ನು ಒಂದು ಹಂತದಿಂದ ಶುರು ಮಾಡುತ್ತೇನೆ. ಕೇಳುವಂತಹರಾಗಿ ನನ್ನ ಸ್ವತಂತ್ರ ಭಾರತದ ಪ್ರಜೆಗಳೇ"೩ ಹಂದ್ರಾಳರು ಈಗಿನ ಸಮಾಜವನ್ನು ಹೇಳುತ್ತಾ ಹೋಗುತ್ತಾರೆ. ಸ್ವಾತಂತ್ರ ಬಂದರೂ ಸಹ ಅನೇಕ ಜನಗಳಿಗೆ ಸ್ವಾತಂತ್ರ್ಯದ ಬೆಳಕು ಸಹ ಅವರಿಗೆ ಬಿದ್ದಿರುವುದಿಲ್ಲ. ನೀಚ ಸಮಾಜದಲ್ಲಿ ದರ್ಪಗಾರಿಕೆ, ಮೋಸಗಾರಿಕೆಗಳು ತಾಂಡವವಾಡುತ್ತವೆ. ಬಡವರು, ನಿರ್ಗತಿಕರು ಸಮಾಜದಲ್ಲಿ ಬದುಕುವುದಕ್ಕೆ ಬಿಡುತ್ತಿಲ್ಲಾ, ಗಾಂಧಿ ಕೊಟ್ಟ ಸ್ವಾತಂತ್ರ್ಯ ಇಂದು ಬಡವರಿಗೆ ದಕ್ಕುತ್ತಿಲ್ಲವೆನ್ನುವುದು ಹಂದ್ರಾಳರ ಈ ಕತೆಯ ಮೂಲಕ ವ್ಯಕ್ತವಾಗುತ್ತದೆ.

ಸ್ವಾತಂತ್ರ್ಯ ಬಂದ ನಂತರ ತಮ್ಮ ಬದುಕೆಲ್ಲಾ ಸಲೀಸಾಗಿ, ಉಸಿರಾಡಿ ಹೊಟ್ಟೆ ತುಂಬಾ ಉಂಡು, ಮಾನ ಮುಚ್ಚಿಕೊಳ್ಳಲು ಬೇಕಷ್ಟು ಬಟ್ಟೆ, ಲೋಕ ತಿಳಿಯಲು ನಾಲ್ಕಕ್ಷರ ಕಲಿತು ಇಡೀ ಲೋಕದ ಇತರ ಜನರೆಲ್ಲ ಬಾಯಿಮೇಲೆ ಕೈ ಮಡಗಿಕೊಳ್ಳುವಂತೆ ಬದುಕಬಹುದೆಂದು ಕನಸು ಕಂಡಿದ್ದರು. ಆದರೆ ಆದದ್ದೇ ಬೇರೆ! ಸ್ವಾತಂತ್ರ್ಯದ ನೇಕಾರ ಬಡಕಲು ಮೈಯ, ಅರೇ ಮುಚ್ಚಿಕೊಂಡ ಗಾಂಧೀಜಿಯವರಂತೆಯೇ ನಮ್ಮ ಜನರ ಬದುಕು ವಿಷಮಗೊಂಡಿದೆ.

"ರಾಮನಿಗೆ ಧ್ವಜವನ್ನು ಕಂಡರೆ ಎಲ್ಲಿಲ್ಲದ ಹುಚ್ಚು ಪ್ರೀತಿ, ತರಗತಿಯಲ್ಲಿ ಇತಿಹಾಸದ ಮಾಸ್ತರು ಸ್ವಾತಂತ್ರ್ಯದ ಕತೆಗಳನ್ನು ರಸವತ್ತಾಗಿ ಹೇಳುತ್ತಿದ್ದರೆ, ರಾಮ ರೋಮಾಂಚನಗೊಳ್ಳುತ್ತಿದ್ದ, ಭಗತ್‌ಸಿಂಗ್, ರಾಜ್‌ಗುರು, ಸುಖ್‌ದೇವ್ ಮುಂತಾದ ಯುವ ವೀರರು ಬ್ರಿಟೀಷರಿಗೆ ಕೊಟ್ಟ ಕಿರುಕುಳ, ಎಳೆ ವಯಸ್ಸಿನಲ್ಲಿಯೇ ದೇಶಕ್ಕಾಗಿ ಅವರು ಮಾಡಿದ ಪ್ರಾಣತ್ಯಾಗ ಇತ್ಯಾದಿ ರಾಮನಲ್ಲಿ ರಕ್ತ ಕುದಿಸುತ್ತಿತ್ತು. ಆ ಕಾಲದಲ್ಲಿ ಹುಟ್ಟಿದ್ದರೆ ತಾನೂ ಕೂಡ ಬ್ರಿಟೀಷರಿಗೆ ಆ ರೀತಿ ಮಾಡಬಹುದಾಗಿತ್ತು ಎಂದು ಕೈಕೈ ಹಿಸುಕಿಕೊಳ್ಳುತ್ತಿದ್ದ ಸುಭಾಷ್‌ಚಂದ್ರಬೋಸ್, ಮಹಾತ್ಮಗಾಂಧೀ, ತಿಲಕ್ ಮುಂತಾದವರ ಸಾಹಸಗಳನ್ನು ಕೇಳಿ ಪುಳಕಿತನಾಗಿದ್ದ. ಭಾರತದ ಈ ತ್ರಿವರ್ಣ ಧ್ವಜ ಹಾರಾಡಬೇಕಾದರೆ ಎಷ್ಟು ಜನ ಪ್ರಾಣತ್ಯಾಗ ಮಾಡಿದ್ದಾರೆ ಎನ್ನುವ ಅರಿವು ಪುಟ್ಟರಾಮನ ಹೃದಯಕ್ಕೆ ಬಂದಿತ್ತು. ಆದ್ದರಿಂದಲೇ ಅವನಿಗೆ ಧ್ವಜವನ್ನು ಕಂಡರೆ ಎಲ್ಲಿಲ್ಲದ ಪ್ರಾಣ, ದನಗಳನ್ನು ಮೇಯಿಸಲು ಹೋದಾಗಲೋ, ಕಟ್ಟೆಗೆ ಹೋದಾಗಲೋ ರಾಮ ತನ್ನ ಗೆಳೆಯರೊಡನೆ ಸ್ವತಂತ್ರದ ಸಾಹಸ ನಾಟಕಗಳನ್ನು ಆಡುತ್ತಿದ್ದ. ತಾನು ಭಗತ್‌ಸಿಂಗ್‌ನಾಗಿಯೋ, ಸುಭಾಷ್‌ಚಂದ್ರಬೋಸ್ ಆಗಿಯೋ ಪಾತ್ರಗಳನ್ನು ಕಟ್ಟುತ್ತಿದ್ದ. ಎಷ್ಟೋ ಸಾರಿ ಸ್ವತಂತ್ರದ ಘೋರ ಕನಸುಗಳು ರಾಮನಿಗೆ ಬಿದ್ದದ್ದುಂಟು.

ರಾಮ ಕನಸುಗಳಲ್ಲಿ ಬ್ರಿಟೀಷರ ಗುಂಡಿಗೆ ಬಲಿಯಾಗಿದ್ದುಂಟು. ಅಂತಹ ಕನಸುಗಳು ತನಗೆ ಮತ್ತೆ ಮತ್ತೆ ಬೀಳಲೆಂದು ರಾಮ ಆಶಿಸುತ್ತಿದ್ದ" ಹೀಗೆ ರಾಮನಿಗೆ ದೇಶದ ಮೇಲೆ ಅಭಿಮಾನ ಹೆಚ್ಚಾಗಿತ್ತು. ಅನ್ಯಾಯವನ್ನು ಪ್ರತಿಭಟಿಸುತ್ತಿದ್ದ, ಚಿಕ್ಕವನಾಗಿದ್ದರೂ ಅವನಿಗೆ ಇದ್ದ ದೇಶದ ಮೇಲೆ ಹಾಗೂ ಬಾವುಟದ ಮೇಲೆ ಆಗಾಧವಾದ ಅಭಿಮಾನ ಇಟ್ಟುಕೊಂಡಿದ್ದನು. ಸ್ವಾತಂತ್ರ್ಯ ದಿನಾಚರಣೆಯಲ್ಲಿ ರಾಮನು ಪಾಲ್ಗೊಂಡು ದೇಶಕ್ಕೆ ಹಾಗೂ ಬಾವುಟಕ್ಕೆ ಮರ್ಯಾದೆಯನ್ನು ನೀಡಬೇಕೆಂದು ಬಹಳ ಉತ್ಸುಕತೆಯಿಂದ ಇದ್ದನು.

ಜನನಾಯಕನನ್ನು ಕೊಂದ ಕೈಗಳೇ ಜನರನ್ನು ಹಂತವಗಿ ಕತ್ತುಹಿಸುಕಿ, ಹಿಂಸಿಸಿ ಕೊಲ್ಲುತ್ತಿದ್ದಾರೆ. ನಮ್ಮ ಈ ದೊಡ್ಡ ರಾಷ್ಟ್ರದ ಭವ್ಯತೆಯ ಸಂಕೇತವಾದ ತ್ರಿವರ್ಣ ರಂಜಿತ ಭಾವುಟದೊಳಗಿನ ಅಶೋಕನ ಧರ್ಮಚಕ್ರವೂ ಬಿಕ್ಕಳಿಸಿ ಬಿಕ್ಕಳಿಸಿ ಶೋಕಿಸುವಂತೆ ರಾಷ್ಟ್ರದ ಅಂತಃಸತ್ವವನ್ನು ಬರಿದು ಮಾಡುವ ಆಳುವವರ ಕೈಗಳಿಗೆ ಸುಸ್ತೇ ಇಲ್ಲ. ನಯವಂಚಕರ ದಂಡೇ ದಿನದಿನಕ್ಕೆ ಹೊಸ ಹೊಸ ರೂಪಗಳನ್ನು ತಾಳುತ್ತಾ ಮೆರೆಯತೊಡಗಿವೆ. ಈ ಜನರ ಅಟ್ಟಹಾಸದ ಮುಂದೆ ಅಸಹಾಯಕರ, ಅಶಕ್ತರ ಕಣ್ಣೀರು ಬಂಜೆಯಾಗಿದೆ. ಸ್ವಾತಂತ್ರ್ಯ ಪೂರ್ವದಲ್ಲಿ ಅನಾವಶ್ಯಕವಾಗಿ ಅಸಹಾಯಕರ ಕಣ್ಣೀರನ್ನು ಕೆಡವಲು ಜನ ಕೊಂಚ ಹಿಂದುಮುಂದು ನೋಡುತ್ತಿದ್ದರು. ಆದರೆ ಈಗ ಅಶಕ್ತರ ಮೇಲೆ ನಡೆಸಲು ದೈವ ಹಾಗೂ ಪ್ರಭುತ್ವ ಸಾತ್ವಿಕ ಹಕ್ಕನ್ನೇ ನೀಡಿದೆ ಎನ್ನುವಂತೆ ಲಜ್ಜಾಹೀನರಾಗಿ ನಡೆದುಕೊಳ್ಳುತ್ತಿದ್ದಾರೆ.

"ಬಡ್ಡಿ ಮಗ್ನೆ ಸ್ವಾತಂತ್ರದ ದಿನವೇ ಕಳ್ಳತನ ಮಾಡಿದ್ದೀಯ, ಇಸ್ಕೋಲ್ಗೆ ಕೆಟ್ಟೆಸ್ರು ತಂದ್‌ಬಿಟ್ಟೆ ದೊಡ್ಡ ಮನಸ್ರ ಎದುರ್‌ನಾಗೆ, ಕಳ್ಳತನ ಮಾಡ್‌ಬಾರ್ದು ಅಂತ ಗಾಂಧಿತಾತ ಹೇಳಿರ್ಲಿಲ್ವೆ? ಹೋಗು ಮೊದ್ಲು ಯೂನಿಫಾರಂ ಬಿಚ್ಚಿ ತಂದ್‌ಕೊಡು" ಎಂದು ಅಬ್ಬರಿಸಿದರು.

"ಯಾರ್ರೀ ಅವ್ನು, ಅನಿಷ್ಟ" ತಾಲ್ಲೂಕ್ ಬೋರ್ಡ್ ಪ್ರೆಸಿಡೆಂಟರು ಗುಡುಗಿದರು.

"ತಪ್ಪಾಯ್ತು ಸಾ. ಪ್ರಾರ್ಥನೆ ಆಗ್ತಾಲೇ ವಾಪಸ್ಸು ಕೊಡ್ತೀನಿ" ತೊದಲಿದ ರಾಮ

"ಎಷ್ಟು ಧೈರ್ಯ ಮೇಷ್ಟ್ರೆ ಕಳ್‌ಬಡ್ಡಿ ಹೈದ್ನ್‌ಗೆ , ಒಂದ್ ಒದಿರಿ. ತನ್ನ ಮಗನ ಬಟ್ಟೆ ಕದ್ದಿದ್ದರಿಂದ ಕೋಪಗೊಂಡಿದ್ದ ಗೌಡರು ಬಿರುಸಾಗಿ ನುಡಿದರು. ಹೆಡ್‌ಮಾಸ್ತರು ರಾಮನನ್ನು ಹಿಡಿದು ಬಲವಾಗಿ ಪಕ್ಕಕ್ಕೆ ನೂಕಿದರು. ರಾಮ ರಭಸದಿಂದ ನೆಲಕ್ಕೆ ಬಿದ್ದ, ಕೈಕಾಲು ಪರಚಿ ಹೋಗಿ ಒಂದಿಷ್ಟು ರಕ್ತ ಬಂದಿತ್ತು. ರಾಮನ ಕಣ್ಣುಗಳು ನೀರಾಡಿದವು.

"ಸಂಕರಜ್ಜಿಯ ಮಗಳು ಚೆಲುವಿಯ ಮೇಲೆ ಹೆಡ್‌ಮಾಸ್ತರು ಹಾಗೂ ತಾಲ್ಲೂಕ್ ಬೋರ್ಡ್ ಪ್ರೆಸಿಡೆಂಟರು ಆಕ್ರಮಣ ನಡೆಸಿದ್ದರು, ಚೆಲುವಿ ರೋಧಿಸುತ್ತಾ ಬಿಡಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಳು. ಇಬ್ಬರು ಗಂಡಸರ ಬಲದ ಮುಂದೆ ಒಂಟಿ ಹೆಣ್ಣಿನ ಬಲವೆ? ರಾತ್ರಿ ಒಂಭತ್ತರಲ್ಲಿ ಸಂಕರಜ್ಜಿ "ಚೆಲುವಿ ಪುರವರಕ್ಕೆ ಅಂತ ಹೋದೋಳು ಇನ್ನೂ ಬರ್ಲಿಲ್ಲ, ಅವಳಕ್ಕನ ಮನೇಲೇನಾದ್ರೂ ಉಳ್ಕೊಂಡ್ಲೊ ಏನೋ" ಎಂದಿದ್ದಳು. ಅದಕ್ಕೆ ತನ್ನ ಅವ್ವ "ಇರ್ಬೋದು ಬಿಡು, ನೀ ಉಂಡು ಮಲ್ಗು, ಬೆಳಿಗ್ಗೆ ಬಂದಾಳು" ಎಂದಿದ್ದಳು. ಚೆಲುವಿಯನ್ನು ಕಾಪಾಡಬೇಕು, ಹೆಡ್‌ಮಾಸ್ತರು ಮತ್ತು ಪ್ರೆಸಿಡೆಂಟರು ಬಿಳಿದೊಗಲಿನ ದೊರೆಗಳಂತೆ ಕಂಡು

ಬಂದರು ರಾಮನ ಕಣ್ಣುಗಳಿಗೆ ಸುತ್ತಮುತ್ತ ನೋಡಿದ ಏನೂ ಕಾಣಲಿಲ್ಲ. ಬಿದುರುಗಳುವಿನ ಮೇಲೆ ಧ್ವಜ ಹಾರಾಡುತ್ತಿತ್ತು. ತನ್ನ ಬಲವನ್ನೆಲ್ಲ ಬಿಟ್ಟು ಗಳುವನ್ನು ಕಿತ್ತ. ಧ್ವಜ ಕೈಗೆ ಬಂದಿತ್ತು. ಶಾಲೆಯ ಹಿಂದಕ್ಕೆ ನಡೆದ ಕಿಟಕಿಯ ಬಾಗಿಲು ತೆರೆದಿತ್ತು. ತನ್ನ ಶಕ್ತಿಯನ್ನೆಲ್ಲ ಉಪಯೋಗಿಸಿ ಬಿದುರುಗಳುವಿನಿಂದ ಪ್ರೆಸಿಡೆಂಟರ ಕಣ್ಣಿಗೆ ಗುರಿಯಿಟ್ಟು ತಿವಿದ. ಕಣ್ಣುಗುಡ್ಡೆ ಹೊರಕ್ಕೆ ಬಂತು. "ನಾಸತ್ತೆ" ಎಂದು ಕಿರುಚಿದ ಪ್ರೆಸಿಡೆಂಟರು ಚೆಲುವಿಯನ್ನು ಬಿಟ್ಟರು. ಹೆಡ್‌ಮಾಸ್ತರು ಬೆಕ್ಕಸಬೆರಗಾಗಿ ಕಿಟಕಿಯ ಕಡೆ ನೋಡಿದರು"[೫]

ಈ ಕತೆಯಲ್ಲಿ ಬರುವ ರಾಮನ ಚಿತ್ರಣ ಈ ಮುಗ್ಧ ರಾಮನನ್ನು ಹೈಸ್ಕೂಲ್‌ನ ಹೆಡ್‌ಮಾಸ್ತರ್ ನಾಗಯ್ಯ ನಡೆಸಿ ಕೊಳ್ಳುವ ರೀತಿ ರಾಮನ ಮೇಲೆ ದಟ್ಟವಾದ ಪರಿಣಾಮವು ಬೀರಿದೆ. ಯೂನಿಫಾರಂ ಪಡೆದುಕೊಳ್ಳಲು ರಾಮನ ಬಯಕೆ ಮಣ್ಣಾಗುತ್ತದೆ. ಬಡತನ ಅನ್ನುವುದು ಕಾಣುತ್ತದೆ. ಮೇಲ್ವರ್ಗದವರ ದಬ್ಬಾಳಿಕೆ, ಶೋಷಣೆ, ಮುಗ್ಧರಾಮ ಯೂನಿಫಾರಂ ಪ್ರಸಂಗವು ಕತೆಯಲ್ಲಿ ಸ್ಪಷ್ಟವಾಗಿ ರೂಪುಗೊಂಡಿದೆ. ರಾಮುವಿಗೆ ಆಕ್ರೋಶ ಭುಗಿಲೆದ್ದು ಸಂಕರಜ್ಜಿಯ ಮಗಳು ಚೆಲುವಿಯ ಮೇಲೆ ಹೆಡ್‌ಮಾಸ್ತರ್ ಮತ್ತು ತಾಲ್ಲೂಕು ಬೋರ್ಡ್ ಪ್ರೆಸಿಡೆಂಟರು ಅವಳನ್ನು ಅತ್ಯಾಚಾರವೆಸಗುತ್ತಿದ್ದರ ವಿರುದ್ಧ ಧ್ವಜದ ಕಂಬಕಿತ್ತು ಪ್ರೆಸಿಡೆಂಟರಿಗೆ ಹೊಡೆಯುವುದು ಹಾಗೂ ಪ್ರತಿಭಟಿಸುವ ಗುಣವನ್ನು ಈ ಕತೆಯಲ್ಲಿ ಕಾಣಲಾಗುತ್ತದೆ.

ಬಡ ಜನಾಂಗದಲ್ಲಿ ಜನ್ಮವೆತ್ತಿದ ಏಕೈಕ ತಮ್ಮದಲ್ಲದ ತಪ್ಪಿಗಾಗಿ ಮಹಿಳೆಯರು, ಪುರುಷರ, ಮಕ್ಕಳು ಸಮ ಸಮವಾಗಿಯೇ ದಬ್ಬಾಳಿಕೆ ಸದ್ದಿಲ್ಲದೇ ಮೈಮನಗಳನ್ನು ಒಡ್ಡಿ ವಿಲವಿಲ ಒದ್ದಾಡುತ್ತಿದ್ದಾರೆ. ಒಮೊಮ್ಮೆ ಇವರು ಪ್ರತಿಭಟಿಸಿದರೂ ಈ ಪ್ರತಿಭಟನೆ ಎಲ್ಲೋ ಒಮ್ಮೊಮ್ಮೆ ಒಂದು ಸುದ್ದಿಯಾಗಿ, ಒಂದಿಷ್ಟು ದಿನಗಳು ಕುತೂಹಲಕಾರಿ ಮನಸ್ಸುಗಳನ್ನು ತಟ್ಟಿ ಸುಮ್ಮನಾಗಿಬಿಡುತ್ತದೆ. ಒಂಟಿಹುಲ್ಲಿನ ಮೆದೆಗೆ ಬೆಂಕಿ ಬಿದ್ದು ಬೆಂದು ಹೋದ ಹಾಗೆ ಕತೆಯು ನಿಲ್ಲುತ್ತದೆ.

ಮಾಸ್ತಿ, ಕುವೆಂಪು, ಕಾರಂತರು ಕಥೆ, ಕಾದಂಬರಿಗಳ ಮೂಲಕ ವಸಾಹತು ಸಂದರ್ಭದ ಗ್ರಾಮೀಣ ಸ್ಥಿತ್ಯಂತರಗಳನ್ನು ಅನಾವರಣಗೊಳಿಸಿ ವಸಾಹತುಶಾಹಿಗೆ ಪ್ರತಿರೋಧ ಒಡ್ಡಿದರೆ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಪ್ರಬಂಧಗಳ ಮೂಲಕ ಹಳ್ಳಿಚಿತ್ರಗಳನ್ನು ಕಟ್ಟಿಕೊಡುವುದರ ಮೂಲಕ ಪ್ರತಿರೋಧವನ್ನು ಒಡ್ಡುತ್ತಾರೆ. ಗೊರೂರರ 'ನಮ್ಮ ಊರಿನ ರಸಿಕರು' ಹಳ್ಳಿಚಿತ್ರಗಳು, ಪೂರ್ಣವಾಗಿ ಗ್ರಾಮವನ್ನು ಕುರಿತ ಚಿತ್ರಗಳೇ ಆಗಿವೆ. ಕುವೆಂಪು ಅವರ 'ಮಲೆನಾಡಿ ಚಿತ್ರಗಳು'ವಿನಂತೆ ಈ ಬರಹಗಳು ಆಯಾ ಗ್ರಾಮದ ಜನತೆ, ಹೊಲಗದ್ದೆ, ಪೈರು, ದೇವಾಲಯಗಳು, ಸುಂದರವಾದ ಬದುಕು ಇವೆಲ್ಲವನ್ನು ಹೇಳುತ್ತಾ ವಸಾಹತುಶಾಹಿಯ ಆಕ್ರಮಣಿಕೆಯ ಸ್ವರೂಪವನ್ನು, ಅದರ ಕ್ರೌರ್ಯವನ್ನು ಬಯಲು ಮಾಡುತ್ತಾ ಹೋಗುತ್ತದೆ. ಇದೇ ರೀತಿ ಕೇಶವರೆಡ್ಡಿಯವರು ಹಳ್ಳಿಯ ಜನರ ಬದುಕು ಬವಣೆ, ಜೀವನೋತ್ಸಾಹಗಳ ಮೂಲಕ ಸಾಮಾಜಿಕ, ಆರ್ಥಿಕ, ರಾಜಕೀಯ ಸ್ಥಿತ್ಯಂತರಗಳನ್ನು ಅನಾವರಣಗೊಳಿಸುತ್ತಾ, ಜಾಗತೀಕರಣಕ್ಕೆ ಪ್ರತಿರೋಧವನ್ನು ಒಡ್ಡುವ ಬಗ್ಗೆ ಯೋಚಿಸುವಂತೆ ಮಾಡುತ್ತದೆ.

ಹಂದ್ರಾಳ 'ಮೋಡಿ' ಕತೆಯಲ್ಲಿ ಗ್ರಾಮೀಣ ಪರಿಸರ ಹಾಗೂ ಗ್ರಾಮಸಂಸ್ಕೃತಿಯು ನಮಗೆ ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದಾರೆ. ಇಲ್ಲಿ ಕುರಿ ಕಾಯುವವನ ಚಿತ್ರಣ ಕಂಡುಬರುತ್ತದೆ. ಗ್ರಾಮ ಸಂಸ್ಕೃತಿಯ ನೈಜತೆಯು

ಬಜ್ಜಿರಾಗನ ಮುಖಾಂತರ ಸಿಗುತ್ತದೆ. "ಸರಿಸುಮಾರು ಮೂವತ್ತು ವರ್ಷಗಳ ಹಿಂದಿನ ಮಾತು, ನಾನಾಗ ನಮ್ಮೂರ ಪ್ರೈಮರಿ ಶಾಲೆಯಲ್ಲಿ ಓದುತ್ತಿದ್ದೆ. ಊರಿಗೆ ಫರ್ಲಾಂಗು ದೂರದ ಸ್ಕೂಲಿನ ಬಲಗಡೆ ಹತ್ತಾರು ಮೀಟರ್ ದೂರಕ್ಕೆ ಊರ ದೇವರಾದ ರಂಗನಾಥಸ್ವಾಮಿ ದೇವಾಲಯವಿದ್ದರೆ, ಎಡಗಡೆ ಅಷ್ಟೇ ದೂರದಲ್ಲಿ ಕುರಿಯ ಕೊಪ್ಪಗಳು, ನಮ್ಮ ಶಾಲೆಗೂ ಈ ಕುರಿಯ ಕೊಪ್ಪಗಳಿಗೂ ಅನ್ಯೋನ್ಯ ಸಂಬಂಧವಿತ್ತು. ಬೆಳಿಗ್ಗೆ ಹತ್ತುಗಂಟೆಗೆ ನಾವೆಲ್ಲ "ಹೋ" ಎಂದು ಶಾಲೆ ಹೊಕ್ಕರೆ, ಕುರಿಗಳು "ಬ್ಯಾ" ಎಂದು ಕುರಿಕೊಪ್ಪಗಳನ್ನು ಬಿಟ್ಟು ಮೇಯಲು ಬಯಲಿಗೆ ತೆರಳುತ್ತಿದ್ದವು. ನಾವು ಶಾಲೆಯಲ್ಲಿ ಗಲಾಟೆ ಮಾಡುತ್ತಿದ್ದರೆ ಮೇಷ್ಟ್ರುಗಳು "ಗಲಾಟೆ ನಿಲ್ಲಿಸ್ರೊ ಕುರಿಗಳ" ಎಂದು ಬೈಯ್ಯುತ್ತಿದ್ದರು. ಮಳೆಗಾಲದಲ್ಲಿ ಒಮ್ಮೊಮ್ಮೆ ಜೋರು ಮಳೆ ಬಂತೆಂದರೆ ಸ್ಕೂಲು ಸೋರಲು ಶುರು ಮಾಡುತ್ತಿತ್ತು. ಆಗ ಮೇಷ್ಟ್ರುಗಳು ಒಂದೊಂದು ತರಗತಿಯವರನ್ನು ಒಂದೊಂದು ಕುರಿಯ ರೊಪ್ಪಕ್ಕೆ ಕರೆದುಕೊಂಡು ಹೋಗುತ್ತಿದ್ದರು. ಯಾವ ಕುರಿಯ ರೊಪ್ಪವೂ ಸೋರುತ್ತಿರಲಿಲ್ಲ. ಒಮ್ಮೊಮ್ಮೆ ಅಂತಹ ಸಮಯಗಳಲ್ಲಿ ನಾವು ರೊಪ್ಪಗಳಲ್ಲಿರುವಂತೆಯೇ ಮೇಯಲು ಹೋಗಿದ್ದ ಕುರಿಗಳೂ ಬಂದು ಸೇರಿ ಬಿಡುತ್ತಿದ್ದವು. ಕುರಿಗಳಿಗೆ ಸ್ಕೂಲು ಹುಡುಗರನ್ನು ಕಂಡರೆ ಭಯವಿರಲಿಲ್ಲ. ಅವುಗಳಿಗೆ ನಮ್ಮೆಲ್ಲರ ಪರಿಚಯವಿತ್ತು. ಮೇಷ್ಟ್ರುಗಳನ್ನು ಸೇರಿಸಿಕೊಂಡು!"[೬] ಮಳೆ ಬಂದರೆ ಗ್ರಾಮೀಣ ಪ್ರದೇಶಗಳಲ್ಲಿ ಯಾವ ರೀತಿ ಇರುತ್ತದೆಂದೂ ತಿಳಿಯಬಹುದು. ಕುರಿಗಳಿಗೂ ಹಾಗೂ ವಿದ್ಯಾರ್ಥಿಗಳಿಗೂ ಯಾವುದೇ ರೀತಿಯ ವ್ಯತ್ಯಾಸವಿರುವುದಿಲ್ಲ. ಮಳೆ ಬಂದಾಗ ಕುರಿಗಳು, ವಿದ್ಯಾರ್ಥಿಗಳು ಒಟ್ಟಿಗೆ ಸೇರುವಂತಹದು ನೋಡಬಹುದು. ಮಳೆ ಬಂದರೆ ತರಗತಿಗಳು ಸಹ ನಡೆಯುತ್ತಿರಲಿಲ್ಲ.

ಗ್ರಾಮಗಳಲ್ಲಿನ ಜೀವನ ಪದ್ಧತಿಯು ಸಾಮಾಜಿಕ ಸಮೈಕ್ಯತೆಯಿಂದ ಕೂಡಿರುವಂತಹದ್ದು. ಅಲ್ಲಿನ ಬದುಕು ಸರಳ ಮತ್ತು ನಿಷ್ಕಪಟ. ಅಡ್ಡಿ ಆತಂಕಗಳಿಲ್ಲದೆ ಸುಲಲಿತವಾಗಿ ಸಾಗುವಂತಹದ್ದು. ಏಕತೆ ಮತ್ತು ಐಕ್ಯತೆ ಈ ಬದುಕಿನಲ್ಲಿರುತ್ತವೆ. ಆಚಾರ ವಿಚಾರಗಳು, ನೈತಿಕ ನಿಯಮಗಳು, ಮತಧರ್ಮ, ನೀತಿ, ರೂಢಿ, ಸಂಪ್ರದಾಯಗಳು, ನಂಬಿಕೆ, ಆಚರಣೆಗಳು ಒಂದು ಗ್ರಾಮದಲ್ಲಿ ಮೇಲುನೋಟಕ್ಕೆ ಬೇರೆ ಬೇರೆಯೆನಿಸಿದರೂ ಆಂತರ್ಯದಲ್ಲಿ ಸಹಮತವನ್ನು ಹೊಂದಿರುತ್ತವೆ. "ನಾವು ಕೂಡ ಸರಿಯಾಗಿ ಓದದ ಪಕ್ಷದಲ್ಲಿ ಕುರಿಕಾಯಲೋ, ದನ ಮೇಯಿಸಲೋ ಲಾಯಕ್ಕಾಗುತ್ತೇವೆಂದು ಮೇಷ್ಟ್ರುಗಳು ಸದಾ ಎಚ್ಚರಿಸುತ್ತಿದ್ದರೂ, ಮುಕ್ಕಾಲು ಪಾಲು ಹುಡಗರಿಗೆ ಸ್ಕೂಲಿನಲ್ಲಿ ಓದುವುದಕ್ಕಿಂತ ಕುರಿಯೋ, ಎಮ್ಮೆಯೋ ಮೇಯಿಸುವುದೇ ಸುಲಭವಾಗಿಯೂ ಸಂಭ್ರಮವಾಗಿಯೂ ಕಾಣುತ್ತಿದ್ದದ್ದು ಇಂದಿಗೂ ರಹಸ್ಯವಾಗಿಯೇ ಉಳಿದುಬಿಟ್ಟಿದೆ. ಇನ್ನೂ ಹಳ್ಳಿಗಾಡಿನಲ್ಲಿ ಈ ಪರಿಸ್ಥಿತಿ ಜೀವಂತವಾಗಿರುವುದು ಶಾಪವೋ, ವರವೋ ಕಾಲವೇ ನಿರ್ಧರಿಸಬೇಕಾಗಿದೆ. ಕುರಿಯ ಕೊಪ್ಪಗಳವರು ಆಗಾಗ ಸ್ಕೂಲಿಗೆ ಬಂದು ಹಬ್ಬ, ಜಾತ್ರೆ, ಅಮಾವಾಸ್ಯೆ ಇತ್ಯಾದಿಗಳ ಬಗ್ಗೆ ಮೇಷ್ಟ್ರುಗಳನ್ನು ಕೇಳಿ ತಿಳಿದುಕೊಳ್ಳುತ್ತಿದ್ದರು. ಅಲ್ಲದೆ ಶಾಲೆಯಲ್ಲಿ ನಡೆಯುತ್ತಿದ್ದ ಸ್ವಾತಂತ್ರ್ಯ ದಿನಾಚರಣೆ, ಗಾಂಧಿಜಯಂತಿ, ರಾಜ್ಯೋತ್ಸವ ಮುಂತಾದ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ಕಡ್ಲೆಹಿಟ್ಟು ಮೆದ್ದು ಹೋಗುತ್ತಿದ್ದರು. ಅವರು ಕುರಿ ಮೇಯಿಸಲು ದೂರದ ದಿನ್ನೆಗೋ, ಕೊಂಡವಾಡಿಯ ಕಾಡಿಗೋ ಹೋದಾಗ ಕರಡಿ, ಕತ್ತೆಕಿರುಬ, ತೋಳ, ಮೊಲ ಇತ್ಯಾದಿಗಳನ್ನು ಕಂಡು ಬರುತ್ತಿದ್ದರಿಂದಲೋ ಅವರು ಆಗಾಗ

ಹೇಳುತ್ತಿದ್ದ ರಾಕ್ಷಸರ ಕಥೆಗಳಿಂದಲೋ ಅವರುಗಳನ್ನು ಕಂಡರೆ ಅಭಿಮಾನವಿತ್ತು. ಹಬ್ಬ ಜಾತ್ರೆಗಳಲ್ಲೂ ಅವರಿಗೆ ರಜವಿರುತ್ತಿರಲಿಲ್ಲ. ಉಗಾದಿ ಹಬ್ಬದಲ್ಲೂ ಕೂಡ ಒಬ್ಬಿಟ್ಟು ಉಂಡು ಕುರಿ ಬಿಡುತ್ತಿದ್ದರು"೭ ನಿಸರ್ಗದೊಂದಿಗೆ ಬದುಕುವ ಇಲ್ಲಿಯ ಜನರು ಕೃಷಿ ಮತ್ತು ಅದಕ್ಕೆ ಸಂಬಂಧಿಸಿದ ಅನನ್ಯ ಕಸುಸಬುಗಳನ್ನು ಅವಲಂಬಿಸಿ ಬದುಕುತ್ತಿರುತ್ತಾರೆ. ಕುರಿ ಕಾಯುವವರ ಬದುಕು ಭೂಮಿ, ಭೂಮಿಯನ್ನು ಅನುಸರಿಸಿರುವ ನಿಸರ್ಗದ ಪ್ರಭಾವಕ್ಕೆ ಒಳಗಾಗಿದೆ.

ಯಾವುದೇ ಆಚರಣೆಗಳು ಇದ್ದರು, ಯಾವುದೇ ಹಬ್ಬಹರಿದಿನಗಳಲ್ಲೂ ಅವರು ತಮ್ಮ ತಮ್ಮ ಕಾಯಕಗಳಲ್ಲಿ ತೊಡಗಿಕೊಳ್ಳುತ್ತಿದ್ದರು. ಬಜ್ಜಿರಂಗನು ಕುರಿಕಾಯುವ ವೃತ್ತಿಯನ್ನು ಹೊಂದಿದವನಾಗಿದ್ದು, ಇವನು ಮಹಾನ್ ಒರಟನಾಗಿದ್ದು ಸ್ಕೂಲ್ ಮಕ್ಕಳೆಲ್ಲರೂ ಇವನನ್ನು ಕಂಡರೆ ಭಯಪಡುತ್ತಿದ್ದರು. ಅವನ ವಿಶಿಷ್ಟತೆಯೆಂದರೆ ಬಜ್ಜಿರಂಗನು ಕುಳ್ಳನಾಗಿದ್ದು, ಯಾವೊತ್ತು ಅಂಗಿಯನ್ನು ಅವನು ತೊಟ್ಟವನಲ್ಲ, ಖಾಕಿ ನಿಕ್ಕರ್, ಮೈಮೇಲೊಂದು ಕಂಬಳಿ, ಹೆಗಲ ಮೇಲೆ ಸದಾ ಕೂತಿರುತ್ತಿದ್ದ ಕೋಲನ್ನು, ಬಜ್ಜಿರಂಗನನ್ನು ನೋಡಿದರೆ ಪ್ರೈಮರಿ ಸ್ಕೂಲು ಹುಡುಗರೆಲ್ಲ ಹೆದರುತ್ತಿದ್ದರು.

"ಯಾಕೋ ರಂಗ ಕುರಿ ಬಿಡಾಕೆ ಹೊತ್ತಾಗ್ಲಿವ್ವೆ . . ." ಎಂದ

"ಮತ್ತೆ . . . . ಮತ್ತೆ . . . .." ಎಂದು ತಲೆ ಕೆರೆದುಕೊಂಡ ಬಜ್ಜಿರಂಗ

"ಅದೇನ್ ಹೇಳ್ಲಾ . . ." ವೀರಣ್ಣ ಸಮಾಧಾನವಾಗಿಯೇ ಕೇಳಿದ.

"ಮತ್ತೆ . . . ಮತ್ತೆ . .. . ಮದ್ವೆ"

"ಯಾರ್ಗ್ಗೋ . . ."

"ಮುಂದ್ನೊರ್ಷಕ್ಕೆ ನನ್ ಮದ್ವೆ . . . ಉಗಾದಿ ಆದ್ಮೇಲೆ. . ." ಎಂದು ಎಲ್ಲರ ಹತ್ತಿರವೂ ಖುಷಿಯಿಂದ ಹೇಳತೊಡಗಿದ. ವೀರಣ್ಣ ಒಂದಿಬ್ಬರನ್ನು ಕರೆದುಕೊಂಡು ಐದಾರು ಕಡೆ ಹೋಗಿ ಬಂದ ಶಾಸ್ತ್ರ ಮಾಡಿದ. ಒಂದೆರಡು ಕಡೆಯಿಂದ ಹೆಣ್ಣಿನವರು ಬಂದು ಒಬ್ಬಿಟ್ಟು ಉಂಡು ಹೋಗಿದ್ದರು. ಆದರೆ ಬಜ್ಜಿರಂಗನ ಹಣೆಯಲ್ಲಿ ದೇವರು ಅರ್ಥಾತ್ ಬ್ರಹ್ಮ ಹೆಣ್ಣು ಬರೆಯುವುದನ್ನು ಮರೆತುಬಿಟ್ಟಿದ್ದ. ಉಗಾದಿಗಳು ಉರುಳಿದಂತೆ ಬಜ್ಜಿರಂಗ ಮದುವೆಯನ್ನು ಮರೆಯತೊಡಗಿದ. ಯಾರಾದರೂ ಆ ಸುದ್ದಿಯನ್ನು ಎತ್ತಿದರೆ

"ಅಯ್ಯೊ ಬಿಡತ್ತ . . ಮದ್ವೆ ಆಗಿರೋರು ಎರಡು ಕೈನಾಗೆ ತಿಂಬ್ತಾ ಇರೋದ್ನಾ ನಾ ಕಾಣ್ತಿಲ್ವೆ ಅಮ್ಮಣಕ್ಕನ ಬೋಂಡಾ. . ." ಎಂದು ರೇಗುತ್ತಿದ್ದ"೮ ಈ ಕತೆಯಲ್ಲಿ ಬಜ್ಜಿರಂಗನ ಪ್ರಣಯ ಪ್ರಸಂಗದ ಚಿತ್ರಣ ಸಹಜವಾಗಿಯೆ ಮೂಡಿಬಂದಿದೆ. ಬಜ್ಜಿರಂಗನು ಆಂಧ್ರದಿಂದ ಬಂದ ಹಕ್ಕಿಪಿಕ್ಕರ ಹೆಂಗಸಿನ ಜೊತೆ ಓಡಿಹೋಗುವುದಕ್ಕೆ ಅವನು ಎನ್.ಟಿ.ಆರ್.ಚಿತ್ರಗಳ ನೋಡಿದ್ದರ ಪರಿಣಾಮ. ಆತ ತನಗೆ ತನ್ನ ಜೀವನದಲ್ಲಿ ಮದುವೆ ಇಲ್ಲ ಎಂದುಕೊಂಡವನು ಕೊನೆಗೆ ಹಕ್ಕಿಪಿಕ್ಕರ ಹೆಂಗಸಿನ ಜೊತೆ ತನ್ನ ಬದುಕಿಗೆ ಸಾರ್ಥಕತೆ ಕಂಡುಕೊಳ್ಳುವುದು ಸಹಜವಾಗಿಯೇ ಬಂದಿದೆ. ಹಂದ್ರಾಳ ಮತ್ತು ಹಿಂದೂಪುರದ ಜನತೆಯ ಸಂಬಂಧಕ್ಕೆ ಈ ಕಥೆ ಸಾಕ್ಷಿಯಾಗಿದೆ. ಆದರೆ ಹಂದ್ರಾಳರನ್ನು ಆಂದ್ರಸಂಸ್ಕೃತಿ ಕಾಡಿಸಿರುವಷ್ಟು ಕನ್ನಡ ಸಂಸ್ಕೃತಿಯು ಅವರಿಗೆ ಕಾಡಿಸಿಲ್ಲ" ಎಂಬುದು ಈ ಕಥೆಯಿಂದ ತಿಳಿಯುತ್ತದೆ.

"ಮುಂದೆ ಮುಂಗಾರು ಪ್ರಾರಂಭವಾಗಿತ್ತು. ಉಳಿಮೆಗೆ ಎತ್ತುಗಳನ್ನು ಖರೀದಿಸಲು ಹಂದ್ರಾಳದ ಕೆಲವರು ಹಿಂದೂಪುರದ ಕಡೆ ಹೋಗಿದ್ದರು. ಹಿಂದೆ ಊರಿಗೆ ಬಂದಿದ್ದ ಹಕ್ಕಿಪಿಕ್ಕಿಯವರ ಗುಂಪು ಅಲ್ಲಿ ಕಂಡಿತಂತೆ. ಆ ಗುಂಪಿನಲ್ಲಿ ಹೆಂಗಸೊಬ್ಬಳೊಂದಿಗೆ ಬಜ್ಜಿರಂಗ ಇದ್ದದ್ದು ಇವರ ಕಣ್ಣಿಗೆ ಬಿದ್ದಿತಂತೆ. ಆದರೆ ಬಜ್ಜಿರಂಗ ಪರಿಚಯವಿಲ್ಲದವನಂತೆ ನಟಿಸಿದನಂತೆ. ಇದು ಅಂತೆಕಂತೆಯಾಗಿ ಹಾಗೆ ಉಳಿಯಿತು. ಇದಾಗಿ ಅನೇಕ ವರುಷಗಳಾದರೂ ಊರವರ ಬಾಯಲ್ಲಿ ಬಜ್ಜಿರಂಗ ಆಗಾಗ ಸುಳಿಯುತ್ತಿರುತ್ತಾನೆ"[೯] ಹೀಗೆ ಬಜ್ಜಿರಂಗನು ಹೆಣ್ಣಿನ ಮೂಲಕ ತನ್ನ ಸ್ವಾತಂತ್ರ್ಯ ಬಯಸಿ, ಹಾಗೂ ವಿಧವೆಗೆ ಒಂದು ಬಾಳನ್ನು ನೀಡಿದ ಹೆಗ್ಗಳಿಕೆಗೆ ಪಾತ್ರನಾಗುತ್ತಾನೆ.

"ಕೇಶವರೆಡ್ಡಿ ಹಂದ್ರಾಳರ ಕಥೆಗಳಲ್ಲಿ ಆ ಕಥೆಗಳ ಪ್ರಧಾನ ಪಾತ್ರಗಳ ಕನಸು ಕಾಣುತ್ತವೆ. ಆ ಪಾತ್ರಗಳು ಯಾವುದು ಕಲ್ಪಿತವಲ್ಲ. ಕೇಶವರೆಡ್ಡಿಯವರು ನಿಜಜೀವನದಲ್ಲಿ ಅತಿ ಹತ್ತಿರದಿಂದ ಕಂಡ ಆತ್ಮೀಯರು. ಪಾತ್ರ ರೂಪದ ಆ ವ್ಯಕ್ತಿಗಳಲ್ಲಿ ಕೇಶವರೆಡ್ಡಿಯವರು 'ಪರಕಾಯ ಪ್ರವೇಶ' ಮಾಡಿ ಅವರೇ ಆಗಿ ಕಂಡ ಅರ್ಥಪೂರ್ಣ ಕನಸುಗಳು. ಸೈಕಾಲಜಿ ಆಫ್ ಡ್ರೀಮ್ಸ್ ಅನ್ನು ಅನ್ವಯಿಸಿ ನೋಡಿದರೆ ಈ ಎಲ್ಲ ಕನಸುಗಳು ಅಸಂಬದ್ಧವಲ್ಲ ಸುಸಂಬದ್ಧ, ಅಸಂಗತವಲ್ಲ ಸುಸಂಗತ. ಕನ್ನಡ ಕಥೆಗಳಲ್ಲಿ ಈ ಸ್ವಪ್ನ ತಂತ್ರ ಹೆಚ್ಚಿಗೆ ಬಳಕೆಯಲ್ಲಿಲ್ಲ. ಆದರೆ ಕೇಶವರೆಡ್ಡಿ ಹಂದ್ರಾಳರ ಕಥೆಗಳಲ್ಲಿ ಇದೊಂದು ವೈಶಿಷ್ಟ್ಯ ಪೂರ್ಣ ಅಂಶ. ಕೇಶವರೆಡ್ಡಿ ಹಂದ್ರಾಳರು ಗ್ರಾಮೀಣ ಬದುಕನ್ನೂ ನಾಗರಿಕ ಜೀವನವನ್ನೂ ಸಶಕ್ತನಾಗಿ, ಸಮರ್ಥವಾಗಿ, ಚಿತ್ರಿಸುವ ವಿಶಿಷ್ಟ ಕಥೆಗಾರರು. ಅತ್ಯಂತ ಗಮನಾರ್ಹ ಕಥೆಗಾರರು. ಈ ಸಮಾಜದ ವ್ಯವಸ್ಥೆಯ ಹುಳುಕು ಕೊಳಕುಗಳನ್ನು ತೊಡೆಯುವ ತುಡಿತ ತುಂಬಿ ತುಳುಕುತ್ತಿರುವ ಕೇಶವರೆಡ್ಡಿ ಹಂದ್ರಾಳರು ಬದುಕಿನಲ್ಲೂ ಬರಹದಲ್ಲೂ ಇತ್ತೀಚೆಗೆ ಕನ್ನಡ ಕಥಾಲೋಕ ಕಳೆದುಕೊಂಡ ಡಾ.ಬೆಸಗರಹಳ್ಳಿ ರಾಮಣ್ಣವರ ಸ್ಥಾನವನ್ನು ತುಂಬಿದ ಸಮರ್ಥರು"[೧೦]

ಹಂದ್ರಾಳರ 'ಜಾಗೃತಿ' ಎಂಬ ಕತೆಯು ತಿಲಕನ ಪಾತ್ರದ ಮೂಲಕ ಜಮೀನ್ದಾರಿ ಪದ್ಧತಿಯನ್ನು ವಿರೋಧಿಸುವ ಚಿತ್ರಣ ಈ ಕಥೆಯಲ್ಲಿ ಮೂಡಿದೆ. ಇಡೀ ಜೀವನ ಪರ್ಯಂತ ಎಕ್ಕಡ ಹೊಲಿಯುತ್ತಲೇ ಮಗ ತಿಲಕನ ವಿದ್ಯಾಭ್ಯಾಸ ಮಾಡಿಸುವ ಮಾದಿಗರ ಬೋಜ, ದಲಿತರ ದನಿಯಲ್ಲಿ ಈ ಕತೆಯನ್ನು ನೋಡಬಹುದು. ಗ್ರಾಮ ಸಂಸ್ಕೃತಿಯಲ್ಲಿ ದಲಿತರ ಮೇಲಾಗುವ ದೌರ್ಜನ್ಯವನ್ನು ತಮ್ಮ ಕತೆಗಳಲ್ಲಿ ಭಿನ್ನ ಭಿನ್ನವಾದ ರೀತಿಯಲ್ಲಿ ಚಿತ್ರಿಸುತ್ತಾ ಹೋಗುತ್ತಾರೆ.

"ಲೇ ತಟ್ಟಡಜ್ಜ ನಮ್ಮ ತಿಲಕನಿಗೆ ಕೆಲ್ಸ ಸಿಕ್ತಂತೆ ಕಣೋ. ದುಡ್ಡು ಕಳಿಸವನ್ನೆ . . . . ಅವನ ಸಂಬಳದಾಗಿನ ದುಡ್ಡು 'ಭಾವಪರವಶವಾಗಿ ಕೂಗಿ ಹೇಳಿದ ಬೋಜ.

"ಆಂ. . . . ಅಂದ್ರೆ ನನ್ನ ಪದಕ್ಕೆ ಕಿಮ್ಮತ್ತು ಬಂತು ಅಂತ ಲೆಕ್ಕ, ತೆತ್ತ ಅವ್ನು ಕಳಿಸಿರೋದ್ರಾಗೆ ಇಲ್ಲೊಂದೈದು ರೂಪಾಯ್ನ ನಾಳೆ ಹೊಟ್ಟೆ ತುಂಬಾ ಹೆಂಡ ಕುಡ್ದು ಇನ್ನೂ ವಸಿ ಜೋರಾಗಿ ಪದ ಹೇಳ್ತೀನಿ ಜಮೀನುದಾರನ ಹಟ್ಟಿ ತಾಕೂ ಕೇಳೋ ಅಂಗೆ" ತಟ್ಟಾಡಜ್ಜ ಮಲಗಿದ ಭಾಗದಿಂದಲೇ ಕೂಗಿದ.

"ತಲೆ ಕೆಟ್ಟಂಗೆ ಮಾತಾಡ್ಬೇಡ, ಸುಮ್ಮೆ ಈ ಐದು ತಕ್ಕೊ, ಜಮೀನುದಾರ್ಗೆ ಗೊತ್ತಾದ್ರೆ ನಡ ಮುರ್ದು ಕೊಟ್ಟಿಗೆಗೆ ಹಾಕ್ತಾರೆ" ಎಂದು ನಿಕ್ಕರ್ ಜೇಬಿನಿಂದ ಐದು ರೂಪಾಯಿನ ನೋಟನ್ನು ತೆಗೆದು ತಟ್ಪಾಡಜ್ಜನಿಗೆ ಕೊಟ್ಟ.

"ತುಂಬಾ ದೊಡ್ಡ ಮನುಷ್ಯನಾಗ್ಲಿ ನಿನ್ನ ಮಗ" ಎಂದು ತಟ್ಪಾಡಜ್ಜ ನಾಳೆಯ ಹೆಂಡ ನೆನೆದು ಬಾಯಿ ಚಪ್ಪರಿಸತೊಡಗಿದ.

ತನ್ನ ಹಟ್ಟಿಗೆ ಬಂದು ಮಲಗಿದರೂ ಬೋಜನಿಗೆ ನಿದ್ದೆ ಬರಲಿಲ್ಲ. ಮಗ ತಿಲಕನ ಯಶಸ್ಸಿಗೆ ಕಾರಣರಾದ ರಾಮಯ್ಯ ಮಾಸ್ತರು ನೆನಪಿಗೆ ಬಂದು ಕಣ್ಣುತುಂಬಿ ಬಂದವು. ಹಾಗೆಯೇ ತನ್ನ ಬದುಕು, ತಿಲಕನಿಗಾಗಿ ತಾನು ಪಟ್ಟ ಪಾಡು ಮಧ್ಯದಲ್ಲಿಯೇ ತನ್ನ ಮುದ್ದಿನ ಮಡದಿ ಪರಲೋಕವಾಸಿಯಾದದ್ದು ಎಲ್ಲವೂ ನೆನಪಿನಾಳದಲ್ಲಿ ತೇಲಿಬಂದವು."[೧೧] ತಿಲಕನಿಗೆ ಪಟ್ಟ ಕಷ್ಟ ಅಷ್ಟಿಷ್ಟಲ್ಲ ಬೋಜನು, ಜಮೀನ್ದಾರನ ಮಗನು ಹೈಸ್ಕೂಲಿನಲ್ಲಿ ಫೇಲಾದ. ಮಾದಿಗರ ಮಗನಾದ ತಿಲಕ ಪಾಸಾಗಿದ್ದಾನೆ ಎಂದು ಜಮೀನ್ದಾರರು ಬೋಜನ ಮೇಲೆ ಸಿಡಿದು ಬೀಳುತ್ತಾರೆ. ಹಾಗೆಯೇ ರಾಮಯ್ಯ ಮಾಸ್ತರರ ಸಹಾಯದಿಂದ ನಗರಕ್ಕೆ ವಿದ್ಯಾಭ್ಯಾಸಕ್ಕೆ ಬಂದಿರುವುದರಿಂದ ಅವರ ಮೇಲೂ ಕೋಪಿತನಾಗುತ್ತಾನೆ. "ಆ ಮಾದಿಗ್ರೊನ್ ಬಗ್ಗೆ ಅದ್ಯಾಕೆ ಅಷ್ಟು ಮುತವರ್ಜಿ ವಹಿಸಿದ್ದೀರ ಮೇಷ್ಟ್ರೇ? ಜಮೀನುದಾರ ಜಬರದಸ್ತಿನಿಂದಲೇ ಕೇಳಿದ್ದ.

"ಪ್ರತಿಭೆಗೆ ಪ್ರೋತ್ಸಾಹ ಕೊಡಬೇಕದ್ದು ಮಾಸ್ತರಾಗಿ ನನ್ನ ಧರ್ಮ, ನಾನು ಗಾಂಧಿ ಹಾದಿಯಲ್ಲಿ ನಂಬಿಕೆಯುಳ್ಳವನು. ಜಾತಿ ಮತಗಳ ಭೇದ ನನ್ನಲಿಲ್ಲ. ಅದೂ ಅಲ್ಲದೆ ಇದು ಪ್ರಜಾಪ್ರಭುತ್ವ ರಾಷ್ಟ್ರ."

"ಅಷ್ಟೇನಾ ನಿಮ್ಮ ಮಾತು?

'ಹೌದು'

'ಸರಿ, ನೀವು ಹೋಗಬಹುದು.'

ಜಮೀನುದಾರನ ಅಟ್ಟಹಾಸದ ಮುಂದೆ ರಾಮಯ್ಯಮಾಸ್ತರು ಎಂದೂ ಸೋತವರಲ್ಲ. ಹೋರಾಟದ ಛಲಗಾರ. ಆದರೆ ಇಳಿವಯಸ್ಸಿನಲ್ಲಿ ದಮ್ಮು ಇನ್ನಿತರ ಖಾಯಿಲೆಗಳು ಆವರಿಸಿ ಕೃಶರಾಗಿದ್ದರು. ಅವರ ಹೋರಾಟಕ್ಕೆ ಸರಿಯಾದ ಬೆಂಬಲ ದೊರೆತಿರಲಿಲ್ಲ"[೧೨]

ಬೋಜನ ಮಗ ತಿಲಕನು ಹಳ್ಳಿಯಿಂದ ನಗರಕ್ಕೆ ವಿದ್ಯಾಭ್ಯಾಸಕ್ಕೆ ತೆರಳಿ ಹಳ್ಳಿಯ ಜಮೀನ್ದಾರನ ದರ್ಪ ದೌರ್ಜನ್ಯಗಳ ವಿರುದ್ಧ ಪ್ರತಿಭಟಿಸುವಿಕೆಯ ಚಿತ್ರಣ ಈ ಕತೆಯಲ್ಲಿ ವ್ಯಕ್ತವಾಗಿದೆ. ಕೊನೆಗೆ ಸರ್ಕಾರಿ ಕೆಲಸ ಸಿಗದೆ ಬೆಂಗಳೂರಿನಲ್ಲಿ ಎಕ್ಕಡ ಹೊಲೆಯುವ ಕಾಯಕವನ್ನೇ ಕೈಗೊಂಡ ತಿಲಕ, ಇದನ್ನು ಕಂಡು ಕಂಗಾಲಾದ ಬೋಜ, ಜಮೀನ್ದಾರನ ಕುತಂತ್ರ ಹಾಗೂ ದಬ್ಬಾಳಿಕೆಯಿಂದ ತಿಲಕ ನೆಲ ಕಚ್ಚುವುದನ್ನು ಕಾಣಬಹುದು. ಬೋಜನ ಭಗ್ನವಾದ ಕನಸು ನಮ್ಮೆಲ್ಲರ ಭಗ್ನ ಕನಸುಗಳಲ್ಲೊಂದು ಎನಿಸುತ್ತದೆ.

ಭಾರತದಂತಹ ಜಾತಿವ್ಯವಸ್ಥೆ ಇರುವ ಸಾಮಾಜಿಕ ವ್ಯವಸ್ಥೆಯಲ್ಲಿ ಮನುಷ್ಯ ಸಂಬಂಧಗಳು ಜಾತಿಯಷ್ಟೆ ಸಂಕೀರ್ಣ ಸ್ವರೂಪವನ್ನು ಪಡೆದುಕೊಂಡು ಬಿಟ್ಟಿವೆ. ವರ್ಣ ವ್ಯವಸ್ಥೆ ಇರುವ ದೇಶಗಳಲ್ಲಿ ಅಥವಾ ಕಪ್ಪು ಬಿಳಿ ಎಂದು ಜನರನ್ನು ವರ್ಗೀಕರಿಸಿಕೊಂಡಾಗ ಉಂಟಾಗುವ ಸಂಬಂಧಗಳಿಗೂ ಸಾವಿರಾರು

ಜಾತಿಗಳು, ಉಪಜಾತಿಗಳು ಇರುವ ಭಾರತದಂತಹ ಸಾಮಾಜಿಕ ವ್ಯವಸ್ಥೆಯಲ್ಲಿ ಮನುಷ್ಯ ಸಂಬಂಧಗಳ ಸ್ವರೂಪಕ್ಕೂ ವ್ಯತ್ಯಾಸವಿದ್ದು, ಇಲ್ಲಿ ಬಹಳಷ್ಟು ಸಂಕೀರ್ಣತೆ ಇದೆ. ಅಂಬೇಡ್ಕರ್ ಅವರು 'ಗ್ರಾಮಗಳೆಂದರೆ ಪ್ರಾದೇಶಿಕತೆಯ ಕೊಳೆಗುಂಡಿಗಳಲ್ಲದೆ ಬೇರೇನು? ಅವು ಅಜ್ಞಾನದ, ಸಂಕುಚಿತ ಮನೋಭಾವದ ಜಾತೀಯತೆಯ ಬಿಲಗಳಲ್ಲದೆ ಮತ್ತೇನು? ಕರಡು ಸಂವಿಧಾನದಲ್ಲಿ ಗ್ರಾಮಗಳನ್ನು ಕೈಬಿಟ್ಟು ವ್ಯಕ್ತಿಗಳನ್ನೇ ಘಟಕಗಳನ್ನಾಗಿ ತೆಗೆದುಕೊಂಡಿದ್ದಕ್ಕಾಗಿ ಸಂತೋಷವಾಗಿದೆ ಎಂದು ಹೇಳುವಾಗ ಅವರ ಮನಸ್ಸಿನಲ್ಲಿದ್ದುದು ಅಮಾನವೀಯವಾದ ಜಾತಿ ಪದ್ಧತಿಯಿಂದಾಗಿ ಮನುಷ್ಯ ಮತ್ತೊಬ್ಬ ಮನುಷ್ಯನನ್ನು ಮನುಷ್ಯನನ್ನಾಗಿ ನೋಡುತ್ತಿಲ್ಲ. ಪ್ರಾಣಿಗಳಂತೆ ನಡೆಸಿಕೊಳ್ಳುತ್ತಿದ್ದಾನೆ ಎಂಬ ಭಾವನೆ. ಇದಕ್ಕೆ ಅಪವಾದದ ಗ್ರಾಮಗಳೂ ಇವೆ. ಅಮಾನವೀಯವಾದ ಜಾತಿಪದ್ಧತಿ ಇದ್ದರೂ ಸಹ ಸಾಮರಸ್ಯದಿಂದ ಬದುಕುತ್ತಿರುವ ಗ್ರಾಮಗಳೂ ಸಾಕಷ್ಟಿವೆ. ವೃತ್ತಿಗಳಿಂದ ಪರಸ್ಪರಾವಲಂಬನೆ ಹೆಚ್ಚು. ಇದರಿಂದಾಗಿ ಗ್ರಾಮಗಳಲ್ಲಿ ಅನೇಕ ಜಾತಿ ವೃತ್ತಿಗಳಿದ್ದರೂ ಪರಸ್ಪರಾವಲಂಬನೆಯಿಂದ ಮನುಷ್ಯ ಸಂಬಂಧಗಳು ಸಂಘರ್ಷದ ವಿನ್ಯಾಸವಾಗಿರದೆ ಸಾಮರಸ್ಯದ, ಅನ್ಯೋನ್ಯತೆಯ, ಸಹಕಾರ-ಸಹಬಾಳ್ವೆಯ ವಿನ್ಯಾಸವಾಗಿದೆ ಎಂಬುದು ಸತ್ಯ". ಆದರೆ ಈ ಜಾಗತೀಕರಣದಿಂದಾಗಿ ಹಣ, ಅಧಿಕಾರ, ಅಂತಸ್ತುಗಳಿಗೆ ಮನ್ನಣೆ ದೊರೆತು ಮಾರುಕಟ್ಟೆಯ ಸಂಬಂಧಗಳಾಗಿ ಪರಿವರ್ತನೆಯಾಗಿಬಿಟ್ಟಿವೆ.

"ಪಂಚರಂಗಿ" ಎಂಬ ಕತೆಯಲ್ಲಿ ರಂಗಿ ಎಂಬ ಮುಗ್ಧ ಹೆಣ್ಣನ್ನು ಚಿಕ್ಕಿ ಎಂಬ ಚಿಕ್ಕಮ್ಮ ರಂಗಿಯ ಬದುಕನ್ನು ಹಾಳು ಮಾಡುವುದು. ಅವಳ ಜೀವನವನ್ನು ಹಳ್ಳಕ್ಕೆ ತಳ್ಳುವುದು. ಹಳ್ಳಿಯ ಮುಗ್ಧ ಹೆಣ್ಣು ಮಕ್ಕಳನ್ನು ಬಲಿ ತೆಗೆದುಕೊಳ್ಳುವುದು ಗ್ರಾಮೀಣ ಪರಿಸರದಲ್ಲಿ ಇಂಥ ಸನ್ನಿವೇಶಗಳು ಎಲ್ಲಾ ಗ್ರಾಮಗಳಲ್ಲು ನೋಡಬಹುದು. ರಂಗಿಯನ್ನು ಅವಳ ಚಿಕ್ಕಮ್ಮ ಕುರಿ ಕಾಯುವುದಕ್ಕೆ ನೇಮಿಸುತ್ತಾಳೆ.

"ರಂಗಿ! ಕಲ್ಲಳ್ಳಿಯಲ್ಲಿ ಇದ್ದವಳೊಬ್ಬಳೇ ರಂಗಿ. ಸಿದ್ದನಾಯ್ಕನ ಮಗಳು ಕುರಿ ರಂಗಿ! ರಂಗಿಯೆಂದರೆ ಹಳ್ಳಿಯವರಿಗೆಲ್ಲ ಅಚ್ಚುಮೆಚ್ಚು ಮೊದ್ದು ಹುಡುಗಿ. ಮುಗ್ಧ ಹುಡುಗಿ, ಎಲ್ಲರ ಕರುಣೆಗೂ ಪಾತ್ರಳಾಗಿದ್ದಳು. ಬಯಲುಸೀಮೆಯ ಬೆಂಗಾಡಿನ ಬೇಸಿಗೆಯಲ್ಲೂ ಆಯಾಸವಿಲ್ಲದೆ ಗಂಡು ಹುಡುಗರಂತೆ ಕುರಿ ಮೇಯಿಸಿಕೊಂಡು ಬರುತ್ತಿದ್ದಳು. ಅಮ್ಮ ಸತ್ತಾಗ ರಂಗಿ ಮೂರನೇ ಕ್ಲಾಸಿನಲ್ಲಿ ಕಲಿಯುತ್ತಿದ್ದಳು. ಸಿದ್ದನಾಯ್ಕನ ಪ್ರಾಯವಿನ್ನೂ ತಣ್ಣಗಾಗಿರಲಿಲ್ಲ. ಅವನಿಗೆ ಮರುಮದುವೆಯಾಗಿ ರಂಗಿಗೆ ಚಿಕ್ಕಿಯೊಬ್ಬಳು ಮನೆಗೆ ಬಂದಿದ್ದಳು. ಚಿಕ್ಕಿ ಬಂದ ನಂತರ ರಂಗಿಯನ್ನು ಸ್ಕೂಲು ಬಿಡಿಸಿ ಕುರಿಗೆ ಹಾಕಲಾಯಿತು. ಅವಳಿಗೆ ಚಿಕ್ಕಿಯನ್ನು ಕಂಡರೆ ಭಯ. ಮನೆಗೆ ಕಾಲಿರಿಸಿದಾಗಿನಿಂದಲೂ ಚಿಕ್ಕಿ ರಂಗಿಯೊಡನೆ ಒಂದೇ ಒಂದು ಪ್ರೀತಿಯ ಮಾತನ್ನಾಡಿರಲಿಲ್ಲ. ಕುರಿಕಾಯುವ ಕೆಲಸ ಶಾಲೆಗೆ ಹೋಗುವುದಕ್ಕಿಂತಲೂ ರಂಗಿಗೆ ಹೆಚ್ಚು ಖುಷಿಯನ್ನು ಕೊಡುತ್ತಿತ್ತು. ಬೆಳಿಗ್ಗೆ ತಂಗಳುಂಡು ಕುರಿ ಬಿಟ್ಟರೆ . . . . . ಮಧ್ಯಾಹ್ನ ಕುರಿಮಂದೆಯಲ್ಲಿ ಕುರಿ ಬಿಟ್ಟು ಊಟಕ್ಕೆ ಬರುತ್ತಿದ್ದಳು. ಊಟ ಮಾಡಿ ಹೊರಟರೆ ಮತ್ತೆ ಕುರಿಯ ಸಮೇತ ಸಂಜೆ ಸೂರ್ಯ ಮುಳುಗಿದ ಮೇಲೆಯೇ ಬರುತ್ತಿದ್ದಳು. ರಾತ್ರಿ ಊಟ ಮಾಡಿ ಕುರಿ ರೊಪ್ಪದ ಅಟ್ಟದ ಮೇಲೆ ಯಾವುದೇ ಚಿಂತೆಯಿಲ್ಲದೆ ಹಾಯಾಗಿ ನಿದ್ರಿಸುತ್ತಿದ್ದಳು. ಅವಳ ವಯಸ್ಸು ಒಂದೊಂದೇ ವರ್ಷ ಹೆಚ್ಚಾದಂತೆ ಅವಳ ಮಂದೆಯಲ್ಲೂ ಕೂಡ

ಕುರಿಗಳು ಹೆಚ್ಚಾಗತೊಡಗಿದ್ದವು.ಕ ಸಿದ್ದನಾಯ್ಕನ ಬದುಕು ಹಸನಾಗತೊಡಗಿತ್ತು. ಹರೆಯ ಬಂದಂತೆ ರಂಗಿ ರಂಗು ರಂಗಾಗಿ ನೋಡಿದವರ ಮನಸ್ಸಿನಲ್ಲಿ ಪುಳಕವನ್ನುಂಟು ಮಾಡುತ್ತಿದ್ದಳು."[೧೩] ಈ ರೀತಿಯಾಗಿ ರಂಗಿಯ ಬದುಕು ಇಡೀ ದಿನ ಕುರಿ ಕಾಯುವ ಹಾಗೂ ಕುರಿಯನ್ನು ನೋಡಿಕೊಳ್ಳುವ ಕಾಯಕವಾಗಿತ್ತು. ಚಿಕ್ಕಿಯು ರಂಗಿಯನ್ನು ಶಾಲೆಯನ್ನು ಬಿಡಿಸುತ್ತಾಳೆ. ಅವಳು ವಿದ್ಯೆಯನ್ನು ಕಲಿಯಬಾರದು. ಕಲಿತರೆ ಕುರಿಗಳನ್ನು ಯಾರು ಕಾಯುತ್ತಾರೋ ಎಂದು ತಿಳಿದು, ಚಿಕ್ಕಿಯು ಕುರಿಕಾಯುವುದಕ್ಕೆ ಹಚ್ಚುತ್ತಾಳೆ. ಒಂದು ರೀತಿಯ ಶೋಷಣೆಗೆ ರಂಗಿಯು ಒಳಗಾಗಿದ್ದಳು. ರಂಗಿಯು ಋತುಮತಿಯಾಗಿ ಮೂರ್‍ನಾಲ್ಕು ತಿಂಗಳುಗಳಾಗಿದ್ದರೂ ಯಾರಿಗೂ ಹೇಳದಂತೆ ಅಪ್ಪಣೆಯನ್ನು ಮಾಡಿದ್ದಳು. ಸಿದ್ದನಾಯ್ಕನಿಗೂ ಸಹ ತಿಳಿಸದಂತೆ ಹೇಳಿದ್ದಳು. ಗೊತ್ತಾದರೆ ರಂಗಿಯನ್ನು ಕುರಿ ಮೇಯಿಸುವುದನ್ನು ಬಿಡಿಸುತ್ತಾರೆ ಎಂದು ಅವಳು ಸಂಚು ಹೂಡಿದ್ದಳು.

ಚಿಕ್ಕಿಯ ತಮ್ಮನಾದ ಸುರೇಶನ ಕಾಮದ ಕಣ್ಣು ರಂಗಿಯ ಮೇಲೆ ಬಿದ್ದು ಸುರೇಶನು ರಂಗಿಯನ್ನು ಅನುಭವಿಸಿ ನಾನು ನಿನ್ನನ್ನು ಮದುವೆಯಾಗುತ್ತೇನೆಂದು ಭರವಸೆಯ ಮಾತುಗಳನ್ನಾಡಿ ಹೋಗಿದ್ದ. ಹೇಗೋ ಚಿಕ್ಕಿಗೆ ರಂಗಿಯು ಬಸುರಿಯಾಗಿದ್ದಾಳೆ. ಇದಕ್ಕೆಲ್ಲಾ ಸುರೇಶನೇ ಕಾರಣನೆಂದು ಒಂದು ತಿಂಗಳಲ್ಲಿ ರಂಗಿಗೆ ಶ್ರೀಮಂತ ಮುದಕನೊಡನೆ ಮದುವೆಯನ್ನು ಮಾಡುತ್ತಾಳೆ. ಹೀಗೆ ಅವಳ ಜೀವನ ಒಂದೊಂದಾಗಿ ಮುರಿದು ಬೀಳುತ್ತದೆ. ತನ್ನೆಲ್ಲ ಆಸ್ತಿಪಾಸ್ತಿಯನ್ನು ಮುದುಕ ರಂಗಿಯ ಹೆಸರಿಗೆ ಬರೆದಿದ್ದ.

"ಮಗು ಹುಟ್ಟಿದ ಎರಡು ತಿಂಗಳಲ್ಲೆ ಮುದುಕ ರಂಗಿಗೆ ವಿಧವೆಯ ಪಟ್ಟವನ್ನು ತಂದಿಟ್ಟು ಅಸುನೀಗಿದ್ದ. ರಂಗಿ ಈಗ ಹೆಚ್ಚು ಜವಾಬ್ದಾರಿಯನ್ನು ಹೊತ್ತು ಕೊಂಡಳು. ಮಗುವನ್ನು ವಸತಿ ಶಾಲೆಗೆ ಸೇರಿಸಿಬಿಟ್ಟಳು. ಹೋಟೆಲ್ ವ್ಯಾಪಾರದ ಕಡೆಗೆ ಹೆಚ್ಚು ಗಮನವನ್ನು ಕೊಟ್ಟಳು. ತನ್ನ ದೇಹದ ಹಸಿವನ್ನು ಇಂಗಿಸಿಕೊಳ್ಳಲು ಯಾರಾದರೊಬ್ಬರೊಡನೆ ಮಲಗುತ್ತಿದ್ದಳು" ಅದು ಅವಳಿಗೆ ಅನಿವಾರ್ಯವಾಗಿತ್ತು. ತನ್ನ ಬದುಕಿನ ಬಗ್ಗೆ ಅವಳಿಗೆ ಈಗ ಹೇಸಿಗೆಯಿರಲಿಲ್ಲ."

"ಆಗ ನಾನಿನ್ನು ದಾದರ್‌ನಲ್ಲಿ ಹೊಸದಾಗಿ ಹೋಟೆಲ್ ಪ್ರಾರಂಭಿಸಿದ ಕಾಲ. ನನ್ನ ರೂಪಕ್ಕೆ ಮರುಳಾಗಿ ಒಬ್ ಶೇಟ್‌ಜಿ ನನ್ನ ಸ್ನೇಹ ಮಾಡಿದ. ತುಂಬಾ ಶ್ರೀಮಂತ. ಅವನೊಂದಿಗೆ ನನ್ನ ಸಂಬಂಧ ಬೆಳೆಯಿತು. ಕೆಲ ದಿನಗಳಲ್ಲಿಯೇ ಇನ್ನೊಬ್ಬ ಯುವಕನ ಸಂಬಂಧವೂ ಬೆಳೆಯಿತು. ಆ ಯುವಕ ಯಾರೂ ಆಗಿರಲಿಲ್ಲ. ಆ ಶೇಟ್‌ಜಿಯ ಸ್ವಂತ ಮಗ. ಸಂಜೆ ಶೇಟ್‌ಜಿಯೊಡನೆ ಮಲಗುತ್ತಿದ್ದ ನಾನು ಬೆಳಿಗ್ಗೆ ಅವನ ಮಗನೊಡನೆ ಮಲಗುತ್ತಿದ್ದ! ಶೇಟ್‌ಜಿಗೆ ಹೆಂಡತಿನೂ ಆಗಿದ್ದೆ ಸೊಸೆಯೂ ಆಗಿದ್ದೆ. ಅದರಂತೆ ಅವನ ಮಗನಿಗೂ ತಾಯಿಯೂ ಆಗಿದ್ದೆ. . . ಹೆಂಡತಿಯೂ ಆಗಿದ್ದೆ"[೧೪]

ಈ ಮಾತುಗಳಲ್ಲಿ ಪಂಚರಂಗಿಯ ವಸ್ತುಸ್ಥಿತಿಯು ತಿಳಿಯುತ್ತದೆ. ಅವಳ ಜೀವನ ಕೊನೆಗೆ ವೇಶ್ಯೆಯರ ಬದುಕಿನಲ್ಲಿ ಯಾವ ರೀತಿ ನಡೆಯುತ್ತದೋ ಅದೇ ರೀತಿ ಅವಳ ಜೀವನವೂ ಸಾಗುತ್ತದೆ. ಗ್ರಾಮೀಣ ಸಮುದಾಯದಲ್ಲಿ ಮುಖಾಮುಖಿ ಸಂಬಂಧವಿರುವುದರಿಂದ ಸಾಮಾಜಿಕ ನಿಯಂತ್ರಣ ಸರಳ ಮತ್ತು ಪರಿಣಾಮಕಾರಿಯಾಗಿರುತ್ತದೆ. ರೂಢಿ ಸಂಪ್ರದಾಯ, ಲೋಕಾಚಾರ, ನೈತಿಕ ನಿಯಮಗಳು ಇವುಗಳು

ಜನರ ನಡವಳಿಕೆಯ ಮೇಲೆ ಒತ್ತಡಗಳನ್ನು ತಂದು ತಪ್ಪುದಾರಿಗೆ ಹೋಗದಂತೆ ನಿಯಂತ್ರಿಸುತ್ತವೆ. ಊರಿಗೆ ದೊಡ್ಡವರೆನಿಸಿಕೊಂಡವರ ಆಜ್ಞೆ, ಪರಂಪರಾಗತವಾಗಿ ಬೆಳೆದು ಬಂದಿರುವ ಪದ್ಧತಿಗಳು, ಸಾಮಾನ್ಯ ನಂಬಿಕೆಗಳು, ಮೌಲ್ಯಗಳು ಮತ್ತು ಆದರ್ಶಗಳು ಜನರ ನಡವಳಿಕೆಯನ್ನು ರೂಪಿಸುತ್ತವೆ. ಗ್ರಾಮದ ಸದಸ್ಯರು ಕಡಿಮೆ ಸಂಖ್ಯೆಯಿದ್ದು ಮುಖಾಮುಖಿ ಸಂಬಂಧವಿರುವುದರಿಂದ ಯಾವುದೇ ವ್ಯಕ್ತಿ ಸಮುದಾಯದ ನಿಯಮೋಲ್ಲಂಘನೆ ಮಾಡಿದಾಗ ಬಹುಬೇಗ ಎಲ್ಲರ ಗಮನಕ್ಕೆ ಬರುವಂತಾಗುತ್ತದೆ.

ಹಂದ್ರಾಳರ 'ಮಹಾಪ್ರಸ್ಥಾನ' ಕತೆಯಲ್ಲಿ ಗ್ರಾಮೀಣ ಪರಿಸರದಲ್ಲಿ ಕುಕ್ಲನು ಬಡತನದ ಬೇಗೆಯಲ್ಲಿ ಹಾಗೂ ಹಸಿವಿನಲ್ಲೇ ಸಾಯುವ ಸನ್ನಿವೇಶ ನೋಡಬಹುದಾಗಿದೆ. ಇಲ್ಲಿ ಮೂಡಿರುವ ಮಾನವ ಜೀವಿಯ ಅಸಹಾಯಕತೆ ಕಥೆಯಲ್ಲಿ ಹೆಚ್ಚು ಪರಿಣಾಮಕಾರಿಯಾಗಿ ಮೂಡಿದೆ. "ಬ್ಯಾಲ್ಯದ ಬಾಲಾಜಿ ಟೂರಿಂಗ್ ಟಾಕೀಸಿನಾಗೆ ಎಲ್ಡನೇ ಸೋ ಬೈ ಸ್ಕೋಪ್ ಮುಗ್ದು ಯಾರಿಗೆ ಯಾರುಂಟು ಯರವಿನ ಸಂಸಾರ. . . ' ಮ್ಯಾಲಕ್ಕೆ ಕೊಟ್ಟಿದ್ರೂ ಕುಕ್ಲನ ಕಣ್ಣುಗಳು ನಿದ್ದೆ ಉಂಡಿರ್ಲಿಲ್ಲ. ತಗ್ಗಳ್ಳಿ ಮೇಲೇಗೌಡನ ಆಲೇಮನ್ತಾಗೆ ಅನುಮಂತಪ್ಪ ಓಬಳನಾಯ್ಕ ಗಾಣದ ಎತ್ತುಗಳನ್ನು ಅದರಿಸುತ್ತಾ ದನಿಯೆತ್ತಿ ಹಾಡ್ತಿದ್ದ 'ಕೊಲಲೇನಾ ಪಾಂಡುಕುಮಾರರ' ಅನ್ನುವ ದಾನಶೂರ ಕರ್ಣನ ಮಟ್ಟು ಗದ್ದೆ ಬಯಲನ್ನ ಎಗರಿಕೊಂಡು ಕುಕ್ಲನ ನಿಮಿರಿದ ಕಿವಿಗಳೊಳ್ಗೆ ನುಗ್ಗಿ ಗುಂಗ್ರಿಯಂತೆ ಸಬುದ ಮಾಡಿ ಮುಖದಾಗೆ ಒಂದ್ರೀತಿಯ ನೆನ್ಪಿನ ಗೆರೆಗಳು ಉಬ್ಬಿದ್ದವು. ಬಿರ್ಗಾಳ್ಗೆ ಸಿಕ್ಕ ಆಷಾಡದ ಮೋಡ್ಗಳಾಗೆ. ಪ್ರಪಂಚದ ಭೂಪಟದಾಗೆ ಮಧ್ಯ ಮಧ್ಯ ಸಮುದ್ರದ ನೀಲಿಯಾಕಾರ ಸಿಗದಂತೆ ಸಿರ್ಗ್ದೋಗಿದ್ದ ರಗ್ನ ತೆಗ್ದು ಕಾಲ್ ಮಡ್ಸಾಕೆಂದು ಗುಡ್ಲಿಂದಕ್ಕೆ ಹೋಗಿ ಹಳೇ ಹಂದೀಗೂಡ್ ಗ್ವಾಡ್ಗೆ ಆತು ಕುಂತ. ಕಾಲ್ಗಳ್ಗೆ ಚಳಿ ನುಗ್ಗಿದ್ರಿಂದ ನಿಸ್ಶಕ್ತಿಯಿಂದ ಬೆಕ್ಕು ಕಂಡಾಗ ಇಲಿ ನಡುಗ್ವಂತೆ ಗಡಗಡಿಸ್ತಿದ್ವು, ಒಂದ್ ಕೈಯಿಂದ ಪುಟ್ಗೋಸಿ ಸಿಗಿಸಿಕೋತ ಉಸ್ಸೆಂದು ಎದ್ ಬಂದು ಲಿಂಗೇಗೌಡ್ನ ತ್ವಾಟದಿಂದ ಇಸ್ಕೊ ಬಂದ್ ಹೆಣದಿದ್ದ ತೆಂಗಿನಗರಿ ಚಾಪೆಮ್ಯಾಗೆ ಯಥಾಪ್ರಕಾರ ಬಿದ್ದುಕೊಂಡ್ ರಗ್ನೆಳ್ಕೊಂಡ."[೧೫] ಕುಕ್ಲನಿಗೆ ತುಂಬಾ ಇಷ್ಟವಾಗಿದ್ದು ಟಮಟೆಯ ಜೊತೆಗೆ ಪದಗಳನ್ನು ಕಟ್ಟಿ ಹಾಡುವುದೆಂದರೆ ಅವನಿಗೆ ತುಂಬಾ ಇಷ್ಟವಾಗಿದೆ. ಈ ಕತೆಯಲ್ಲಿ ಗ್ರಾಮೀಣ ಪರಿಸರದಲ್ಲಿ ನಡೆಯುವುದನ್ನು ಅಚ್ಚುಕಟ್ಟಾಗಿ ಚಿತ್ರಿಸಿದ್ದಾರೆ. ಕುಕ್ಲನು ನೆನಪುಗಳನ್ನು ಮೆಲುಕು ಹಾಕಿ ಹಾಡುತ್ತಿದ್ದನು. ಮೇಲೇಗೌಡನ ಆಲೆಮನೆಯಲ್ಲಿ ಓಬುಳನಾಯ್ಕನ ಗಾಣದ ಎತ್ತುಗಳು ಅದಲಿಸುತ್ತಿರುವಾಗ ದನಿಯೆತ್ತಿ ಹಾಡುತ್ತಿದ್ದನು. ಕುಕ್ಲನಿಗೆ ಹೆಚ್ಚು ವಯಸ್ಸಾಗಿದ್ದರಿಂದ ಅವನು ಚಳಿಯನ್ನು ಹೆಚ್ಚಾಗಿ ತಡೆದುಕೊಳ್ಳುತ್ತಿರಲಿಲ್ಲ.

"ಆದ್ರೆ ಕುಕ್ಲ ನಿಟುಸ್ರು ಬಿಡ್ತಾನೀಗ. ಅವ್ನ ವಾರ್ಗೆಯೋರೆ ಆದ ಕದ್ರ ನರ್ಸ ಈಗ್ಲೂವೇ ಕೂಲಿ ಕೆಲಸಕ್ಕೆ ಹೋಗ್ತಾರೆ. ಆದರೆ ಕುಕ್ಲನ ದೌರ್ಭಾಗ್ಯ, ವಿಧಿ, ಎಮರ್‌ಜೆನ್ಸಿ ಎನ್ನೋ ಮಾರಿ ಕುಕ್ಲನ ಶಕ್ತೀನ ಸೊರಸೊರ ಅಂತ ಹೀರ್ಬಿಟ್ಟಿತ್ತು. ಆ ಕಾಲ್ದಾಗೆ ಸೆಕ್ರೇಟರಿಯೋರು ಹಾಗೂ ಡಾಕ್ಟರು ಇಬ್ರೂ ಸೇರಿ ಕುಕ್ಲನನ್ನು ಹೆದರ್ಸಿ ಮೂರು ಸಾರಿ ಆಪ್ಲೇಷನ್ ಮಾಡಿಸಿದ್ರು; ಮೂರ್ ಸಾರೀನೂ ನೂರ್ ನೂರ್ ರೂಪಾಯ್ನ ಎಣಿಸಿ ಕುಕ್ಲನ ಕೈಯ್ಯಾಗಿಟ್ಟು ಪಾಪಚ್ಚಿ ಹೋಟೆಲ್‌ನಾಗೆ ಎಲ್ಡ್ ಎಲ್ಡ್ ಮಸಾಲೆ ಕೊಡ್ಸಿ ಮಿಕ್ಕ ಮುನ್ನೂರು ಮುನ್ನೂರ್ ರೂಪಾಯ್ನ್ ತಾವ್ ಹಂಚ್ಕೊಂಡಿದ್ರು. ವಿಷ್ಯ ಯಾರ್ಗೂ ತಿಳಿಸ್ಬಾರ್ದು ಅಂತ ಹೇಳಿದ್ರು. ಕುಕ್ಲ ಯಾರತ್ರಾನೂ

ಬಾಯ್ ಬಿಚ್ಚಿರ್ಲಿಲ್ಲ. ದಿನ ಕಳೆದಂತೆ ಕುಕ್ಲನ ಮೈ ಕಸುವನ್ನು ಕಳೆದುಕೊಂಡು ಜೀವ ಉಸೂರ್ ಎಂದಿತ್ತು. ಕೈಕಾಲು ಗಟ್ಟಿಯಾಗಿದ್ದಾಗ ಅವನನ್ನು ಆದರಿಸುತ್ತಿದ್ದಂತಹ ಜನ ಕೆಲಸ ಮಾಡಲಾಗದೆ ಮೂಲೆಗೆ ಬಿದ್ದಾಗ ಕ್ಯಾರೆ ಕೆತ್ತರೆ ಅನ್ನಲಿಲ್ಲ. ಬೇರೆಯವರೊತ್ತಟ್ಟಿಗಿರ್ಲಿ ಸ್ವಂತ ಮಗನೆ ವಿಚಾರಿಸ್ಲಿಲ್ಲ. ಒಬ್ಬನೇ ಮಗ ಮಸಾಲ್ಗಿ ಕುಕ್ಲನನ್ನು ಅಪ್ಪ ಅಂತ ಒಂದಿನಾನು ಮುತುವರ್ಜಿಯಿಂದ ನೋಡ್ಡೋನಲ್ಲ. ಸೊಸೆಯಂತೂ ಗಯ್ಯಾಳಿಗಂಪ್ಲಿ ಆಗಿದ್ದಳು.ಕುಕ್ಲ ಏನಾದ್ರೂ ಮಾತನಾಡಿದ್ರೆ ಸಾಕು ಗಜ್ಜಿ ನಾಯಿಯಂತೆ ಅವನ ಮೇಲೆ ಬೀಳ್ತಿದ್ಲು."[೧೬]

ಮುಗ್ಧ ಕುಕ್ಲನನ್ನು ಸೆಕ್ರೆಟ್ರಿಯವರು ಹಾಗೂ ಡಾಕ್ಟರವರು ಬೆದರಿಕೆಯನ್ನೊಡ್ಡಿ ಆಪರೇಷನನ್ನು ಮಾಡಿಸಿ ಅವನನ್ನು ಅಸಹಾಯಕನನ್ನಾಗಿ ಮಾಡುತ್ತಾರೆ. ಅದರಿಂದ ಬಂದ ಹಣವನ್ನು ಅವರೇ ಕಿತ್ತುಕೊಂಡು ಬಿಡುತ್ತಾರೆ. ಅವನನ್ನು ಕುಬ್ಜನನ್ನಾಗಿ ಮಾಡುತ್ತಾರೆ. ದಿನವೂ ಕಳೆದಂತೆ ಕ್ಷೀಣಿಸುತ್ತಾ ಹೋಗುತ್ತಾನೆ. ಇದರಲ್ಲಿ ಬಡವರನ್ನು ಕಂಡರೆ ತಾತ್ಸಾರ ಹಾಗೂ ಅವರಿಗೆ ತೊಂದರೆಯನ್ನು ನೀಡುವುದು ಗ್ರಾಮೀಣ ಸಂಸ್ಕೃತಿಯಲ್ಲಿ ನೋಡಬಹುದು. ತನ್ನ ಮಗನೂ ಹಾಗೂ ಸೊಸೆಯೂ ಕುಕ್ಲನನ್ನು ಅಸಡ್ಡೆಯಿಂದ ನೋಡಿಕೊಳ್ಳುವುದು ಕಾಣುತ್ತದೆ. ಮೊದಲು ಅವನು ಮಾರಮ್ಮನ ಜಾತ್ರೆಯಲ್ಲಿ ತಮಟೆಯನ್ನು ಬಡಿಯುವುದಕ್ಕೆ ನಿಂತುಕೊಂಡರೆ ಬೆಳಗ್ಗಿನ ಜಾವದವರೆಗೂ ಸಹ ಬಡಿಯುತ್ತಿದ್ದನು. ಸೊಸೆ ಆದಂತವಳು ಮಾವ ಅಂತ ಮರ್ಯಾದೆನೂ ಸಹ ನೀಡುತ್ತಿರಲಿಲ್ಲ. "ಥೂ ನಿನ್ ಬಾಯಿಗ್ ಮಣ್ಣಾಕ ನಿನ್ ಗಂಟ್ಲಿಗೆ ನನ್ನ ಗಡ್ಡೆ ಹಾಕ. ನಿನ್ ಮಕಕ್ಕೆ ನನ್ ಸೀರೆ ದಬಾಕ್" ಎಂದು ಬೈಯುತ್ತಿದ್ದಳು.

"ಅಲಲಾ ಕುಕ್ಲ ನೀನೂ ಮೀಟಿಂಗ್‌ಗೆ ಹೊಂಟೆಯೇನ್ಲ. ಆಂ, ನಿನ್ನ ಮಗಳು ಮೈ ನೆರೆದವಳಂತೆ. ಮೊನ್ನೆ ಕಳೆ ಕೀಳೋ ಆಳ್ಗುಳು ಮಾತಾಡ್ಕೋತಿದ್ರು . . . ." ಎಂದು ಮಾತು ತೆಗೆದಿದ್ದ. ಅದಕ್ಕುತ್ತರವಾಗಿ ಕುಕ್ಲ ಸೊಂಟದ ಮ್ಯಾಗೆ ಒಂದು ಕೈ ಇಟ್ಟುಕೊಂಡ.

"ಏನ್ಲಾ ಕುಕ್ಲ . . . .?" ಎಂದ.

"ಆಯ್, ಸೆಕ್ರೆಟರಿಯೋರ್ನ ನೋಡ್ಬೇಕಿತ್ತು" ಮೆಲ್ಲನೆ ನುಡಿದ.

"ಯಾಕ್ಲ. . . .?" ಏನೂ ತಿಳಿಯದವನಂತೆ ಹನುಮ ಕೇಳಿದ.

"ಮನೆಗೆ ಸಾಲ ಕೊಡ್ತಾರಂತೆ. ಗುಡ್ಲೆಲ್ಲ ಕರಾಬೆದ್ದೋಗದೆ. . . ಹಸಿರು ಕಾರ್ಡು. . .ವಿನಯವಾಗಿ ಧ್ವನಿಯನ್ನು ಎತ್ತರಿಸಿ ಹೇಳಿದ.

"ಯಾಕ್ಲೆ ಮಗಾ ಇದಾನಲ್ಲ, ನಿಂಗೇನ್ಲಾ" ಎಂದರು ಸೆಕ್ರೆಟರಿ ಒಳಗಡೆಯಿಂದ.

"ಆಯ್ ಬುಡಿ ಸ್ವಾಮಿ, ಬುಡ್ತು ಅನ್ನಿ. ಅವನೊಬ್ಬ ಅಲಾಲ್‌ಕೋರ. ನಂದ ನಾನೇ ತಿನ್ನಾ ಇದೀನಿ" ಗೊಣಗಿದ ಕುಕ್ಲ. ಹನುಮ ಒಳಗೆ ಹೋದ, ಸೆಕ್ರೇಟರಿಯವರ ಹತ್ತಿರ ಏನೇನೋ ಮಾತನಾಡಿದವನು ಹೊರಕ್ಕೆ ಬಂದ.[೧೭]

ಹೀಗೆ ಕುಕ್ಲನನ್ನು ಸೆಕ್ರೇಟರಿಯವರು ಮೋಸವನ್ನು ಮಾಡುತ್ತಾ ಹೋಗುತ್ತಾರೆ. ಅವನ ಬಡತನ, ಹಸಿವನ್ನು ಬಳಸಿಕೊಂಡು ಎಲ್ಲರೂ ಅಸಡ್ಡೆಯಿಂದ ಕಾಣುತ್ತಾರೆ. ಅವನ ಜಮೀನೆಲ್ಲಾವನ್ನು ಊರಿನ ಗೌಡರಲ್ಲೆ ಮೋಸದಿಂದ ಕಿತ್ತುಕೊಂಡು ಅವನನ್ನು ಗುಡಿಸಲೇ ಗತಿಯಾಗಬೇಕೆಂದು ಸಂಚು ಹೂಡುತ್ತಾರೆ.

ಒಬ್ಬ ಜಮೀನನ್ನು ಬರೆಯಿಸಿಕೊಂಡು ಕ್ಯಾರೆ ಅನ್ನಲಿಲ್ಲ. ಇನ್ನೊಬ್ಬ ಜಮೀನು ಕೊಡಲಿಲ್ಲವೆಂಬ ಕಾರಣದಿಂದ ಬೈಯ್ದು ವಾಪಸ್ಸು ಕಳುಹಿಸಿದ್ದ.

"ಯಾಮ್ಮಾ ಒಬ್ಬಟು ಹಾಕ್ರಿ ತಾಯಿ" ಎಂದ ಕುಕ್ಲನ ಮಾತು ಕೇಳಿ ಅಲ್ಲಿಯೇ ಮಂಚದ ಮೇಲೆ ಕುಳಿತಿದ್ದ ಬಂಗಾರುಶೆಟ್ಟಿ ತನ್ನ ಕೊರಳಲ್ಲಿದ್ದ ಬಂಗಾರದ ಚೈನನ್ನು ಕೈಲಿ ಆಡಿಸುತ್ತ "ಏನ್ಲೆ ಕುಕ್ಲ ಐವತ್ತು ರೂಪಾಯಿ ಕೊಟ್ಟು ಐದು ವರ್ಷ ಆಯ್ತು. ನೀನ್ ಇನ್ ಕೊಡಲ ಗೊತ್ತು. ಅದರ ಬಡ್ಡಿಗೆ ಈಗ ಒಬ್ಬಟ್ಟು ಹಾಕ್ಬೇಕೇನ್ಲೆ ಮುಟ್ಠಾಳ. ಕಳ್‌ನನ್ಮಗ ನೀನು. ಸಾಯೋಗು ನೀ ಸತ್ರ ದೇಶ್ವೇನ್ ಹಾಳಾಗಲ್ಲ".[೧೮] ಕುಕ್ಲನು ಊರೆಲ್ಲ ಅಲೆದನು ಯಾರು ಸಹ ಒಂದು ತುತ್ತು ಅನ್ನವನ್ನು ನೀಡುವುದಿಲ್ಲ. ಕೊನೆಗೆ ತನ್ನ ಗುಡಿಸಲಿಗೆ ಹೋಗಿ ಪ್ರಾಣವನ್ನು ಬಿಡುತ್ತಾನೆ. ಇಲ್ಲಿ ನಿರ್ಗತಿಕರನ್ನು ಕಂಡರೆ ಗ್ರಾಮಗಳಲ್ಲಿ ಅಸಡ್ಡೆ ತೋರಿಸುವುದನ್ನು ಕಾಣಬಹುದು. ಹೊಸ ಸಂವತ್ಸರ ಯುಗಾದಿ ಬಂದರು ಹಳೆ ಚಿಗುರು ಹೋಗಿ ಹೊಸ ಚಿಗುರು ಬಂದರು ಗ್ರಾಮಗಳಲ್ಲಿ ಈ ರೀತಿಯ ಚಿತ್ರಣ ಇನ್ನೂ ಮಾಸಿಲ್ಲ ಎಂದು ತಿಳಿಯಬಹುದು.

ಗ್ರಾಮೀಣ ಸಮಾಜದ ಜನರು ತಮ್ಮ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ನಿರ್ಮಾಣ ಮಾಡಿಕೊಂಡಿರುವ ವ್ಯವಸ್ಥೆ, ಅವ್ಯವಸ್ಥೆಯಲ್ಲಿರುವ ಪರಸ್ಪರ ಸಂಬಂಧಗಳು ಇವುಗಳನ್ನು ವಿಶ್ಲೇಷಿಸಲಾಗಿದೆ. ಒಂದು ಕುಟುಂಬದ ಆಗುಹೋಗುಗಳು ಅಂತಹ ಅನೇಕ ಕುಟುಂಬಗಳ ಆಗುಹೋಗುಗಳೊಡನೆ ಆರ್ಥಿಕ, ರಾಜಕೀಯ, ಧಾರ್ಮಿಕ ಪರಿಸ್ಥಿತಿಗಳೊಡನೆ ಗ್ರಾಮಗಳನ್ನು ಆವರಿಸಿಕೊಂಡಿರುವ ಭೌತಿಕ ಮತ್ತು ಜೈವಿಕ ಅಂಶಗಳೊಡನೆ ಹೇಗೆ ತಳುಕು ಹಾಕಿಕೊಂಡಿವೆ ಎಂಬುದರ ಸಮಗ್ರ ದೃಷ್ಟಿಯಿಂದ ನೋಡಲಾಗಿದೆ.

ಜಾಗರೀಕರಣದ ಈ ಸಂದರ್ಭದಲ್ಲಿ ಪ್ರಕೃತಿಯ ಸಂಪನ್ಮೂಲಗಳು ಬಲಾಢ್ಯ ರಾಷ್ಟ್ರಗಳ ವಶವಾಗುತ್ತಿವೆ. ಜಾಗತೀಕರಣ, ಉದಾರೀಕರಣ ಮತ್ತು ಖಾಸಗೀಕರಕಣಗಳಿಂದಾಗಿ ಮಾನವ ಸಮಾಜದ ಎಲ್ಲ ಸಂಬಂಧಗಳೂ ಮಾರುಕಟ್ಟೆಯ ಸ್ವರೂಪ ಪಡೆದುಕೊಳ್ಳುತ್ತಿವೆ. ಗ್ರಾಮೀಣ ಪ್ರದೇಶಗಳು ಮಾನವೀಯತೆಗೆ, ಮಾನವ ಸಂಬಂಧಗಳಿಗೆ ಮುಖ್ಯವಾದ ಸ್ಥಾನ ಮತ್ತು ಆದ್ಯತೆಯನ್ನು ನೀಡುತ್ತಿದ್ದವು. ಆದರೆ, ಜಾಗತೀಕರಣದ ಪ್ರಭಾವದಿಂದ ಮಾನವ ಸಂಬಂಧಗಳು ಆರ್ಥಿಕ ಸ್ಥಿತಿಗತಿಗಳನ್ನು ಅವಲಂಬಿಸಿ ನಿರ್ಧಾರವಾಗುತ್ತಿವೆ. ಇಂದು ಮಾರುಕಟ್ಟೆಯೇ ಎಲ್ಲ ಸಂಬಂಧಗಳನ್ನು ನಿಯಂತ್ರಿಸುವಂತಾಗಿದೆ. ಬಂಧು, ಬಳಗ, ಅಣ್ಣ, ತಮ್ಮ, ಅಕ್ಕ, ತಂಗಿ, ತಂದೆ, ಮಕ್ಕಳು, ತಾಯಿ ಇವೆಲ್ಲರ ಮಧ್ಯೆ ಇದ್ದ ಸಂಬಂಧಗಳು ಮಾರುಕಟ್ಟೆಯ ಸಂಬಂಧಗಳಾಗಿ ಪರಿವರ್ತಿತವಾಗುತ್ತಿವೆ. ಮನುಷ್ಯತ್ವಕ್ಕೆ ಬೆಲೆಯೇ ಇಲ್ಲವಾಗಿದೆ. ಮನುಷ್ಯ ಸಂಬಂಧಗಳನ್ನು ಹಾಳು ಮಾಡಿರುವ ಈ ಜಾಗತೀಕರಣ ಜನತೆಯ ಗ್ರಾಮೀಣ ಸಂಸ್ಕೃತಿಯನ್ನು ಹಾಳು ಮಾಡುತ್ತಿದೆ. ಜನರನ್ನು ಅಪಮೌಲ್ಯಗೊಳಿಸುತ್ತಿದೆ. ಅವರ ಕಲೆ, ನೃತ್ಯ, ಧರ್ಮ, ಶಿಕ್ಷಣ, ಸಾಹಿತ್ಯ, ಜಾನಪದ ಎಲ್ಲವನ್ನೂ ಹೀನಾಯ ಮಾಡುತ್ತಿದೆ. ಜನರ ಹಳ್ಳಿಗಾಡಿನ ಭಾಷೆಯನ್ನು ನಾಶ ಮಾಡುತ್ತಿದೆ ಎಂದು ಹೇಳಲಾಗಿದೆ.

ಅಡಿಟಿಪ್ಪಣಿಗಳು

(೧) ಬಾರಕ್ಕ ಬೆಳದಿಂಗಳೆ, ಕೇಶವರೆಡ್ಡಿ ಹಂದ್ರಾಳ, ಪುಟ ಸಂಖ್ಯೆ-೧೪

(೨) ಒಂದು ಹಿಡಿಮಣ್ಣು, ಡಾ.ಸುರೇಶ ಪಾಟೀಲ , ಪುಟ ಸಂಖ್ಯೆ-೦೮

(೩) ಹಂದ್ರಾಳ, ಕೇಶವರೆಡ್ಡಿ ಹಂದ್ರಾಳ, ಪುಟ ಸಂಖ್ಯೆ-೧೨

(೪) ಹಂದ್ರಾಳ , ಕೇಶವರೆಡ್ಡಿ ಹಂದ್ರಾಳ, ಪುಟ ಸಂಖ್ಯೆ-೧೫

(೫) ಹಂದ್ರಾಳ, ಕೇಶವರೆಡ್ಡಿ ಹಂದ್ರಾಳ, ಪುಟ ಸಂಖ್ಯೆ-೧೯

(೬) ಜಡೆಗೆ ಗುಲ್‌ಮೊಹರ್ ಕೈಗಳು, ಕೇಶವರೆಡ್ಡಿ ಹಂದ್ರಾಳ, ಪುಟ ಸಂಖ್ಯೆ-೬೩

(೭) ಜಡೆಗೆ ಗುಲ್‌ಮೊಹರ್ ಕೈಗಳು, ಕೇಶವರೆಡ್ಡಿ ಹಂದ್ರಾಳ, ಪುಟ ಸಂಖ್ಯೆ-೬೩

(೮) ಜಡೆಗೆ ಗುಲ್‌ಮೊಹರ್ ಕೈಗಳು, ಕೇಶವರೆಡ್ಡಿ ಹಂದ್ರಾಳ, ಪುಟ ಸಂಖ್ಯೆ-೬೫

(೯) ಜಡೆಗೆ ಗುಲ್‌ಮೊಹರ್ ಕೈಗಳು, ಕೇಶವರೆಡ್ಡಿ ಹಂದ್ರಾಳ, ಪುಟ ಸಂಖ್ಯೆ-೭೦

(೧೦) ಒಂದು ಹಿಡಿ ಮಣ್ಣು, ವೀರಭದ್ರ, ಪುಟ ಸಂಖ್ಯೆ-೦೮

(೧೧) ಹಂದ್ರಾಳ , ಕೇಶವರೆಡ್ಡಿ ಹಂದ್ರಾಳ, ಪುಟ ಸಂಖ್ಯೆ-೩೫೨

(೧೨) ಹಂದ್ರಾಳ , ಕೇಶವರೆಡ್ಡಿ ಹಂದ್ರಾಳ, ಪುಟ ಸಂಖ್ಯೆ-೩೫೬

(೧೩) ಹಂದ್ರಾಳ , ಕೇಶವರೆಡ್ಡಿ ಹಂದ್ರಾಳ, ಪುಟ ಸಂಖ್ಯೆ-೩೭

(೧೪) ಹಂದ್ರಾಳ , ಕೇಶವರೆಡ್ಡಿ ಹಂದ್ರಾಳ, ಪುಟ ಸಂಖ್ಯೆ-೪೩

(೧೫) ಹಂದ್ರಾಳ , ಕೇಶವರೆಡ್ಡಿ ಹಂದ್ರಾಳ, ಪುಟ ಸಂಖ್ಯೆ-೨೧

(೧೬) ಹಂದ್ರಾಳ , ಕೇಶವರೆಡ್ಡಿ ಹಂದ್ರಾಳ, ಪುಟ ಸಂಖ್ಯೆ-೨೨

(೧೭) ಹಂದ್ರಾಳ , ಕೇಶವರೆಡ್ಡಿ ಹಂದ್ರಾಳ, ಪುಟ ಸಂಖ್ಯೆ-೨೫

(೧೮) ಹಂದ್ರಾಳ ,ಕೇಶವರೆಡ್ಡಿ ಹಂದ್ರಾಳ, ಪುಟ ಸಂಖ್ಯೆ-೩೦

ಅಧ್ಯಾಯ – ೫

ಸಮಾರೋಪ

ಅಧ್ಯಾಯ–೫

ಸಮಾರೋಪ

ಕೇಶವರೆಡ್ಡಿ ಹಂದ್ರಾಳರವರ ಕಥೆಗಳು ಗ್ರಾಮೀಣ ನೆಲೆಗಟ್ಟಿನಲ್ಲಿ ರಚನೆಗೊಂಡಿರುವ ಕಥೆಗಳಾಗಿವೆ. ಕಥೆಗಳ ಮೂಲದ್ರವ್ಯವೇ ಹಳ್ಳಿಯ ಜೀವನ ಮತ್ತು ಹಳ್ಳಿಗರ ಇಡೀ ಬದುಕಿನ ಚಿತ್ರಣವಾಗಿದೆ. ನಗರೀಕರಣದಿಂದಾಗಿ ಹಳ್ಳಿಗಳೆಲ್ಲವೂ ನಗರಗಳಾಗಿ ಪರಿವರ್ತನೆಗೊಳ್ಳುತ್ತಿರುವ ಪ್ರಸ್ತುತ ದಿನಮಾನಗಳಲ್ಲಿ ಕೇಶವರೆಡ್ಡಿ ಹಂದ್ರಾಳರವರ ಕಥೆಗಳಲ್ಲಿ ಗ್ರಾಮ ಸಂಸ್ಕೃತಿಯು ಎದ್ದು ಕಾಣುತ್ತವೆ. ಕೇಶವರೆಡ್ಡಿ ಹಂದ್ರಾಳರವರ ಕಥೆಗಳಲ್ಲಿ ಜಾತ್ಯಾತೀತ ನಿಲುವುಗಳನ್ನು ಗುರುತಿಸಬಹುದಾಗಿದೆ. ಜಾಗತೀಕರಣ, ನಗರೀಕರಣ, ಉದಾರೀಕರಣ, ಖಾಸಗೀಕರಣ, ಗಣಕೀಕರಣ ಮುಂತಾದ ಹತ್ತು ಹಲವು 'ಕರಣ'ಗಳಿಂದ ದೇಶ ಮುಂದುವರೆಯುತ್ತಿರುವ ದಿನಗಳಲ್ಲಿಯೂ ಸಹ ಕೇಶವರೆಡ್ಡಿ ಹಂದ್ರಾಳರವರ ಕಥೆಗಳು ಹಳ್ಳಿಯತ್ತ ಮುಖ ಮಾಡುವಂತೆ ಯುವಕರಿಗೆ ಜಾಗೃತಿಯ ಮತ್ತು ಪ್ರೇರಣೆಯನ್ನೀಯುವುದರಲ್ಲಿ ಬಹುತೇಕ ಯಶಸ್ವಿಯಾಗುತ್ತವೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ದೇಶ ಬದುಕುತ್ತಿದ್ದರೂ, ಪ್ರಸ್ತುತವೂ ಹಳ್ಳಿಗಳಲ್ಲಿ ಜಾತೀಯತೆಯ ದರ್ಪ, ಬಡವರ ದೀನದಲಿತರ ಹಸಿವಿನ ಬದುಕು.

ಸವಲತ್ತುಗಳಿಲ್ಲದೆ ಬಡತನ ಬೇಗೆಯಲ್ಲೇ ಬೇಯುವ ಗ್ರಾಮೀಣರು, ಊರಿನ ಮುಖಂಡರ ಅಹಂಮಿಕೆ, ಶೋಷಣೆಯಲ್ಲಿರುವ ಸ್ತ್ರೀ, ಪುರುಷ ಪ್ರಧಾನ ವ್ಯವಸ್ಥೆಯ ಸ್ತ್ರೀಯರನ್ನು ತಮ್ಮ ಸ್ವಾರ್ಥಕ್ಕಾಗಿ ಬಳಸಿಕೊಳ್ಳುವ ಹುನ್ನಾರಗಳು ಹಂದ್ರಾಳರ ಕತೆಗಳಲ್ಲಿ ಕಾಣಬಹುದು. ಜೀತಪದ್ಧತಿಯಲ್ಲೇ ಇಡೀ ಬದುಕನ್ನು ಸವೆಸುವ ಬಡವರ ಬದುಕು, ಅಧಿಕಾರಗಳ ದರ್ಪದಿಂದ ಬೇಯುವ ಬಡವರ ಚಿತ್ರಣವನ್ನು ಇವರ ಕತೆಗಳಲ್ಲಿ ಕಾಣಬಹುದು. ಹಂದ್ರಾಳರವರ ಕಥೆಗಳಲ್ಲಿ ಹಸಿವು ಮುಖ್ಯ ಪಾತ್ರವಾಗಿ ಚಿತ್ರಿತವಾಗಿದೆ. ಗ್ರಾಮೀಣ ಜನರ ಹಸಿವನ್ನೇ ಪ್ರಮುಖ ಪಾತ್ರವನ್ನಾಗಿ ಚಿತ್ರಿಸುವಲ್ಲಿ ಕೇಶವರೆಡ್ಡಿ ಹಂದ್ರಾಳರು ಯಶಸ್ವಿಯಾಗುತ್ತಾರೆ. ಸ್ವಾತಂತ್ರ್ಯ ಹೋರಾಟದ ಕ್ಷಣಗಳನ್ನು ಕಣ್ಣ ಮುಂದೆಯೇ ಕಟ್ಟಿಕೊಡುವಂತೆ ಓದುಗರಿಗೆ ಕೇಶವರೆಡ್ಡಿ ಹಂದ್ರಾಳರ ಕಥೆಗಳು ಕಂಡು ಬರುತ್ತವೆ.

ಯಾವುದೇ ಅಡೆತಡೆಗಳಿಲ್ಲದೆಯೇ ಹಂದ್ರಾಳರ ಕಥೆಗಳು ಓದಿಸಿಕೊಂಡು ಹೋಗುವ ಗುಣಗಳಿವೆ. ಬಂಡಾಯದ ಧ್ವನಿಯನ್ನು ಕೇಶವರೆಡ್ಡಿ ಹಂದ್ರಾಳರ ಕಥೆಗಳಲ್ಲಿ ಅಡಕಗೊಂಡಿರುವುದು ವಿಶೇಷತೆಯಾಗಿದೆ. ಕವಿಯೊಬ್ಬನ ಮಾನಸಿಕ ತುಮುಲಗಳನ್ನು ಸಾಹಿತಿಯೊಬ್ಬನ ಅಂತರಂಗವನ್ನು ಆತನ ಕೃತಿಗಳಲ್ಲಿ ಕಾಣುವಂತೆ ಲೇಖಕ ವಿಮರ್ಶೆಯ ನೆಲೆಗಟ್ಟಿನಿಂದ ಕೇಶವರೆಡ್ಡಿ ಹಂದ್ರಾಳರ ಕಥೆಗಳ ಅಧ್ಯಯನವನ್ನು ಸಹ ಕೈಗೊಳ್ಳಲು ಸಾಧ್ಯವಿರುವ ವಿಪುಲ ಅವಕಾಶವನ್ನು ನಮ್ಮೆದುರಿಗೆ ಹಂದ್ರಾಳರು ತೆರೆದಿಡುತ್ತಾರೆ.

ಕೇವಲ ಗ್ರಾಮೀಣ ಸಂಸ್ಕೃತಿಯನ್ನು ಮಾತ್ರ ಹಂದ್ರಾಳರವರ ಕಥೆಗಳು ವ್ಯಕ್ತಪಡಿಸುವುದಲ್ಲದೇ ಹಳ್ಳಿಯಿಂದ ನಗರಗಳಿಗೆ ವಲಸೆ ಬರುವ ಯುವಕರ ಚಿತ್ರವನ್ನು ಕಥೆಗಳು ಪರಿಚಯಿಸುತ್ತವೆ. ನಗರ ಪ್ರದೇಶಗಳಲ್ಲಿನ ಮುಗ್ಧ ಹಳ್ಳಿ ಯುವಕರ ಬರ್ಬರ, ದುಸ್ತರ ಬದಲಾವಣೆಯನ್ನು ಹಂದ್ರಾಳರವರು ಚಿತ್ರಿಸುತ್ತಾರೆ. ಹಲವು ಕನಸುಗಳನ್ನು ಹೊತ್ತು ನಗರಕ್ಕೆ ವಲಸೆ ಬರುವ ಹಳ್ಳಿಯ ಯುವ ಸಮುದಾಯ

ನಗರದ ಅತ್ಯಾಕರ್ಷಣೆಗಳಿಗೆ ಒಳಗಾಗಿ ಮರಳಿ ಗ್ರಾಮಗಳತ್ತಲೇ ಮುಖ ಮಾಡುವ ಕಥೆಗಳಿಂದಾಗಿ ಗ್ರಾಮೀಣ ಸಂಸ್ಕೃತಿಯ ಮಹತ್ವವನ್ನು ಓದುಗರಿಗೆ ಮತ್ತು ಇಂದಿನ ಯುವ ಪೀಳಿಗೆಯವರಿಗೆ ಹಂದ್ರಾಳ ನೀಡುವ ಸಂದೇಶವಾಗಿದೆ.

ಹಳ್ಳಿಯಿಂದಲೇ ನಗರಗಳು, ಹಳ್ಳಿಗರ ಉದ್ಧಾರದಿಂದಲೇ ದೇಶದ ಉದ್ಧಾರ, ಹಳ್ಳಿಯೇ ದೇಶದ ಬೆನ್ನೆಲುಬು, ಮಾತ್ರವಲ್ಲ ಗಾಂಧೀಜಿಯವರ ಗ್ರಾಮ ಸ್ವರಾಜ್ಯ ಪರಿಕಲ್ಪನೆಗೆ ಮತ್ತಷ್ಟು ಪುಷ್ಟಿಯನ್ನೊದಗಿಸುವಂತೆ ಹಂದ್ರಾಳರವರ ಕಥೆಗಳು ಚಿತ್ರಿತವಾಗಿ ಯಶಸ್ವಿಯಾಗುತ್ತವೆ. ಗಾಂಧೀಜಿಯವರ ಚಿಂತನೆಗಳ ಮೇಲೆಯೇ ಕಥೆಗಳು ಚಿತ್ರಿತವಾಗಿರುವಂತೆ ಮತ್ತು ಓದುಗರನ್ನು ಮತ್ತೆ ಮತ್ತೆ ಓದಬೇಕೆನ್ನುವಂತೆ, ಚಿಂತಿಸುವಂತೆ ಮಾಡುವಲ್ಲಿ ಕೇಶವರೆಡ್ಡಿ ಹಂದ್ರಾಳರವರ ಕಥೆಗಳಿವೆ.

ಒಟ್ಟಾರೆ ಹಂದ್ರಾಳರ ಕತೆಗಳು ಸಾಮಾನ್ಯ ಓದುಗನಿಗೆ ಸುಲಭವಾಗಿ ಅರ್ಥವಾಗುವ ಶೈಲಿಯಲ್ಲಿವೆ. ಹಂದ್ರಾಳರು ಒಬ್ಬ ಅಧಿಕಾರಿಯಾಗಿ ಜನಸಾಮಾನ್ಯರೊಂದಿಗೆ ಹೆಚ್ಚು ಒಡನಾಟವನ್ನು ಹೊಂದಿದ್ದರಿಂದ ಅವರು ಯಾವುದೇ ರೀತಿಯ ತಂತ್ರಗಳಿಗೆ ಭಾಷೆಯ ದೃಷ್ಟಿಯಲ್ಲಿ ನೀಡಲು ಹೋಗಲಿಲ್ಲ ಎಂದು ಹೇಳಬಹುದು. ಓದುಗನಿಗೆ ಕತೆಯು ಸುಲಭವಾಗಿ ತಲುಪಬೇಕು ಎನ್ನುವ ಅಂಶವೇ ಹಂದ್ರಾಳರವರಿಗೆ ಮುಖ್ಯವಾಗಿತ್ತು ಎನಿಸುತ್ತದೆ.

ಹಂದ್ರಾಳರ ಕತೆಗಳು ಆಧುನಿಕ ಕನ್ನಡ ಸಾಹಿತ್ಯಕ್ಕೆ ಒಂದು ಮಹತ್ವದ ತಿರುವನ್ನು ನೀಡಿದವು. ಜೊತೆಗೆ ಹೊಸ ಓದುಗ ಸಮುದಾಯವನ್ನು ಸಮಾಜದಲ್ಲಿ ನಿರ್ಮಿಸಿತು. ಇವರ ಕತೆಗಳಲ್ಲಿ ಕಂಡು ಬರುವ ಹಲವಾರು ಘಟನೆಗಳು ತಮ್ಮ ಸುತ್ತಮುತ್ತಲಿನ ಹಾಗೂ ತನ್ನದೇ ಗ್ರಾಮದ ಪರಿಸರದಲ್ಲಿ ನಡೆದಂತಹ ಘಟನೆಗಳೇ ಎಂದು ಭಾಸವಾಗುತ್ತದೆ. ಆ ಮೂಲಕ ಹಂದ್ರಾಳರ ಗ್ರಾಮೀಣ ಮತ್ತು ನಗರ ಸಮಾಜದ ಬದುಕನ್ನು ತಮ್ಮ ಕತೆಗಳಲ್ಲಿ ಅನಾವರಣಗೊಳಿಸಿರುವರು.

ಹಂದ್ರಾಳರವರ ಕತೆಗಳ ಪ್ರೇರಣೆ ಮತ್ತು ಪ್ರಭಾವಗಳಿಗೆ ಒಳಗಾಗಿ ಕತೆಗಾರರ ಹೊಸ ವರ್ಗವೊಂದು ಸೃಷ್ಟಿಯಾಯಿತು. ಆ ಮೂಲಕ ಕನ್ನಡ ಸಣ್ಣಕಥಾ ಕ್ಷೇತ್ರವು ಮತ್ತಷ್ಟು ವಿಸ್ತಾರವಾಗುತ್ತದೆ. ಹಂದ್ರಾಳರವರು ಕನ್ನಡ ಸಾಹಿತ್ಯ ಸಂಸ್ಕೃತಿಯ ಮೂಲಕ ಶ್ರೀಮಂತಗೊಳಿಸಿದರು ಎನ್ನುವುದನ್ನು ಅವರ ಕತೆಗಳು ಸ್ಪಷ್ಟಪಡಿಸುತ್ತವೆ. ಆದ್ದರಿಂದಲೇ ಹಂದ್ರಾಳರು ಕನ್ನಡ ಸಣ್ಣಕಥಾ ಸಾಹಿತ್ಯದ ಸಂದರ್ಭದ ಒಬ್ಬ ವಿಶಿಷ್ಟ ವ್ಯಕ್ತಿಯಾಗುತ್ತಾರೆ.

ಕೇಶವರೆಡ್ಡಿ ಹಂದ್ರಾಳರ ಕಥೆಗಳಲ್ಲಿ ಗ್ರಾಮ ಸಂಸ್ಕೃತಿಯ ಕಥಾ ವಿನ್ಯಾಸವು ಗ್ರಾಮೀಣಕ್ಕೆ ಹೆಚ್ಚು ಒತ್ತು ನೀಡುತ್ತಾ, ಜನಸಾಮಾನ್ಯರ ಕನಸುಗಳಿಗೆ ಹಂದ್ರಾಳರ ಕಥೆಗಳು ಮುಖ್ಯವಾಗಿವೆ. ಹಂದ್ರಾಳರ ಕಥೆಗಳು ಸಾಮಾಜಿಕ ಕಳಕಳಿ ಮತ್ತು ಸಾಹಿತ್ಯವನ್ನು ಸಾವಯವತೆಯಲ್ಲಿ ಕಾಣುವ ಕಣ್ಣು, ಇವರ ಕಥೆಗಳು ಸಮಕಾಲೀನ ಆಶಯಗಳ ಅಂತರಂಗವನ್ನು ಒದಗಿಸಿಕೊಟ್ಟಿವೆ. ಮನುಷ್ಯ ಪ್ರೀತಿಗಳು ಮರೆಯಾಗುತ್ತಿರುವಾಗ ಇವರ ಕಥೆಗಳು ಪ್ರಸ್ತುತತೆಯಲ್ಲಿ ಮುಖ್ಯವಾಗುತ್ತವೆ.

ಇವರ ಕಥೆಗಳು ಇಂದಿನ ಸಮಾಜಕ್ಕೆ ಪ್ರಸ್ತುತವೆನಿಸುತ್ತದೆ. ಇಂಗ್ಲೀಷ್ ಭಾಷೆಯನ್ನು ಬಿಟ್ಟು ಗ್ರಾಮಭಾಷೆಗೆ ಹೆಚ್ಚಿನ ಒಲವು ತೋರಿಸುವ ಇವರ ಕನ್ನಡದ ಪ್ರೀತಿಯು ಅನನ್ಯವಾದುದು. ಕೇಶವರೆಡ್ಡಿ ಹಂದ್ರಾಳರವರ ಕಥೆಗಳು ಕಥಾ ರಚನಾ ವಿನ್ಯಾಸ ಕ್ರಮ, ಓಘ, ಬಂಧ ಮತ್ತು ನಿರ್ದಿಷ್ಟ ಚೌಕಟ್ಟಿನೊಳಗೆ ರಚನೆಗೊಂಡು ಮುದ್ದಣ್ಣನ ಕಥೆಯ ಸಾಮಾನ್ಯ ಚಿತ್ರಕ್ಕೆ ಸುವರ್ಣದ ಚೌಕಟ್ಟು ಎನ್ನುವಂತೆ ಗ್ರಾಮೀಣ ಪ್ರದೇಶದ ಕಥಾ ಚೌಕಟ್ಟಿನೊಳಗೆಯೇ ಸುಂದರವಾದ ಬದುಕನ್ನು ಬಿತ್ತ ಬಿತ್ತಿಯಲ್ಲಿ ಶಾಶ್ವತವಾಗಿ ನೆಲೆ ನಿಲ್ಲುವಂತೆ ಮಾಡುತ್ತವೆ. ಕಥೆಗಳಲ್ಲಿ ಬಳಕೆಗೊಂಡು ಆಧುನಿಕತೆಯ ವ್ಯಾಖ್ಯಾನ ಮತ್ತು ಪ್ರಭಾವವನ್ನು ಕೇಶವರೆಡ್ಡಿ ಕಥೆಗಳಲ್ಲಿ ಗುರುತಿಸಬಹುದಾಗಿದೆ. ನವನಾಗರೀಕತೆಯ ಸ್ಪರ್ಶದಿಂದ ಹಂದ್ರಾಳರವರ ಕಥೆಗಳಲ್ಲಿ ಪಾತ್ರಗಳು ಇಂಗ್ಲೀಷ್‌ನ ಪ್ರಭಾವಕ್ಕೊಳಗಾಗಿರುವುದು ಇಂಗ್ಲೀಷ್‌ನ ಪದಗಳ ಬಳಕೆಯಲ್ಲಿ ಎದ್ದು ಕಾಣುತ್ತದೆ.

ಗ್ರಾಮೀಣರ ಜನರು ಹಳ್ಳಿಯನ್ನು ತೊರೆದು ನಗರಕ್ಕೆ ದಾಪುಗಾಲು ಇಡುತ್ತಿರುವವರಿಗೆ ಇವರ ಕಥೆಗಳು ಮುಖ್ಯವಾಗುತ್ತವೆ. ನಗರದಿಂದ ಮತ್ತೆ ಗ್ರಾಮೀಣದ ನೆನಪು ಹಾಗೂ ಗ್ರಾಮೀಣಕ್ಕೆ ಮರಳಿ ಹೋಗುವುದಕ್ಕೆ ಹಂಬಲಿಸಬೇಕು, ಈ ಒಂದು ನಿಟ್ಟಿನಲ್ಲಿ ನನ್ನ ಸಂಶೋಧನೆ ಕೈಗೊಳ್ಳಲಾಗಿದೆ.

ಸಂಶೋಧನೆಯ ಫಲಿತಗಳು:

* ಸ್ತ್ರೀವಾದಿ ನೆಲೆಗಟ್ಟಿನಲ್ಲಿ ರಚನೆಗೊಂಡಿರುವ ಬಗೆ
* ದಲಿತ ಸಂವೇದನೆ ಮಾಡಿ ಬಂದಿರುವ ಬಗೆ
* 'ಅಹಿಂದ' ಪರಿಕಲ್ಪನೆಗೆ ಕಥೆಗಾರರು ನೀಡಿರುವ ಒತ್ತು
* ಪರಿಸರದ ಬಗೆಗಿನ ಪ್ರೇಮ ಮತ್ತು ಸಾಹಿತಿಯೊಬ್ಬರಿಗಿರಬೇಕಾದ ಸಾಮಾಜಿಕ ಕಾಳಜಿಯ ಅಭಿವ್ಯಕ್ತಿ
* ಕಥೆಗಾರರು ಪ್ರಸ್ತುತ ಸಮಾಜವನ್ನು ನೋಡುವ ಚಿಕಿತ್ಸಕ ದೃಷ್ಟಿಕೋನ
* ನಗರ ಮತ್ತು ಹಳ್ಳಿಗರ ಬದುಕನ್ನು ಮುಖಾಮುಖಿಯನ್ನಾಗಿಸುವ ಸಂಘರ್ಷ
* ಸಾಮಾಜಿಕ ಸಮಸ್ಯೆಗಳಾದ ಜಾತೀಯತೆ, ಜೀತಪದ್ಧತಿ, ಅಧಿಕಾರಶಾಹಿತ್ವ, ದಲಿತ ದೌರ್ಜನ್ಯ, ಸ್ತ್ರೀಶೋಷಣೆಯ ಅನಾವರಣವನ್ನು ಕೇಶವರೆಡ್ಡಿ ಹಂದ್ರಾಳರವರು ಯಶಸ್ವಿಯಾಗಿ ಕೈಗೊಂಡಿದ್ದಾರೆ.

ಪರಾಮರ್ಶನ ಗ್ರಂಥಗಳು

(1) ವಿಮರ್ಶೆಯ ದಾರಿಯಲ್ಲಿ : ಸುಮತೀಂದ್ರ ನಾಡಿಗ
ಕರ್ನಾಟ ಬುಕ್ ಏಜೆನ್ಸಿ
ಬೆಂಗಳೂರು 1997

(2) ಹಂದ್ರಾಳರ ಕಥಾಜಗತ್ತು-1 : ಕೇಶವರೆಡ್ಡಿ ಹಂದ್ರಾಳ
ಸಿವಿಜಿ ಪಬ್ಲಿಕೇಷನ್, ಬೆಂಗಳೂರು 2017

(3) ಹಂದ್ರಾಳರ ಕಥಾ ಜಗತ್ತು-2 : ಕೇಶವರೆಡ್ಡಿ ಹಂದ್ರಾಳ
ಸಿವಿಜಿ ಪಬ್ಲಿಕೇಷನ್, ಬೆಂಗಳೂರು 2017

(4) ಬೆಸಗರಹಳ್ಳಿ ರಾಮಣ್ಣನವರ ಆಯ್ದ ಕಥೆಗಳು : ಬಿ.ಆರ್.ರವಿಕಾಂತೇಗೌಡ
ಕನ್ನಡ ಸಾಹಿತ್ಯ ಪರಿಷತ್ತು,
ಬೆಂಗಳೂರು 2014

(5) ಜಡೆಗೆ ಗುಲ್‌ಮೊಹರ್ ಕೈಗಳು : ಕೇಶವರೆಡ್ಡಿ ಹಂದ್ರಾಳ
ಕ್ರಾಂತಿಸಿರಿ ಪ್ರಕಾಶನ, ಬೆಂಗಳೂರು
2001

(6) ಈ ಕ್ಷಣದ ಬುದ್ಧ : ಕೇಶವರೆಡ್ಡಿ ಹಂದ್ರಾಳ
ಸ್ವಪ್ನ ಬುಕ್ ಹೌಸ್, ಬೆಂಗಳೂರು
2016

(7) ರಾಜಧಾನಿಯ ರಸ್ತೆಗಳಲ್ಲಿ : ಕೇಶವರೆಡ್ಡಿ ಹಂದ್ರಾಳ
ಕ್ರಾಂತಿಸಿರಿ ಪ್ರಕಾಶನ, ಬೆಂಗಳೂರು
2010

(8) ಕನ್ನಡ ಭಾಷೆಯ ಕಲ್ಪಿತ ಚರಿತ್ರೆ : ಡಿ.ಎನ್.ಶಂಕರಭಟ್
ಕನ್ನಡವಿಶ್ವವಿದ್ಯಾಲಯ,ಹಂಪಿ,
ವಿದ್ಯಾರಣ್ಯ1995

(9) ಕನ್ನಡ ಸಣ್ಣ ಕಥೆಗಳು : ಜಿ.ಎಚ್.ನಾಯಕ್
ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ
2017

(10) ವಿಮರ್ಶೆಯ ಪರಿಭಾಷೆ : ಓ.ಎಲ್.ನಾಗಭೂಷಣಸ್ವಾಮಿ
ಅಂಕಿತ ಪುಸ್ತಕ, ಬೆಂಗಳೂರು 1998

(11) ಬಾರಕ್ಕ ಬೆಳದಿಂಗಳೆ : ಕೇಶವರೆಡ್ಡಿ ಹಂದ್ರಾಳ
ಅಂಕಿತ ಪುಸ್ತಕ, ಬೆಂಗಳೂರು 2008

(12) ಮೋಡ ಕರಗುವ ಮುನ್ನ : ಕೇಶವರೆಡ್ಡಿ ಹಂದ್ರಾಳ
ಕ್ರಾಂತಿಸಿರಿ ಪ್ರಕಾಶನ, ಬೆಂಗಳೂರು

(13) ಆಯ್ದ ಕಥೆಗಳು : ಕಾಳೇಗೌಡ ನಾಗವಾರ
ಗೌತಮ್ ಪಬ್ಲಿಕೇಷನ್ಸ್, ಮೈಸೂರು
1987

(14) ಸಾಮಾನ್ಯ ಭಾಷಾ ವಿಜ್ಞಾನ : ಡಾ.ಕೆ.ಕೆಂಪೇಗೌಡ
ಪ್ರಸಾರಾಂಗ
ಮೈಸೂರು ವಿಶ್ವವಿದ್ಯಾಲಯ,
ಮೈಸೂರು, 1996

(15) ಕೃತಿ ಸಂಸ್ಕೃತಿ : ಎಂ.ಜಿ.ಕೃಷ್ಣಮೂರ್ತಿ
ಋಜುವಾತು ಪ್ರಕಾಶನ, ಮೈಸೂರು
1994

(16) ಅಲ್ಲಮನ ಆತ್ಮಲಿಂಗ : ಕೇಶವರೆಡ್ಡಿ ಹಂದ್ರಾಳ
ಸ್ವಪ್ನ ಬುಕ್ ಹೌಸ್, ಬೆಂಗಳೂರು
2014

(17) ಹಂದ್ರಾಳ : ಕೇಶವರೆಡ್ಡಿ ಹಂದ್ರಾಳ
ರಂಗನಿರಂತರ ಪ್ರಕಾಶನ,
ಬೆಂಗಳೂರು 1995

(18) ಕನ್ನಡ ಸಾಹಿತ್ಯ ಕೋಶ : ರಾಜಪ್ಪ ದಳವಾಯಿ
ಅವಿಸಂ, ಚಿಕ್ಕಮಗಳೂರು 1998

(19) ಒಂದು ಹಿಡಿ ಮಣ್ಣು : ಕೇಶವರೆಡ್ಡಿ ಹಂದ್ರಾಳ
ಕ್ರಾಂತಿಸಿರಿ ಪ್ರಕಾಶನ, ಬೆಂಗಳೂರು
2005

(20) ಹಾಲು ಕುಡಿಯದಿರು ಕಂದ : ಕೇಶವರೆಡ್ಡಿ ಹಂದ್ರಾಳ
ಸ್ವಪ್ನ ಬುಕ್ ಹೌಸ್, ಬೆಂಗಳೂರು
2011

(21) ಸಾತತ್ಯ : ಗಿರಡ್ಡಿ ಗೋವಿಂದರಾಜ
ಸ್ನೇಹ ಪ್ರಕಾಶನ, ಬೆಂಗಳೂರು
1992

(22) ಆಯ್ದ ಕವಿತೆಗಳು : ಡಾ.ಸಿದ್ದಲಿಂಗಯ್ಯ
ಕನ್ನಡ ಪುಸ್ತಕ ಪ್ರಾಧಿಕಾರ,
ಬೆಂಗಳೂರು, 1997

(23) ಒಕ್ಕಲ ಒನಪು : ಕೇಶವ ರೆಡ್ಡಿ ಹಂದ್ರಾಳ
ಸಾಧನ ಪಬ್ಲಿಕೇಷನ್, ಬೆಂಗಳೂರು
2016